ಭೋವಿ ಸಮುದಾಯದ ಆರ್ಥಿಕತೆ

(ಕೆ.ಸೂಗೂರು ಗ್ರಾಮ ಪಂಚಾಯಿತಿಯನ್ನು ಅನುಲಕ್ಷಿಸಿ)

(ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು

ದೇವೇಂದ್ರಪ್ಪ ಹೆಚ್.

ಂ.ಸಂ.: ೧೫೦೧೧೨೦೬೦೦೨೪

ಮಾರ್ಗದರ್ಶಕರು

ಡಾ. ಗಂಗಾಧರ ದೈವಜ್ಞ

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೬

ಭೋವಿ ಸಮುದಾಯದ ಆರ್ಥಿಕತೆ

(ಕೆ.ಸೂಗೂರು ಗ್ರಾಮ ಪಂಚಾಯಿತಿಯನ್ನು ಅನುಲಕ್ಷಿಸಿ)

(ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು

ದೇವೇಂದ್ರಪ್ಪ ಹೆಚ್.

ನೋಂ.ಸಂ.: ೧೫೦೧೧೨೦೩೦೦೨೪

ಮಾರ್ಗದರ್ಶಕರು

ಡಾ. ಗಂಗಾಧರ ದೈವಜ್ಞ

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೬

ಘೋಷಣಾ ಪತ್ರ

ಭೋವಿ ಸಮುದಾಯದ ಆರ್ಥಿಕತೆ (ಕೆ.ಸೂಗೂರು ಗ್ರಾಮ ಪಂಚಾಯಿತಿಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು **ಡಾ. ಗಂಗಾಧರ ದೈವಜ್ಞ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿ ಸಮಾಜ ವಿಜ್ಞಾನಗಳ ನಿಕಾಯದ **ಬುಡಕಟ್ಟು ಅಧ್ಯಯನ ವಿಭಾಗಕ್ಕೆ** ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ:

ಸ್ಥಳ: ವಿದ್ಯಾರಣ್ಯ

(ದೇವೇಂದ್ರಪ್ಪ ಹೆಚ್.)
ಸಂಶೋಧನ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಭೋವಿ ಸಮುದಾಯದ ಆರ್ಥಿಕತೆ (ಕೆ.ಸೂಗೂರು ಗ್ರಾಮ ಪಂಚಾಯಿತಿಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು **ದೇವೇಂದ್ರಪ್ಪ ಹೆಚ್**. ಅವರು ನನ್ನ ಮಾರ್ಗದರ್ಶನದಲ್ಲಿ ಎಂ.ಫಿಲ್. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ದಿನಾಂಕ:

ಸ್ಥಳ: ವಿದ್ಯಾರಣ್ಯ

ಡಾ. ಗಂಗಾಧರ ದೈವಜ್ಞ
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ ಒಂದು: ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ವಿಧಾನ ಮತ್ತು ಸಮೀಕ್ಷೆ / ೧

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ಮಹತ್ವ

೧.೪. ಸಂಶೋಧನಾ ವಿಧಾನಗಳು

೧.೫. ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಎರಡು: ಭೌಗೋಳಿಕ ಹಿನ್ನೆಲೆ ಮತ್ತು ಭೋವಿ ಸಮುದಾಯದ ಪ್ರಾಚೀನತೆ / ೧೦

೨.೧. ಭೌಗೋಳಿಕ ಹಿನ್ನೆಲೆ

೨.೨. ಭೋವಿ ಸಮುದಾಯದ ಐತಿಹಾಸಿಕ ಹಿನ್ನೆಲೆ

೨.೩. ಜನಸಂಖ್ಯೆ

ಅಧ್ಯಾಯ ಮೂರು: ಭೋವಿ ಸಮುದಾಯದ ಆರ್ಥಿಕ ಸ್ಥಿತಿಗತಿಗಳು / ೨೫

೩.೧. **ಪಾರಂಪರೀಕ ಕಸುಬುಗಳು**

೩.೧.೧. ಕಟ್ಟಡಗಳ ನಿರ್ಮಾಣ

೩.೧.೨. ಬೃಹತ್ ಗಾತ್ರದ ಕಲ್ಲು ಸೀಳುವುದು

೩.೧.೩. ಬಿಂಚೆ ಕುಟ್ಟುವುದು

೩.೧.೪. ಗೃಹೋಪಯೋಗಿ ಸಲಕರಣೆಗಳ ನಿರ್ಮಾಣ

೩.೧.೫. ಕೆರೆ, ಕಾಲುವೆಗಳ ನಿರ್ಮಾಣ

೩.೧.೬. ಮೂರ್ತಿಗಳ ನಿರ್ಮಾಣ

೩.೧.೭. ಗುತ್ತಿಗೆ ಹಿಡಿಯುವುದು

೩.೨. **ಉಪ ಕಸುಬುಗಳು**

೩.೨.೧. ಕೃಷಿ

೩.೨.೨. ವ್ಯಾಪಾರ

೩.೨.೩. ಪಶುಪಾಲನೆ

೩.೨.೪. ಕುರಿಸಾಕಾಣಿಕೆ

೩.೨.೫. ದಿನಗೂಲಿ

೩.೨.೬. ವಯಸ್ಸು ಮತ್ತು ದುಡಿಮೆ

೩.೨.೭. ಶಿಕ್ಷಣ ಪ್ರಮಾಣ

ಅಧ್ಯಾಯ ನಾಲ್ಕು: ಸರ್ಕಾರದ ಅಭಿವೃದ್ಧಿ ಯೋಜನೆಗಳು ಮತ್ತು ಭೋವಿ ಸಮುದಾಯ / ೫೦

ಕೃಷಿ, ಪಶುಪಾಲನೆ, ತೋಟಗಾರಿಕೆ, ಗ್ರಾಮೀಣ ಮತ್ತು ಸಣ್ಣಕೈಗಾರಿಕೆ, ವಸತಿ ಇಲಾಖಾ ಯೋಜನೆಗಳು, ಶೈಕ್ಷಣಿಕ ಪ್ರಗತಿಯೋಜನೆಗಳು, ಸಹಕಾರ ಇಲಾಖಾ ಯೋಜನೆಗಳು, ಪರಿಶಿಷ್ಟ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳು, ಸ್ವಯಂ ಉದ್ಯೋಗ ಯೋಜನೆ, ಗಂಗಾಕಲ್ಯಾಣ ಯೋಜನೆ

ಅಧ್ಯಾಯ ಐದು: ಸಮಾರೋಪ / ೭೫

ಅಧ್ಯಯನದ ಫಲಿತಗಳು

ಸಲಹೆಗಳು

ಅನುಬಂಧಗಳು / ೮೬

* ಪರಮರ್ಶನ ಗ್ರಂಥಗಳು
* ಮಾಹಿತಿದಾರರ ವಿವರಗಳು
* ಪ್ರಶ್ನಾವಳಿ
* ನಕ್ಷೆಗಳು
* ಛಾಯಾಚಿತ್ರಗಳು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ವಿಧಾನ ಮತ್ತು ಸಮೀಕ್ಷೆ

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ಮಹತ್ವ

೧.೪. ಸಂಶೋಧನಾ ವಿಧಾನಗಳು

೧.೫. ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ವಿಧಾನ ಮತ್ತು ಸಮೀಕ್ಷೆ

ಪ್ರಸ್ತಾವನೆ

ಕರ್ನಾಟಕದಲ್ಲಿ ವಾಸಿಸುತ್ತಿರುವ ಹಲವಾರು ಸಮುದಾಯಗಳಲ್ಲಿ ಭೋವಿ ಸಮುದಾಯವು ಒಂದು. ಈ ಸಮುದಾಯವನ್ನು ಕರ್ನಾಟಕದಲ್ಲಿ ವಡ್ಡರು ಅಥವಾ ಭೋವಿಗಳು ಎಂದು ಕರೆಯುವರು. ಈ ಸಮುದಾಯದಲ್ಲಿ ಅವರ ವೃತ್ತಿಯ ಆಧಾರದ ಮೇಲೆ ಮಣ್ಣು ವಡ್ಡರು, ಕಲ್ಲು ವಡ್ಡರು, ಬಂಡೆ ವಡ್ಡರು ಎಂದು ಗುರುತಿಸಿಕೊಂಡಿದ್ದಾರೆ. ಭೋವಿ ಸಮುದಾಯದವರು ಒರಿಸ್ಸಾದ ಮೂಲದವರಾಗಿದ್ದು. ಆಂಧ್ರಪ್ರದೇಶದ ಮೂಲಕ ಕರ್ನಾಟಕದಲ್ಲಿ ಬಂದು ನೆಲೆನಿಂತಿದ್ದಾರೆ ಎಂದು ಅಧ್ಯಯನಕಾರ ಡಾ.ಎನ್.ಬಿ.ಸಂಗಳದ ತಿಳಿಸಿದ್ದಾರೆ. ಜೀವನೋಪಾಯಕ್ಕಾಗಿ ವೃತ್ತಿಯನ್ನು ಆದರಿಸಿಕೊಂಡು ಊರಿಂದ ಊರಿಗೆ ಸಾಗುತ್ತಾ ಬಂದಂತಹ ಸಮುದಾಯ ಇದಾಗಿದೆ. ಕರ್ನಾಟಕದಲ್ಲಿ ಭೋವಿಗಳನ್ನು ಪರಿಶಿಷ್ಟ ಜಾತಿಯಲ್ಲಿ ಗುರುತಿಸಲಾಗಿದೆ. ಇವರ ಮಾತೃ ಭಾಷೆ ತೆಲುಗು, ಇವರು ಸಮಾಜದ ಹಲವಾರು ಸಮುದಾಯಗಳೊಂದಿಗೆ ಬೆರೆಯುವುದರಿಂದ ಕನ್ನಡ, ಹಿಂದಿ, ಮರಾಠಿ ಭಾಷೆಗಳನ್ನು ಮಾತನಾಡುತ್ತಾರೆ. ಭೋವಿ ಸಮುದಾಯದ ಜನರು ಗಟ್ಟಿ ಮುಟ್ಟಾದ ಮೈಕಟ್ಟು, ಕಪ್ಪನೆಯ ಮೈಬಣ್ಣ ಹೊಂದಿರುವರು.

"ಐತಿಹಾಸಿಕ ಕಾಲಘಟ್ಟವಾದ ನಾಗರಿಕತೆಗಳ ಬೆಳವಣಿಗೆಯಿಂದ ಸಾಮ್ರಾಜ್ಯಗಳ ಆಳ್ವಿಕೆಯ ಕಾಲದಲ್ಲಿ ಪಾರಂಪರಿಕ ವೃತ್ತಿಯನ್ನು ಅನುಸರಿಸಿ ಕೋಟೆಗಳು, ಉಗ್ರಾಣಗಳು, ರಸ್ತೆ, ಒಳಚರಂಡಿ, ಅರಮನೆಗಳು, ದೇವಾಲಯಗಳು, ಮೂರ್ತಿಗಳ ಕೆತ್ತನೆಯ ಮಾಡುತ್ತಾ ಸಮಾಜಕ್ಕೆ ವಿಶೇಷ ಕೊಡುಗೆ ನೀಡುತ್ತಾ ಬಂದಿದ್ದಾರೆ. ಇಂದಿಗೂ ಸಹ ಪ್ರಕೃತಿಯ ಸಂಪತ್ತನ್ನು ಬಳಸಿಕೊಂಡು ಬಿಸಿಲು ಬೆಂಕಿಯ ನಡುವೆ ಬೆಂದು ಬಂಡೆಗಳನ್ನು ಎಬ್ಬಿಸುತ್ತಾ, ಬೃಹತ್ತಾದ ಕಲ್ಲುಗಳನ್ನು ಸೀಳುತ್ತಾ, ಕೋರೆಗಳಲ್ಲಿ ಕೆಲಸ ನಿರ್ವಹಿಸುತ್ತಾ, ಬೆಂಚೆ ಕುಟ್ಟುತ್ತಾ ಜೀವನ ನಡೆಸುತ್ತಿದ್ದಾರೆ. ಜೀವನ ನಿರ್ವಹಣೆಗಾಗಿ ಎಷ್ಟೆ ಅಪಾಯಕಾರಿ ಕೆಲಸಗಳನ್ನು ಮಾಡಿದರೂ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದೆ ಸಮಾಜದಲ್ಲಿ ಹಲವು ಸಮುದಾಯಗಳ ತುಳಿತಕ್ಕೆ ಒಳಗಾಗಿರುವ ನಿದರ್ಶನಗಳಿವೆ. ಇಂತಹ ನೋವುಗಳನ್ನು ತಾಳಲಾರದೆ ಮತ್ತು ಮೈಕೈ ನೋವು ಮರೆಯಲು ಕುಡಿತದ ಬಲೆಗೆ ಬಿದ್ದು ದುಡಿದ ಅರ್ಧಹಣ ಕುಡಿತದ ಚಟಗಳಿಗೆ ಖರ್ಚುಮಾಡಿ ಸಂಸಾರವನ್ನು ಸಾಗಿಸಲು ಆಗದೆ ಇಂದಿಗೂ ಸಹ ಹಲವಾರು ಭೋವಿ ಕುಟುಂಬಗಳು ಬಡತನ, ನಿರುದ್ಯೋಗ, ಅನಕ್ಷರತೆಯಂತಹ ಸಮಸ್ಯೆಯನ್ನು ಎದುರಿಸುತ್ತಿವೆ."[1]

ಸರ್ಕಾರವು ಭೋವಿ (ವಡ್ಡರು) ಸಮುದಾಯವನ್ನು (ಎಸ್ಸಿ) ಪರಿಶಿಷ್ಟ ಜಾತಿಗೆ ಸೇರಿಸಿ ಹಲವಾರು ವರ್ಷಗಳು ಕಳೆದರೂ ಹಲವಾರು ಅಭಿವೃದ್ಧಿ ಯೋಜನೆಗಳು ಜಾರಿಗೆ ತಂದರೂ ಸಹ ಈ ಕುಟುಂಬಗಳು ಆರ್ಥಿಕವಾಗಿ ಅಭಿವೃದ್ಧಿ ಹೊಂದದೆ ಬಡತನದಿಂದ ಸ್ಲಂಗಳಲ್ಲಿ ಹಾಗೂ ಗುಡಿಸಲುಗಳಲ್ಲಿ ವಾಸಿಸುತ್ತಾ ಇದ್ದಾರೆ. ಜೀವನ ನಿರ್ವಹಣೆಗಾಗಿ ಇತ್ತೀಚೆಗೆ ಕೃಷಿ, ಕೃಷಿಕೂಲಿ, ದಿನಗೂಲಿ, ವ್ಯಾಪಾರ, ಪಶುಸಂಗೋಪನೆಯಂತಹ ಕೆಲಸಗಳನ್ನು ಮಾಡುತ್ತಾ ಜೀವನ ಮಾಡುತ್ತಾರೆ. ಕುಟುಂಬ ನಿರ್ವಹಣೆ ಮಾಡಿದ ಜನರು ತಮ್ಮ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸದೆ ಚಿಕ್ಕ ವಯಸ್ಸಿಗೆ ಪಾರಂಪರಿಕ ವೃತ್ತಿಗೆ ಒಲವು ತೋರಿಸಿ ಬಾಲಕಾರ್ಮಿಕರನ್ನಾಗಿಸಿರುವ ಸನ್ನಿವೇಶಗಳು ಸಹ ಕಂಡುಬರುತ್ತವೆ. ಚಿಕ್ಕ ವಯಸ್ಸಿಗೆ ವಿವಾಹ ಮಾಡಿ ಸಂಸಾರದ ಬಲೆಗೆ ನೂಕಿರುವ ಉದಾಹರಣೆಗಳಿವೆ.

ಖಾಸಗೀಕರಣ, ಕೈಗಾರೀಕರಣ, ಜಾಗತೀಕರಣಗಳ ಪ್ರಭಾವದಿಂದ ಗ್ರಾಮೀಣ ಗೃಹ ಕೈಗಾರಿಕೆಗಳು ಕಣ್ಮರೆಯಾಗುತ್ತಿವೆ. ಕೈಗಾರಿಕೆಗಳು ಉತ್ಪಾದನೆ ಮಾಡಿದ ಉತ್ಪನ್ನಗಳಿಗೆ ಸಮುದಾಯಗಳು ಮಾರು ಹೋಗುವುದರಿಂದ ಅವುಗಳನ್ನು ಯತೇಚ್ಚವಾಗಿ ಕೊಳ್ಳುವುದರಿಂದ ಕೈಯಿಂದ ತಯಾರಿಸಿದ ಉತ್ಪನ್ನಗಳಿಗೆ ಬೆಲೆ ಇಲ್ಲದಂತಾಗಿ ನಷ್ಟ ಅನುಭವಿಸುವಂತಾಗಿದೆ. ಇದರಿಂದ ಹಲವಾರು ಗ್ರಾಮೀಣ ವೃತ್ತಿಗಳು ಮರೆಯಾಗುತ್ತಿವೆ. ಗ್ರಾಮೀಣ ಕೈಗಾರಿಕೆಗಳಿಗೆ ಸರ್ಕಾರವು ಆಯವ್ಯಯ ಮಾಡುವ ಸಂದರ್ಭದಲ್ಲಿ ಕೋಟಿಗಟ್ಟಲೆ ಹಣ ಬಿಡುಗಡೆ ಮಾಡಿದರೂ ಹಣ ಗ್ರಾಮೀಣದ ಜನರಿಗೆ ತಲುಪುತ್ತಿಲ್ಲ. ಆದ್ದರಿಂದ ಭೋವಿ ಸಮುದಾಯವು ವೃತ್ತಿಯನ್ನು ಆಧರಿಸಿಕೊಂಡು ದುಡಿದು ಮಾಲೀಕರು ಕೊಟ್ಟಷ್ಟು ಹಣದಿಂದ ಜೀವನ ನಡೆಸುತ್ತಾರೆ. ಇಂತಹ ಸಂಕಷ್ಟ ಜೀವನ ನಡೆಸುವ ಕುಟುಂಬಗಳಿಗೆ ಸರ್ಕಾರದಿಂದ ಸೌಲಭ್ಯಗಳನ್ನು ಒದಗಿಸಿ ಸಮಾಜದಲ್ಲಿ ಸಮಾನ ಜೀವನ ನಡೆಸಲು ಸಹಕಾರ ಮಾಡುವುದು ಆಗಿದೆ.

ಅಧ್ಯಯನದ ಉದ್ದೇಶ

ಜಾಗತೀಕರಣ, ಖಾಸಗೀಕರಣ, ಕೈಗಾರೀಕರಣಗಳ ಪ್ರಭಾವದಿಂದ ಬದಲಾಗುತ್ತಿರುವ ಜಗತ್ತಿನಲ್ಲಿ ಭೋವಿ ಸಮುದಾಯದ ಹಲವು ಕುಟುಂಬಗಳು ಪಾರಂಪರಿಕ ವೃತ್ತಿಯನ್ನು ಅವಲಂಬಿಸಿಕೊಂಡು ಕಠಿಣವಾದ ಕೆಲಸಗಳನ್ನು ಮಾಡುತ್ತಾ ಜೀವಿಸುತ್ತಾರೆ. ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದೆ ಬಂಡವಾಳಶಾಹಿಗಳ ಹಾವಳಿಯಿಂದ ಪಶುಗಳಂತೆ ಅವರು ಹೇಳಿದ ಕೆಲಸಗಳನ್ನು ಮಾಡುತ್ತಾ ಗುಡಿಸಲುಗಳಲ್ಲಿ ಆಶ್ರಯ ಮನೆಗಳಲ್ಲಿ ಇದ್ದಾರೆ. ದೊಡ್ಡ ದೊಡ್ಡ ಕಟ್ಟಡಗಳು, ಸೇತುವೆಗಳು, ಕೋರೆಗಳಲ್ಲಿ ಕೆಲಸಮಾಡುವಾಗ ಅವರಿಗೆ ಒಂದು ದಿನದ ಆದಾಯ ಎಷ್ಟು, ಕರ್ಚು

ವೆಚ್ಚ ಎಷ್ಟು?, ಆರೋಗ್ಯ ಕೆಟ್ಟಾಗ ಆಸ್ಪತ್ರೆಗಳಲ್ಲಿ ಹಣಕಾಸಿನ ವ್ಯವಸ್ಥೆ ಹೇಗೆ ಮಾಡುತ್ತಾರೆ ಎಂಬುದನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

* ಭೋವಿ ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಪರಿಶೀಲಿಸುವುದು.
* ಭೋವಿ ಸಮುದಾಯ ಆರ್ಥಿಕ ಅಭಿವೃದ್ಧಿಗಾಗಿ ಸರ್ಕಾರವು ಕೈಗೊಂಡ ಯೋಜನೆಗಳನ್ನು ಪರಿಶೀಲಿಸುವುದು.
* ಭೋವಿ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳನ್ನು ಅಧ್ಯಯನ ನಡೆಸಿ ಪರಿಹಾರಗಳನ್ನು ಕಂಡುಕೊಳ್ಳುವುದು.
* ಪ್ರಸ್ತುತ ದಿನಮಾನಗಳಲ್ಲಿ ಈ ಭೋವಿ ಸಮುದಾಯದಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಗಮನಿಸಿ ದಾಖಲಿಸುವುದು.

ಭೋವಿ ಸಮುದಾಯಗಳ ಅಭಿವೃದ್ಧಿಗಾಗಿ ಸರ್ಕಾರವು ಹಲವಾರು ಯೋಜನೆಗಳನ್ನು ಕೈಗೊಂಡಿದೆ. ಆದರೂ ಸಹ ಈ ಸಮುದಾಯದ ಹಲವಾರು ಕುಟುಂಬಗಳು ಅಭಿವೃದ್ಧಿ ಹೊಂದಿಲ್ಲ. ಬಹುತೇಕ ಕುಟುಂಬಗಳು ಬಿಂಚೆ ಕಟ್ಟುತ್ತಾ, ಕೂಲಿ ಮಾಡುತ್ತಾ, ಭೂಮಿ ಇಲ್ಲದೇ ಪಾರಂಪರಿಕ ವೃತ್ತಿಯನ್ನು ಅವಲಂಬಿಸಲು ಕಾರಣವೇನು? ಎಂಬುದನ್ನು ತಿಳಿದುಕೊಂಡು ಅವರ ಸಮಸ್ಯೆಗೆ ಪರಿಹಾರ ಸೂಚಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಅಧ್ಯಯನದ ಮಹತ್ವ

ಒಡಿಸ್ಸಾದಿಂದ ಆಂಧ್ರಪ್ರದೇಶದ ಮೂಲಕ ಜೀವನ ನಿರ್ವಹಣೆಗಾಗಿ ವೃತ್ತಿಯನ್ನು ಆದರಿಸಿಕೊಂಡು ಕರ್ನಾಟಕಕ್ಕೆ ಬಂದ ಭೋವಿ ಸಮುದಾಯವು ಸಮಾಜದಲ್ಲಿ ಹಲವಾರು ಸಮುದಾಯಗಳು ವಾಸಿಸಲು ಅಚ್ಚುಕಟ್ಟಾದ ಮನೆಗಳನ್ನು ನಿರ್ಮಿಸಿಕೊಡುತ್ತಾರೆ. ಆದರೆ ಮನೆ ನಿರ್ಮಿಸಿದ ಭೋವಿ ಸಮುದಾಯವನ್ನು ಮನೆಯ ಒಳಗೆ ಪ್ರವೇಶ ಮಾಡಿಸುವುದಿಲ್ಲ. ದೇವಾಲಯಗಳನ್ನು ನಿರ್ಮಿಸುತ್ತಾರೆ. ದೇವರ ಮೂರ್ತಿ ಪ್ರತಿಷ್ಠಾಪನೆ ಮಾಡುವಾಗ ಪ್ರತಿಷ್ಠಾಪನೆ ಮಾಡಿದ ಮೇಲೆ ದೇವರ ಗರ್ಭಗುಡಿಯಲ್ಲಿ ಸೇರಿಸುವುದಿಲ್ಲ. ಕಟ್ಟಡಗಳ ನಿರ್ಮಾಣ ಮೂರ್ತಿಗಳ ಕೆತ್ತನೆ, ಮೂರ್ತಿಗಳ ಮಾಡುವಲ್ಲಿ ವಿಶೇಷವಾದ ಜ್ಞಾನ ಹೊಂದಿದವರಾಗಿದ್ದಾರೆ. ವೃತ್ತಿಯಲ್ಲಿ ಇಂತಹ ಪಾರಂಪರಿಕ ಜ್ಞಾನ ಹೊಂದಿದ ಈ ಸಮುದಾಯ ಆಧುನಿಕತೆಗೆ ಹೇಗೆ ಮುಖಾಮುಖಿಯಾಗುತ್ತಿದೆ? ಈ ಸಂದರ್ಭದಲ್ಲಿ ಅವರ ಆರ್ಥಿಕ ಸ್ಥಿತಿಗತಿಗಳು ಯಾವ ಬಗೆಯಲ್ಲಿ ನಡೆಯುತ್ತಿವೆ ಎಂಬುದನ್ನು ಕಂಡುಕೊಳ್ಳುವುದು ಹಾಗೂ ಸರ್ಕಾರವು ಭೋವಿ ಸಮುದಾಯದ ಅಭಿವೃದ್ಧಿಗೆ ಯಾವ ಯಾವ ಯೋಜನೆಗಳನ್ನು ಜಾರಿಗೆ ತಂದಿವೆ. ಅವು ಎಷ್ಟರಮಟ್ಟಿಗೆ ಅಭಿವೃದ್ಧಿ ಪಡಿಸಿವೆ ಎಂಬುದನ್ನು

ತಿಳಿಯುವುದಾಗಿದೆ. ಭೋವಿ ಸಮುದಾಯದವರು ಆರ್ಥಿಕ ಸ್ಥಿತಿಗತಿಗಳ ಮೂಲಕ ಅವರ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕವಾಗಿ ಮತ್ತು ಮುಖಂಡರು ಅವರ ಸಮುದಾಯದಲ್ಲಿ ಬಡತನದಿಂದ ಸಂಕಷ್ಟ ಜೀವನ ನಡೆಸುವ ಕುಟುಂಬಗಳನ್ನು ಎಷ್ಟು ಅಭಿವೃದ್ಧಿ ಪಡಿಸಿದ್ದಾರೆ ಎಂಬುದನ್ನು ನಾಗರಿಕ ಸಮಾಜಕ್ಕೆ ತಿಳಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

ಸಂಶೋಧನೆಯನ್ನು ಪರಿಪೂರ್ಣವಾಗಿ, ಸ್ಪಷ್ಟವಾಗಿ ಹಾಗೂ ವಸ್ತುನಿಷ್ಠವಾಗಿ ಅಂಕಿಸಂಖ್ಯೆಗಳ ಸಮೇತ ಎಲ್ಲಾ ವಿಷಯಗಳನ್ನು ಒಳಗೊಂಡಂತೆ ಸಂಶೋಧನಾ ಕಾರ್ಯ ಮಾಡಲು ಅಧ್ಯಯನಕ್ಕೆಂದು ನಿರ್ದಿಷ್ಟವಾದ ವ್ಯಾಪ್ತಿ, ಸರಹದ್ದು ಅತ್ಯಂತ ಅವಶ್ಯಕವಾಗಿದೆ. ಆಗ ಮಾತ್ರ ಆ ಒಂದು ಕ್ಷೇತ್ರದಲ್ಲಿ ಯಶಸ್ಸು ಸಾಧಿಸಬಹುದು. ಈ ದೃಷ್ಟಿಕೋನದಿಂದ ಅಧ್ಯಯನದ ವ್ಯಾಪ್ತಿಯು ಅತಿಮುಖ್ಯವಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಭೋವಿ ಸಮುದಾಯವನ್ನು ಆಯ್ಕೆ ಮಾಡಿಕೊಂಡು "ಭೋವಿ ಸಮುದಾಯದ ಆರ್ಥಿಕತೆ" (ಕೆ.ಸೂಗೂರು ಗ್ರಾಮಪಂಚಾಯ್ತಿಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆ ಅಡಿಯಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಭೋವಿ ಸಮುದಾಯದ ಕುಟುಂಬಗಳು ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಕೆ.ಸೂಗೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಮುದೆನೂರು, ಬೆಂಚೆಕ್ಯಾಂಪ್, ಕೆ.ಸೂಗೂರಿನಲ್ಲಿ ವಾಸಿಸುವ ಕುಟುಂಬಗಳನ್ನು ಸಂಶೋಧನೆಗೆ ಬಳಸಿಕೊಂಡು ಇವರ ಪಾರಂಪರಿಕ ವೃತ್ತಿ ಹಾಗೂ ಇತ್ತೀಚೆಗೆ ಬದಲಾವಣೆ ಹೊಂದಿದ ವೃತ್ತಿಗಳಾವು ಎಂಬುದನ್ನು ಒಳಗೊಂಡಂತೆ ಇವರ ಆರ್ಥಿಕ ಸ್ಥಿತಿಗತಿ ಹೇಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಈ ಅಧ್ಯಯನಕ್ಕಾಗಿ ಕೆ.ಸೊಗುರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಕೆ.ಸೂಗೂರು ಗ್ರಾಮದಲ್ಲಿಯ ೫೦ ಕುಟುಂಬಗಳು,ಮುದೆನೂರು ಗ್ರಾಮದಲ್ಲಿ ೩೪ ಕುಟುಂಬಗಳು ಹಾಗು ಬೆಂಚೆಕ್ಯಾಂಪುನಲ್ಲಿಯ ೬ ಕುಟುಂಬಗನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ವಿಧಾನಗಳು

"ಭೋವಿ ಸಮುದಾಯದ ಆರ್ಥಿಕತೆ" (ಕೆ.ಸೂಗೂರು ಗ್ರಾಮಪಂಚಾಯ್ತಿಯನ್ನು ಅನುಲಕ್ಷಿಸಿ) ಎಂಬ ಸಂಶೋಧನೆಗೆ ಪ್ರಾಥಮಿಕ ಮಾಹಿತಿಗಳನ್ನು ಕ್ಷೇತ್ರಕಾರ್ಯದಿಂದ ಪಡೆಯಲಾಗಿದೆ. ಪ್ರಾಥಮಿಕ ಮತ್ತು ದ್ವಿತೀಯ ಮಾಹಿತಿಯನ್ನು ಅಧ್ಯಯನದ ಸಂದರ್ಭದಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಎಂ.ಫಿಲ್. ಪ್ರೌಢ ಪ್ರಬಂಧ ಕಟ್ಟಿಕೊಡಲು ಬೇಕಾಗಿರುವ ಮಾಹಿತಿಗಳನ್ನು ಕೆಳಗಿನ ವಿಧಾನಗಳನ್ನು ಅನುಸರಿಸಿ ಮಾಹಿತಿದಾರರಿಂದ ವಿಷಯ ಸಂಗ್ರಹಿಸಿದ್ದೇನೆ.

ಪ್ರಶ್ನಾವಳಿ ವಿಧಾನ :

ಭೋವಿ ಸಮುದಾಯದ ಜೀವನ ಕ್ರಮ ಮತ್ತು ಅವರ ಆರ್ಥಿಕ ಸ್ಥಿತಿಗತಿಗಳನ್ನು ಹಾಗೂ ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಬದುಕನ್ನು ತಿಳಿದುಕೊಳ್ಳಲು ಭೋವಿ ಸಮುದಾಯದ ಪಾರಂಪರಿಕ ವೃತ್ತಿಯಾದ ಕಟ್ಟಡ ನಿರ್ಮಾಣ, ಇತ್ತೀಚಿನ ದಿನಗಳಲ್ಲಿ ಬದಲಾವಣೆಯಾದ ವೃತ್ತಿಗಳು ಯಾವು? ಅದರಿಂದ ಆದಾಯ ಎಷ್ಟು?, ನಷ್ಟ ಎಷ್ಟು? ಎಂಬುದನ್ನು ಕುರಿತ ಪ್ರಶ್ನೆಗಳನ್ನು ಸಿದ್ದಮಾಡಲಾಯಿತು. ಕ್ಷೇತ್ರಾಕಾರ್ಯದಲ್ಲಿ ಭೋವಿ ಸಮುದಾಯದ ಮುಖಂಡರು ನೀಡಿದ ಮಾಹಿತಿಯನ್ನು ಸಂಗ್ರಹಿಸಿಕೊಂಡು ಅದನ್ನು ಪ್ರಬಂಧ ರಚನೆಯ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿದೆ.

ಸಂದರ್ಶನ ವಿಧಾನ :

ಕ್ಷೇತ್ರಕಾರ್ಯದಲ್ಲ ಭೋವಿ ಸಮುದಾಯದ ಪ್ರಮುಖ ಮಹಿಳೆಯರು, ಪುರುಷರೊಂದಿಗೆ ಚರ್ಚೆ ಮಾಡಲಾಯಿತು. ಇಲ್ಲಿ ನಾವು ಕೇವಲ ಪ್ರಶ್ನೆ ಕೇಳುವವರಾಗಿ ವಕ್ತೃಗಳು ಮಾಹಿತಿ ನೀಡುವವರಾಗಿ ಇರಲಿಲ್ಲ ವಿಷಯದ ಬಗ್ಗೆ ದೀರ್ಘವಾದ ಚರ್ಚೆ ಮಾಡಲಾಯಿತು. ಪ್ರಮುಖ ವ್ಯಕ್ತಿಗಳ ಅಭಿಪ್ರಾಯಗಳನ್ನು ಹೊರಗೆ ಹಾಕಲು ಸಂದರ್ಶವು ಬಹಳ ಸಹಕಾರಿಯಾಯಿತು. ವಕ್ತೃಗಳಿಂದ ಬಂದ ಅಭಿಪ್ರಾಯಗಳನ್ನು ದೂರವಾಣಿ,ಆಡಿಯೊ, ವಿಡಿಯೋ ರೆಕಾರ್ಡ್ ಮಾಡಲಾಯಿತು. ಮತ್ತು ಮುಖ್ಯ ಅಂಶಗಳನ್ನು ಪುಸ್ತಕಗಳಲ್ಲಿ ದಾಖಲಿಸಲಾಯಿತು ಇದರಿಂದ ಭೋವಿಸಮುದಾಯದ ಜೀವನ ಕ್ರಮ ಹೇಗಿದೆ ಅವರ ಆರ್ಥಿಕ ಬದುಕು ಹೇಗೆ ನಡೆಯುತ್ತೆ ಮತ್ತು ಅವರ ಆಶೆ ಆಕಾಂಕ್ಷೆಗಳು, ವಿಚಾರಧಾರೆಗಳು ಏನೆಂಬುದು ಸ್ಪಷ್ಟವಾಗಿ ತಿಳಿದುಕೊಂಡು ಎಂ.ಫಿಲ್ ಪ್ರಬಂಧ ಸಿದ್ಧಮಾಡಲು ಸಹಕಾರಿಯಾಯಿತು.

ಮಾದರಿ ಸಮೀಕ್ಷೆ :

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಕೆ. ಸೂಗೂರು ಗ್ರಾಮ ಪಂಚಾಯ್ತಿಯ ವ್ಯಾಪ್ತಿಗೆ ಸೇರುವ ಕೆ. ಸೂಗೂರು, ಬೆಂಚೆಕ್ಯಾಂಪ್, ಮುದೆನೂರು ಎಂಬ ಹಳ್ಳಿಗಳಲ್ಲಿ ವಾಸಿಸುವ ನೂರು ಕುಟುಂಬಗಳಲ್ಲಿ ವಿವಿಧ ವೃತ್ತಿಯನ್ನು ಮಾಡುತ್ತಿರುವ ಕಟ್ಟಡ ನಿರ್ಮಾಣ ೮೨ ಜನ, ಜಲ್ಲಿ ಕುಟ್ಟುವುದು ೨೫, ಕಲ್ಲು ಸೀಳುವವರು ೨೧ ಜನ, ಕೃಷಿ ೨೧ ಜನ, ಕೃಷಿಕೂಲಿ ೨ ಜನ, ವ್ಯಾಪಾರ ೮ ಜನ, ಗುತ್ತಿಗೆ ಒಡಿಯುವವರು ೧೮ ಜನ, ಗೃಹಬಳಕೆಯ ವಸ್ತುಗಳ ನಿರ್ಮಾಣ ೧೦ ಜನ, ನೌಕರಿ ಮಾಡುವ ೩ ಜನ, ಪಶುಪಾಲನೆ ಮಾಡುವ ೧೫ ಜನರಂತೆ ಆಯ್ಕೆಮಾಡಿಕೊಂಡು ಸಂಶೋಧನೆ ವ್ಯಾಪ್ತಿಗೆ ಬಳಸಿಕೊಂಡಿದ್ದೇನೆ.

ಅವಲೋಕನ ವಿಧಾನ :

ಭೋವಿ ಸಮುದಾಯದ ಜನರ ಆರ್ಥಿಕ ಸ್ಥಿತಿಗತಿ ಹಾಗೂ ಸಾಮಾಜಿಕ ಬದುಕು, ಅವರ ದಿನನಿತ್ಯದ ಉತ್ಪಾದನೆ ಎಷ್ಟು?, ಎಷ್ಟುಗಂಟೆ ಕೆಲಸ ಮಾಡುತ್ತಾರೆ, ಒಂದು ದಿನಕ್ಕೆ ಎಷ್ಟು ರೂಪಾಯಿ ದುಡಿಯುತ್ತಾರೆ? ಎಷ್ಟು ರೂ ಖರ್ಚು ಮಾಡುತ್ತಾರೆ? ಮತ್ತು ಅವರ ಹವ್ಯಾಸಗಳೇನು ಎನ್ನುವುದನ್ನು ಅವಲೋಕನ ಮಾಡಲಾಗುತ್ತದೆ. ಭೋವಿ ಸಮುದಾಯವು ಸಮಾರಂಭಗಳಲ್ಲಿ, ಹಬ್ಬಗಳಲ್ಲಿ ಯಾವ ರೀತಿ ಉಡುಗೆ ತೊಡುಗೆ ಮಾಡಿಕೊಳ್ಳುತ್ತಾರೆ? ವ್ಯಾಪಾರ, ವ್ಯವಹಾರ ಹೇಗೆ ಮಾಡುತ್ತಾರೆ ತಮ್ಮ ಬದುಕಿನಲ್ಲಿ ಎದುರಾಗುವ ಸವಾಲುಗಳನ್ನು ಹೇಗೆ ಎದುರಿಸುತ್ತಾರೆ? ಎಂಬ ಹಲವಾರು ವಿಚಾರಗಳನ್ನು ಈ ವಿಧಾನದ ಮೂಲಕ ತಿಳಿದುಕೊಂಡು ಅಧ್ಯಯನದಲ್ಲಿ ಬಳಸಲಾಗಿದೆ.

ಸಹಭಾಗಿತ್ವ ವಿಧಾನ :

ಭೋವಿ ಸಮುದಾಯಗಳು ದಿನನಿತ್ಯ ಮಾಡುವ ಕೆಲಸಗಳಲ್ಲಿ ಕೋರೆಗಳಲ್ಲಿ ಬಂಡೆಸುಡುವ ಕೆಲಸದಲ್ಲಿ ಕಟ್ಟಡಗಳ ನಿರ್ಮಾಣದ ಸಂದರ್ಭದಲ್ಲಿ ಮದುವೆಗಳು, ಆಚರಣೆಗಳಲ್ಲಿ ಬಾಗಿಯಾಗಿ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಕೃಷಿ, ಕೃಷಿಕೂಲಿ, ವ್ಯಾಪಾರ, ಮುಂತಾದ ಕೆಲಸಗಳಲ್ಲಿ ಭಾಗಿಯಾಗಿ ಹೇಗೆ ಕಾರ್ಯನಿರ್ವಹಿಸುತ್ತಾರೆ ಎಂಬುದನ್ನು ಅನುಭವಿಸುವುದರ ಜೊತೆಗೆ ಮಾಹಿತಿ ಸಂಗ್ರಹಿಸಿದ್ದೇನೆ.

ಗುಂಪು ಚರ್ಚೆ :

ಭೋವಿ ಸಮುದಾಯದ ಹಲವಾರು ಕುಟುಂಬದ ವ್ಯಕ್ತಿಗಳನ್ನು ಗುಂಪಾಗಿ ಸೇರಿಸಿ ಅದರ ಸಾಮಾಜಿಕ ಆರ್ಥಿಕ ಜೀವನಕ್ಕೆ ಸರ್ಕಾರವು ಕೈಗೊಂಡಿರುವ ಯೋಜನೆಗಳಿಂದ ಎಷ್ಟು ಉಪಯೋಗವಾಗಿದೆ ಮತ್ತು ಎಷ್ಟು ಉಪಯೋಗವಾಗಿಲ್ಲ ಎಂದು ಚರ್ಚೆ ಮಾಡಲಾಯಿತು. ಸ್ವಾವಲಂಬಿ ವೃತ್ತಿಯಿಂದ ಆರ್ಥಿಕವಾಗಿ ಯಾವ ರೀತಿ ಬೆಳವಣಿಗೆ ಹೊಂದಿದ್ದೀರಿ ಹಾಗೂ ನಷ್ಟ ಅನುಭವಿಸಿದ್ದೀರಿ. ಕೈಗಾರೀಕರಣದ ಪ್ರಭಾವದಿಂದ ನಿಮ್ಮ ವೃತ್ತಿಗೆ ಆಗಿರುವ ಅನುಕೂಲ ಮತ್ತು ಅನಾನುಕೂಲಗಳೇನು ಎಂಬುವ ವಿಷಯಗಳನ್ನು ಚರ್ಚೆ ಮಾಡುತ್ತಾ ಇಂತಹ ವಿಷಯಗಳನ್ನು ಫೋನ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ಪ್ರಬಂಧದಲ್ಲಿ ವಿವರಿಸಲಾಗಿದೆ.

ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಬೆಟಗೇರಿ ವೈ.ವೈ., ವಡ್ಡರ ಪರಂಪರೆ. ೧೯೯೯. ಜೆ ಬಿ ಪಬ್ಲಿಕೇಶನ್ ಗದಗ ಎಂಬ ಕೃತಿಯಲ್ಲಿ ಕೋಟೆ. ತಳಪಾಯ. ಮನೆ ನಿರ್ಮಾಣ. ಮೂರ್ತಿ ಕೆತ್ತನೆ. ಕೆರೆ ನಿರ್ಮಾಣ.

ಬಾವಿತೆಗೆಯುವುದು, ಬಂಡೆಕಲ್ಲು ಸೀಳಿ ಜೀವನ ಮಾಡುವುದು, ಸೈಜುಕಲ್ಲು ಸೀಳುವುದರ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಆದರೆ ಆಹಾರಪದ್ಧತಿ, ದಿನದ ಆದಾಯ ಖರ್ಚುವೆಚ್ಚ ಕಂಡುಬಂದಿಲ್ಲ.

ಮುಂಬೈ ಕರ್ನಾಟಕ ಗೆಝೆಟಿಯರಲ್ಲಿ ಉಲ್ಲೇಖಿಸಿದಂತೆ:

ವಡ್ಡರ ಬಣ್ಣ, ಎತ್ತರ, ಮೂಗು, ತುಟಿ, ಕಣ್ಣು, ಕುತ್ತಿಗೆ, ರಾಜರು ಕೋಟೆಕಟ್ಟಲು ವಡ್ಡರನ್ನು ಕರೆಸುವುದು, ದೈಹಿಕ ರಚನೆ, ವೃತ್ತಿ ಕುರಿತು ವಿಶ್ಲೇಷಿಸಲಾಗಿದೆ. ಇತ್ತೀಚಿನ ದಿನಮಾನಗಳಲ್ಲಿ ಭೋವಿ ಸಮುದಾಯ ಬದಲಾವಣೆ ಹೊಂದುತ್ತಿರುವ ಬಗ್ಗೆ ಹಾಗೂ ಬದಲಾದ ವೃತ್ತಿಯ ಬಗ್ಗೆ ಮತ್ತು ಪಾರಂಪರೀಕ ವೃತ್ತಿಯಿಂದ ಬದಲಾವಣೆ ಹೊಂದಿ ಆಧುನಿಕತೆಗೆ ಹೇಗೆ ಹೊಂದಿಕೊಂಡು ಜೀವನ ನಡೆಸುತ್ತಿದ್ದಾರೆ ಎಂಬುದರ ಬಗ್ಗೆ ಕಂಡುಬಂದಿಲ್ಲ.

ಸ.ಚಿ. ರಮೇಶ್ ಸಂಪಾದಕತ್ವದ "ಅಲೆಮಾರಿಗಳ ಸ್ಥಿತಿಗತಿ" (ಪ್ರಸಾರಾಂಗ ಕವಿವಿ. ಹಂಪಿ) ಎಂಬ ಲೇಖನದಲ್ಲಿ ಭೋವಿ (ವಡ್ಡರು) ಸಮುದಾಯದ ಜನರು ಕರ್ನಾಟಕದಲ್ಲಿ ಮುಖ್ಯವಾದ ಅಲೆಮಾರಿ ಜನಾಂಗ. ಇವರು ಜೀವನ ನಿರ್ವಹಣೆಗಾಗಿ ವೃತ್ತಿಯನ್ನು ಆದರಿಸಿ ಊರಿಂದ ಊರಿಗೆ ಅಲೆಯುತ್ತಾರೆ. ಪರಿಸರ, ಆರ್ಥಿಕತೆ ಜನಸಂಖ್ಯಾ ಆಧಾರದಿಂದ ಭೋವಿ (ವಡ್ಡರು) ಸಮುದಾಯವು ಅಲೆಮಾರಿ, ಅರೆಅಲೆಮಾರಿ ಜನಾಂಗಗಳಂತೆ ಮೂರು ನೆಲೆಗಳಲ್ಲಿ ರೂಪ ಬದಲಾವಣೆ ಆಗುತ್ತಾ ಹೋಗುತ್ತಾರೆ ಎಂಬುದನ್ನು ಕುರಿತು ತಿಳಿಸಿದ್ದಾರೆ.

ಪ್ರಕಾಶ ಗ ಖಾಡೆ, 'ಮುನ್ನುಡಿ ತೋರಣ' ೨೦೦೮ರಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ "ಭೋವಿ ಜನಾಂಗದ ಹಾದಿಯ ಹೆಜ್ಜೆಗಳು" ಎಂಬ ಲೇಖನವು ಜನಾಂಗೀಯ ಅಧ್ಯಯನಕ್ಕೆ ಮಹತ್ವವನ್ನು ನೀಡಿ ಭೋವಿ ಜನಾಂಗದ ಹುಟ್ಟು ಮೂಲದ ಬಗ್ಗೆ ತಿಳಿಸಿದ್ದಾರೆ ಮತ್ತು ಶ್ರಮಶಕ್ತಿ ಬದುಕು ಹಾಗೂ ಗಟ್ಟಿ ಮುಟ್ಟಿನ ಬಗ್ಗೆ ವಿಮರ್ಶೆ ಮಾಡಿದ್ದಾರೆ. ಆದರೆ ಭೋವಿ (ವಡ್ಡರು, ವಡ್ಡ, ವೂಡ್ಡ, ಒಡ್ಡ) ಸಮುದಾಯದ ಆರ್ಥಿಕ ಅಭಿವೃದ್ಧಿ ಸಮಾಜದಲ್ಲಿಯ ಸ್ಥಾನಮಾನ, ಇತ್ತೀಚಿಗೆ ಬದಲಾವಣೆ ಹೊಂದಿದ ವೃತ್ತಿಗಳ ಬಗ್ಗೆ ಹಾಗೂ ಶಿಕ್ಷಣ, ಸರ್ಕಾರಿ ನೌಕರಿ ಬಗ್ಗೆ ಕಂಡುಬಂದಿಲ್ಲ.

೧) ಲಸ್ಕರಿ ಆರ್.ಎಸ್.ರವರ 'ಭೋವಿ ನಡೆದು ಬಂದ ದಾರಿ' (೧೯೯೩)

ಭೋವಿ ಸಮುದಾಯದ ಮೂಲ ವೃತ್ತಿ, ಸಾಮಾಜಿಕ ಸಂಘಟನೆ, ಭೋವಿಸಮುದಾಯದ ಒಳ ಬೆಡಗುಗಳು, ವೈವಾಹಿಕ ಸ್ಥಿತಿಗತಿ, ಧಾರ್ಮಿಕ ಸ್ಥಿತಿ ಆಚರಣೆಗಳನ್ನು ಕುರಿತು ವಿವರಿಸಿದ್ದಾರೆ. ಆದರೆ ಭೋವಿ ಸಮುದಾಯದ ಸಂಪೂರ್ಣ ಆರ್ಥಿಕಾಭಿವೃದ್ಧಿಯ ಕೊರತೆ ಹಾಗೂ ಸಂಪೂರ್ಣ ಮೂಲದ ಬಗ್ಗೆ ಕೊರತೆ ಕಂಡುಬರುತ್ತದೆ.

೨) ಕೆ.ಎಸ್. ಸಿಂಗ್‌ರವರ 'ಪೀಪಲ್ ಆಫ್ ಇಂಡಿಯ' (೧೯೯೩)

ಭೋವಿ ಅಥವಾ ವಡ್ಡಾ, ವಡ್ಡರ ಪ್ರಕಾರಗಳು, ವಿವಾಹ ಪದ್ಧತಿ ಆಚರಣೆಗಳನ್ನು ಕುರಿತು ವಿವರಿಸಿದ್ದಾರೆ. ಆದರೆ ಭೋವಿ ಸಮುದಾಯದ ಸಮಸ್ಯೆಗಳು, ಸವಾಲುಗಳು ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ವಿವರಣೆ ಕಂಡುಬರುವುದಿಲ್ಲ.

೩) ಡಿ. ಗಂಗಪ್ಪ ೧೯೯೯

ದೊರೆ ಅಶೋಕನು ಕೈಗೊಂಡ ಕಾಳಿಂಗ ಯುದ್ಧದಲ್ಲಿ ಅನೇಕ ಸಮುದಾಯದ ಜನರು ಭಾಗವಹಿಸಿ ಯುದ್ಧ ಗೆಲುವಿಗೆ ಕಾರಣರಾಗಿದ್ದು. ಇದರಲ್ಲಿ ವಡ್ಡರು (ಭೋವಿ) ಸಮುದಾಯವು ಭಾಗವಹಿಸಿದ್ದು ಕಳಿಂಗ ಯುದ್ಧದಲ್ಲಿ ಸಾವು ನೋವಿನ ಸಂಕಟ ತಾಳಲಾರದೆ ವಡ್ಡರು ಹಲವಾರು ರಾಜ್ಯಗಳಿಗೆ ವಲಸೆ ಹೋದರು ಎಂದು ತಿಳಿಸಿದ್ದಾರೆ ಹಾಗೂ ಸಾಮ್ರಾಜ್ಯದ ರಕ್ಷಣೆಗೆ ವರಟು ಕಲ್ಲುಗಳನ್ನು ಸೀಳಿ ಕೋಟೆಗಳನ್ನು ಕಟ್ಟುವಲ್ಲಿ ವಿಶೇಷ ಪರಿಣಿತಿ ಹೊಂದಿದ್ದರು ಎಂದು ತಿಳಿಸಿದ್ದಾರೆ.

ಎನ್.ಬಿ. ಸಂಗಳದ, ಭೋವಿ ಸಮುದಾಯದ ಸಾಮಾಜಿಕ ಅಧ್ಯಯನ, ೨೦೧೪, ಪ್ರಕಾಶಕರು, ಶಶಿ ಪ್ರಕಾಶನ, ಕರಿಯಮ್ಮ ಬಡಾವಣೆ, ಗದಗ.

ಭೋವಿ ಸಮುದಾಯದ ಸಾಮಾಜಿಕ, ಆರ್ಥಿಕ, ರಾಜಕೀಯ ಬದುಕು ಹಾಗೂ ಜೀವನಾವರ್ತಕ ಸಂಪ್ರದಾಯ ಮತ್ತು ಆಚರಣೆಗಳು, ಭಾಷೆ, ಸಾಹಿತ್ಯ, ಕಲೆ, ವಾಸ್ತುಶಿಲ್ಪ, ಸಂಘಟನೆ, ಸೌಲಭ್ಯ ಹಾಗೂ ಪರಿವರ್ತನೆ ಕುರಿತು ಅಧ್ಯಯನ ಮಾಡಿ ಪ್ರಕಟಿಸಿದ್ದಾರೆ.

ಗಂಗಾಧರಯ್ಯ, ಭೋವಿ ಸಮುದಾಯದ ಸಂಸ್ಕೃತಿ ಮತ್ತು ಕೊಡುಗೆಗಳು, ೨೦೦೭, ಪ್ರಕಾಶಕರು, ಶ್ರೀ ವಿ. ತಿಮ್ಮಪ್ಪನವರು, ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ಬಿಬಿಎಂಪಿ, ಬೆಂಗಳೂರು.

ವಡ್ಡರ ಮೂಲದ ಐತಿಹಾಸಿಕ ಕಥೆಗಳು, ಭೋವಿ ಅಥವಾ ವಡ್ಡ ಪದದ ಅರ್ಥ, ಸಂಪ್ರದಾಯಗಳು ಮತ್ತು ಆಚರಣೆಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ ಹಾಗೂ ಭೋವಿ ಜನಾಂಗದ ಆರ್ಥಿಕ ಕಸುಬುಗಳ ಬೆಳವಣಿಗೆಯ ಹಿನ್ನೆಲೆ ಮತ್ತು ವೃತ್ತಿಯ ಆದಾರದ ಮೇಲೆ ಭೋವಿ ಸಮುದಾಯದ ಜನರನ್ನು ಗುರುತಿಸಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಮಧ್ಯಕಾಲಿನ ಹಾಗೂ ಆಧುನಿಕ ಯುಗಗಳನ್ನು ಒಳಗೊಂಡಂತೆ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬದಲಾವಣೆ, ಸ್ವಾತಂತ್ರ್ಯ ಪೂರ್ವ, ಸ್ವಾತಂತ್ರ್ಯನಂತರದ ಇತಿಹಾಸದಲ್ಲಿ ಜನಾಂಗದ ಕೊಡುಗೆಗಳ ಬಗ್ಗೆ ವಿವರಿಸಿದ್ದಾರೆ. ಆದರೆ ಆಧುನಿಕ ಯುಗದಲ್ಲಿ ಭೋವಿ ಸಮುದಾಯದ ಆರ್ಥಿಕ ಅಭಿವೃದ್ಧಿ ಶಿಕ್ಷಣದ ಬೆಳವಣಿಗೆ ಮತ್ತು ಜಾರಿಯಲ್ಲಿರುವ ಸರ್ಕಾರಿ ಸೌಲಭ್ಯಗಳ ಉಪಯೋಗ ಎಷ್ಟು ಆಗಿದೆ ಎಂಬುದನ್ನು ಕುರಿತು ಅಧ್ಯಯನ ಮಾಡಬೇಕಾಗಿದೆ.

ಛಾಯಾ ಚಿತ್ರಗಳು :

ಭೋವಿ ಸಮುದಾಯದ ಮುಖಂಡರೊಡನೆ ಚರ್ಚೆ ಮಾಡುವ ಛಾಯಾ ಚಿತ್ರ. ಕಟ್ಟಡ ನಿರ್ಮಿಸುವಲ್ಲಿ ಮಾಹಿತಿ ಪಡೆಯುವ ಚಿತ್ರ, ಕೋರೆಗಳಲ್ಲಿ ಬಂಡೆಗಳನ್ನು ಎಬ್ಬಿಸುವಾಗಿನ ಚಿತ್ರಗಳು ಸರ್ಕಾರಿ ಉದ್ಯೋಗಿಗಳು, ಕೃಷಿ, ಕೃಷಿ ಕೂಲಿಗಳು ಹಾಗೂ ವಿವಿಧ ವೃತ್ತಿಯಲ್ಲಿ ತೊಡಗಿದ ಚಿತ್ರಗಳನ್ನು ಈ ಪ್ರಬಂಧದಲ್ಲಿ ನೀಡಲಾಗಿದೆ.

ಅಧ್ಯಾಯ ಎರಡು

ಭೌಗೋಳಿಕ ಹಿನ್ನೆಲೆ ಮತ್ತು ಭೋವಿ ಸಮುದಾಯದ ಪ್ರಾಚೀನತೆ

೨.೧. ಭೌಗೋಳಿಕ ಹಿನ್ನೆಲೆ

೨.೨. ಭೋವಿ ಸಮುದಾಯದ ಐತಿಹಾಸಿಕ ಹಿನ್ನೆಲೆ

೨.೩. ಜನಸಂಖ್ಯೆ

ಭೌಗೋಳಿಕ ಹಿನ್ನೆಲೆ ಮತ್ತು ಭೋವಿ ಸಮುದಾಯದ ಪ್ರಾಚೀನತೆ

೨.೧. ಭೌಗೋಳಿಕ ಹಿನ್ನೆಲೆ

ಕೋಟೆಹಾಳು ಸೂಗೂರು ಗ್ರಾಮವು ಸಿರುಗುಪ್ಪ ತಾಲ್ಲೂಕಿನಿಂದ ೧೪ ಕಿ.ಮೀ.ಗಳ ಅಂತರದಲ್ಲಿ ಆಗ್ನೇಯ ಭಾಗಕ್ಕೆ ವೇದಾವತಿ(ಹಗರಿ)ನದಿಯ ದಡದಂಚಿಗೆ ಇದೆ. ಕರ್ನಾಟಕದ ಗಡಿಭಾಗವಾದ ಕೋಟೆಹಾಳು ಸೂಗೂರು ಗ್ರಾಮದ ಪೂರ್ವಕ್ಕೆ ಆಂಧ್ರದ ಗೆಜ್ಜಳ್ಳಿ, ದಕ್ಷಿಣಕ್ಕೆ ಕಂಚಿಗೇರುಬೆಳಗಲ್ಲು, ಮುದೇನೂರು, ಈಶಾನ್ಯ ಭಾಗಕ್ಕೆ ಪೊಪ್ಪನಾಳು, ಪಶ್ಚಿಮಕ್ಕೆ ಅರಳಿಗನೂರು, ಸಿರುಗುಪ್ಪ ಮತ್ತು ಉತ್ತರಕ್ಕೆ ರಾರಾವಿ ಎಂಬ ಗ್ರಾಮಗಳಿವೆ.

ಕೋಟೆಹಾಳು ಸೂಗೂರು ಗ್ರಾಮವು ಪಂಚಾಯ್ತಿ ವ್ಯವಸ್ಥೆಯನ್ನು ಹೊಂದಿದ್ದು, ಈ ಪಂಚಾಯ್ತಿ ವ್ಯಾಪ್ತಿಗೆ ಕೊಟ್ಟಾಳು, ಬೆಂಚೆಕ್ಯಾಂಪ್, ಬಂಡ್ರಾಳು, ನೆಹರುನಗರ ಕ್ಯಾಂಪ್, ಮುದೆನೂರು, ಈರಾಳು ಎಂಬ ಹಳ್ಳಿಗಳು ಸೇರ್ಪಡೆಗೊಂಡಿವೆ.

"ಕೋಟೆಹಾಳು ಸೂಗೂರು ಎಂಬ ಹೆಸರು ಬರುವ ಪೂರ್ವದಲ್ಲಿ 'ಹೊನ್ನುಸಾಗರ' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಹೊನ್ನು ಎಂದರೆ ಸಂಪತ್ತು, ಸಾಗರ ಎಂದರೆ ಅಧಿಕ, ಅಪಾರ ಎಂದರ್ಥ. ಬಹಳ ಸಂಪತ್ತಿನಿಂದ ಕೂಡಿದ ಗ್ರಾಮವಾದ್ದರಿಂದ ಹೊನ್ನುಸಾಗರ ಎಂದು ಕರೆಯುತ್ತಿದ್ದರು. ವೇದಾವತಿ (ಹಗರಿ) ನದಿಯ ದಂಡೆಯ ಮೇಲೆ ಸ್ಥಾಪನೆಯಾಗಿದ್ದು ಊರಿನ ಸುತ್ತ ಅಚ್ಚುಕಟ್ಟಾದ ಕೋಟೆಯಿದ್ದು ಪೂರ್ವಕ್ಕೆ ಮುಖ್ಯ ದ್ವಾರ ಕೋಟೆಯ ಮೇಲೆ ಕಾವಲುಗಾರರು ಇದ್ದರು. ಈ ಕೋಟೆಯನ್ನು ರಾಣಿ ಠಂಗಮ್ಮ ಎಂಬ ಮಹಿಳೆ ಕಟ್ಟಿಸಿದ್ದಳು ಎಂದು ಊರಿನ ಹಿರಿಯ ವ್ಯಕ್ತಿಗಳು ಕ್ಷೇತ್ರಕಾರ್ಯಕೈಗೊಂಡಾಗ ತಿಳಿಸಿದರು. ಪಂಜುಗಳ್ಳರಿಂದ ಊರನ್ನು ರಕ್ಷಿಸಲು ಹಾಗೂ ವೇದಾವತಿ (ಹಗರಿ) ನದಿಯ ಅಪಾಯದಿಂದ ತಪ್ಪಿಸಲು ಈ ಕೋಟೆಯ ವ್ಯವಸ್ಥೆ ಮಾಡಿಸಿದ್ದಿರಬಹುದು. ಇಂದಿಗೂ ಸಹ ಕೋಟೆಯ ಕುರುಹು ಇದೆ, ವೀರಗಲ್ಲುಗಳು ಇವೆ, ಮಹಿಳೆ ಕುದುರೆಯ ಮೇಲೆ ಕುಳಿತು ಯುದ್ಧಮಾಡುವ ಸನ್ನಿವೇಶಗಳು ಇವೆ ಹಾಗೂ ಹಳೆಯ ಶಿವನ ದೇವಾಲಯ, ದೇವರಿಗೆ ಭೂಮಿ ದಾನವಾಗಿ ಕೊಟ್ಟ ಕಪ್ಪುಕಲ್ಲಿನ ನಿಲುವು ಶಾಸನವಿದೆ.

ರಾಣಿ ಠಂಗಮ್ಮನ ನಂತರ ಮುದುಕಪ್ಪ ಎಂಬ ಊರಿನ ನಾಯಕನು ಊರನ್ನು ಕಾಯುತ್ತಿದ್ದ, ಊರಿನ ಜನರಿಗೆ ಒಳ್ಳೆಯ ಕೆಲಸ ಕಾರ್ಯಗಳಿಗೆ ಮಾರ್ಗದರ್ಶನ ನೀಡುತ್ತಿದ್ದ. ಆದ್ದರಿಂದ ಹೊನ್ನುಸೂಗೂರು ಎಂದು ಕರೆಯುತ್ತಿದ್ದರು. ಸೂ ಎಂದರೆ ಒಳ್ಳೆಯ, ಗುರು ಎಂದರೆ ಮಾರ್ಗದರ್ಶಕರು ಎಂದು ಕರೆದರು. ನಂತರದ ದಿನಮಾನಗಳಲ್ಲಿ ವೇದಾವತಿ(ಹಗರಿ)ನದಿಯು

ದಂಡೆಯ ಮೇಲೆ ಈ ಗ್ರಾಮ ಇರುವುದರಿಂದ ಧಾರಾಕಾರ ಮಳೆಯಿಂದ ನದಿ ತುಂಬಿ ಕೋಟೆಯನ್ನು ನಾಶ ಮಾಡಿದೆ. ಊರಿನ ಜನರು ಆ ಸ್ಥಳವನ್ನು ಬಿಟ್ಟು ಪೂರ್ವಕ್ಕೆ ೧ ಕಿ.ಮೀ. ದೂರದಲ್ಲಿ ವಾಸವಾಗಿದ್ದಾರೆ. ಕೋಟೆಯು ನದಿಯ ನೀರಿನಿಂದ ನಾಶವಾಗಿರುವುದರಿಂದ ಕೋಟೆಹಾಳು ಸೂಗೂರು ಎಂಬ ಹೆಸರಿನಿಂದ ಕರೆಯುತ್ತಿದ್ದಾರೆ."[೧]

ಹೊನ್ನು ಸಾಗರ, ಹೊನ್ನು ಸೂಗುರು, ಕೋಟೆಹಾಳು ಸೂಗೂರು ಎಂಬ ನಾಮಾಂಕಿತ ಬಂದಿದೆ. ಇಂದಿಗೂ ಸಹ ಕೋಟೆಹಾಳು ಸೂಗೂರು ಎಂದು ಕರೆಯುತ್ತಾರೆ.

"ವೇದಾವತಿ ನದಿಯ ದಂಡೆಯ ಮೇಲಿರುವ ಗ್ರಾಮ ಕಂಚುಗಾರ ಬೆಳಗಲು ಇದು ಚಾಲುಕ್ಯರ ಮುಖ್ಯ ಕೇಂದ್ರವಾಗಿದ್ದು ಕೋಟೆಹಾಳು ಸೂಗೂರಿನಿಂದ ಈಶಾನ್ಯ ಭಾಗಕ್ಕೆ ೮ ಕಿ. ಮೀ. ಅಂತರದಲ್ಲಿದೆ. ಕ್ರಿ.ಶ. ೯೮೧ ರ ಚಾಲುಕ್ಯ ಅರಸ ಆಹವಮಲ್ಲ ದೇವನ ಆಳ್ವಿಕೆಗೆ ಒಳಪಟ್ಟಿರುವುದು ಕ್ರಿ.ಶ. ೧೭೧೭ ರ ಬೋಗೇಶ್ವರನ ಗುಡಿಯ ಶಾಸನದಲ್ಲಿ ಉಲ್ಲೇಖವಾಗಿದೆ. ಹಾಗೂ ಕೋಟೆ ಹಾಳು ಸೂಗೂರಿನಿಂದ ಉತ್ತರಕ್ಕೆ ೪ ಕಿ.ಮೀ. ಅಂತರದಲ್ಲಿರುವ ರಾರಾವಿಯು ಸಹ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿದ್ದು ಚಾಲುಕ್ಯರ ಆಳ್ವಿಕೆಯಲ್ಲಿ ಮುಖ್ಯ ಕೇಂದ್ರಗಳಾಗಿದ್ದವೆಂದು ಕಂಡುಬರುತ್ತದೆ. ಆದರೆ ಕೋಟೆಹಾಳು ಸೂಗೂರು ಸಹ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿರಬಹುದೆಂದು ಹೇಳಬಹುದು".[೨]

"ವೇದಾವತಿ ನದಿ ಹಾಗೂ ಕರ್ನಾಟಕದ ಗಡಿಭಾಗವಾದ ಕೋಟೆಹಾಳು ಸೂಗೂರು ಗ್ರಾಮ ಭೌಗೋಳಿಕವಾಗಿ ಸಮುದ್ರ ಮಟ್ಟದಿಂದ ೪೮೦.ಮೀ. ಎತ್ತರದಲ್ಲಿ ಇದೆ. ಉತ್ತರ ಅಕ್ಷಾಂಶ ೧೫°೩೫ ಮತ್ತು ಪೂರ್ವ ರೇಖಾಂಶ ೭೬°೫೭ ರಷ್ಟಿದ್ದು ಸರಾಸರಿ ವಾರ್ಷಿಕ ಮಳೆಯ ಪ್ರಮಾಣ ೬೪೫ ಮಿಲಿ ಮೀ. ನಷ್ಟು ಮಳೆ ಬೀಳುತ್ತದೆ".[೩] ವಿಶಾಲವಾದ ಭೂ ಪ್ರದೇಶವನ್ನು ಹೊಂದಿದ್ದು, ಬಿತ್ತನೆಗೆ ಯೋಗ್ಯವಾದ ಫಲವತ್ತಾದ ಕಪ್ಪು ಮಣ್ಣು ಹೊಂದಿದೆ. ವೇದಾವತಿ ನದಿಯ ನೀರಿನ ಸೌಲಭ್ಯ ಹಾಗೂ ತುಂಗಭದ್ರ ಬಲದಂಡೆಯ ಕಾಲುವೆಯ ನೀರಿನ ಸೌಲಭ್ಯವಿದೆ. "ಭೌಗೋಳಿಕ ವಿಸ್ತೀರ್ಣ ೧೩೩೪.೫೧ ಹೆಕ್ಟೇರ್ ಭೂಮಿ ಇದ್ದು ಸಾಗುವಳಿ ಯೋಗ್ಯ ವಿಸ್ತೀರ್ಣ ಭೂಮಿ ೧೨೪೧.೫೧ ಹೆಕ್ಟೇರ್. ಕೃಷಿ ಯೋಗ್ಯವಲ್ಲದ ಭೂಮಿ ೯೩.೦೦ ಹೆಕ್ಟೇರ್. ಕೃಷಿ ಕ್ಷೇತ್ರ ೮೭೪.೨೫ ಹೆಕ್ಟೇರ್ ಇದೆ ಕೋಟೆಹಾಳ್ ಸೂಗೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಬರುವ ಒಟ್ಟು ಹಳ್ಳಿಗಳ ಭೂಮಿ ೨೦೦೭.೩೯ ಹೆಕ್ಟೇರ್‌ಗಳನ್ನು ಹೊಂದಿದ".[೪] ಸಮತಟ್ಟಾದ ಭೂಮಿಯನ್ನು ಹೊಂದಿದ್ದು ಈ ಭೂಮಿಯಲ್ಲಿ ಹತ್ತಿ, ಭತ್ತ, ಸಜ್ಜೆ, ಜೋಳ, ಸೂರ್ಯಕಾಂತಿ, ದವಸ ಧಾನ್ಯಗಳನ್ನು ಬೆಳೆಯುತ್ತಿದ್ದು ಅದರಲ್ಲಿ ಅತಿಹೆಚ್ಚಾಗಿ ಭತ್ತ, ಹತ್ತಿ, ಮತ್ತು ಬೀಜದ ಜೋಳ ಬೆಳೆಯುತ್ತಾರೆ. ಬೆಳೆದ ಬೆಳೆಗಳನ್ನು ಮಾರಾಟ ಮಾಡಲು ೨೫ ಕಿ.ಮೀ. ಅಂತರದಲ್ಲಿ ಆದವಾನಿ (ಆಂಧ್ರ ಪ್ರದೇಶ) ಮಾರುಕಟ್ಟೆ ಅತಿ ಪ್ರಸಿದ್ಧಿಯನ್ನು ಹೊಂದಿದೆ. ೧೪

ಕಿ.ಮೀ. ಅಂತರದಲ್ಲಿ ಸಿರುಗುಪ್ಪ ಮತ್ತು ೫೫ ಕಿ.ಮಿ ಅಂತರದಲ್ಲಿ ಬಳ್ಳಾರಿಯು (ಕರ್ನಾಟಕ) ಪ್ರದೇಶಗಳು ವ್ಯಾಪಾರದ ಕೇಂದ್ರಗಳಾಗಿವೆ.

ಕೋಟೆಹಾಳು ಸೂಗೂರು ಗ್ರಾಮಪಂಚಾಯತಿ ವ್ಯವಸ್ಥೆ ಹೊಂದಿದ್ದು ಪಂಚಾಯತಿ ವ್ಯಾಪ್ತಿಗೆ ಪೂರ್ವಕ್ಕೆ ೧. ಕಿ.ಮೀ ಅಂತರದಲ್ಲಿ ಬೆಂಚೆಕ್ಯಾಂಪ್ ಮತ್ತು ೩ ಕಿ.ಮೀ ಅಂತರದಲ್ಲಿ ಪೂರ್ವಕ್ಕೆ ನೆಹರುನಗರ ಕ್ಯಾಂಪ್ ಹಾಗೂ ೪ ಕಿ.ಮೀ. ಅಂತರ ಬಂಡ್ರಾಳು ಎಂಬ ಹಳ್ಳಿಗಳಿವೆ. ದಕ್ಷಿಣ ಭಾಗಕ್ಕೆ ೩ ಕಿ.ಮೀ ಅಂತರದಲ್ಲಿ ಈರಾಳು, ೬ ಕಿ.ಮೀ. ಅಂತರದಲ್ಲಿ ಮುದೆನೂರು ಎಂಬ ಹಳ್ಳಿಗಳಿವೆ. ಉತ್ತರಕ್ಕೆ ೧ ಕಿ.ಮೀ ಕೊಟ್ಟಾಲ್ ಎಂಬ ಹಳ್ಳಿ ಇದ್ದು ಇಡೀ ಎಲ್ಲಾ ಹಳ್ಳಿಗಳ ನಡುವೆ ಕೋಟೆಹಾಳು ಸೂಗೂರು ಎಂಬ ಗ್ರಾಮ ಇರುವುದರಿಂದ ಪಂಚಾಯತಿ ವ್ಯವಸ್ಥೆಗೆ ಮಾನ್ಯತೆ ಕೊಡಲಾಗಿದೆ. ಪ್ರತಿ ಹಳ್ಳಿಗೆ ಒಂದರಂತೆ ಒಂಬತ್ತು ಅಂಗನವಾಡಿ ಕೇಂದ್ರಗಳಿವೆ, ಒಂಬತ್ತು ಪ್ರಾಥಮಿಕ ಶಾಲೆಗಳಿವೆ, ಅದರಲ್ಲಿ ಮೂರು ಮಾಧ್ಯಮಿಕ ಶಾಲೆಗಳು, ಒಂದು ಪೋಸ್ಟ್ ಆಫೀಸ್ ಇದೆ, ೪ ಹಾಲಿನ ಸಂಗ್ರಹಕ ಘಟಕಗಳಿವೆ, ೪ ನ್ಯಾಯಬೆಲೆ ಅಂಗಡಿಗಳು, ಪ್ರತಿಹಳ್ಳಿಗೊಂದು ಪ್ರಾಥಮಿಕ ಆರೋಗ್ಯಕೇಂದ್ರಗಳಿವೆ, ೭ ಹಳ್ಳಿಗಳು ಕೋಟೆಹಾಳುಸೂಗೂರು ಗ್ರಾಮಪಂಚಾಯತಿಗೆ ಸೇರಿದ್ದು ಸಿರುಗುಪ್ಪ ತಾಲ್ಲೂಕು ಪಂಚಾಯತಿ ಆಡಳಿತಕ್ಕೊಳಪಟ್ಟಿದೆ.

೨.೨ ಭೋವಿ ಸಮುದಾಯದ ಐತಿಹಾಸಿಕ ಹಿನ್ನಲೆ

ಯಾವುದೇ ಒಂದು ಸಮುದಾಯವು ತನ್ನನ್ನು ತಾನು ಗುರುತಿಸಿಕೊಳ್ಳಲು ಮುಖ್ಯವಾಗಿ ತಾನು ಮಾಡುವ ವೃತ್ತಿಯಿಂದ ಪುರಾತನ ಕಾಲದಿಂದಲೂ ಗುರುತಿಸಿಕೊಂಡು ಬಂದಿರುತ್ತದೆ, ಹಾಗೂ ತನ್ನದೇ ಆದ ಐತಿಹಾಸಿಕ ಹಿನ್ನೆಲೆಯನ್ನು ಒಳಗೊಂಡಿರುತ್ತದೆ. ಸಮಾಜದ ವಿವಿಧ ಸ್ಥಿತಿಗತಿಗಳು ವೃತ್ತಿಗಳನ್ನು ಆಧರಿಸಿ ಅವು ಜಾತಿಗಳಾಗಿ ಪರಿವರ್ತನೆ ಹೊಂದಿದವು. ಭಾರತೀಯ ಸಮಾಜದಲ್ಲಿ ಹಲವಾರು ಸಮುದಾಯಗಳು ತಮ್ಮ ತಮ್ಮ ವೃತ್ತಿಗಳಿಂದ ಆಚಾರ, ವಿಚಾರಗಳಿಂದ ಹಾಗೂ ಸೇವೆಗಳಿಂದ ಗುರುತಿಸಿಕೊಂಡಿವೆ ಅದರಲ್ಲಿ ಭೋವಿ(ವಡ್ಡರು) ಸಮುದಾಯವು ಸಹ ಒಂದು ಎಂದು ಹೇಳಬಹುದು.

ಭೋವಿ(ವಡ್ಡ)ರ ಸಮುದಾಯದ ಜನರು ಕಲ್ಲು, ಬಂಡೆ, ಮಣ್ಣಿನ ಕೆಲಸಗಳನ್ನು ಮಾಡುತ್ತ ಮೇಲೆ ಬಿಸಿಲು ಕೆಳಗೆ ಬೆಂಕಿ ಇವೆರಡರ ಮಧ್ಯೆ ಬೆಂದು ಬಂಡೆಗಳನ್ನು ಎಬ್ಬಿಸುತ್ತಾ ಜೀವನ ನಡೆಸುವವರು ಆಗಿದ್ದಾರೆ.

"ಈ ಸಮುದಾಯದ ಜನರು ಕಟ್ಟಡಗಳನ್ನು ಕಟ್ಟುವುದರಲ್ಲಿ ಬಂಡೆ, ಕಲ್ಲುಗಳನ್ನು ಸೀಳುವುದರಲ್ಲಿ ವಿಶೇಷ ಜ್ಞಾನ ಹೊಂದಿದ್ದಾರೆ ಹಾಗೂ ಬೃಹತ್ತಾದ ಆಣೆಕಟ್ಟುಗಳು, ಕೆರೆ, ಕಾಲುವೆಗಳು, ಗೃಹೋಪಯೋಗಿ ಸಲಕರಣೆಗಳಾದ ಒರಳುಕಲ್ಲು, ಬೀಸುವ ಕಲ್ಲು, ರುಬ್ಬುವಗುಂಡು

ಹಾಗೂ ಶಿಲ್ಪಗಳ ಕೆತ್ತನೆಯಂತ ಕೆಲಸಗಳನ್ನು ಮಾಡಿ ಸಮಾಜದ ಹಲವಾರು ಸಮುದಾಯಗಳಿಗೆ ವಿಶೇಷವಾದ ಕೊಡುಗೆಗಳನ್ನು ನೀಡಿದ್ದಾರೆ ಹಾಗೂ ಭೋವಿ (ವಡ್ಡರು) ಸಮುದಾಯವು ಮೂಲತಃ ಒಡಿಸ್ಸಾ(ಒರಿಸ್ಸಾ)ದಿಂದ ಜೀವನ ನಿರ್ವಹಣೆಗಾಗಿ ವೃತ್ತಿಯನ್ನು ಬಯಸಿ ವಲಸೆ ಬಂದಂತಹ ಸಮುದಾಯವಾಗಿದೆ".[೫]

"ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಭೋವಿ ಪದವನ್ನು ಒಡ್ಡ, ಕಲ್ಲು, ಮಣ್ಣಿನ ಕೆಲಸ ಮಾಡುವವನು, ಒರಟು ಕೆಲಸ ಮಾಡುವವನು, ಕಠಿಣ ಕೆಲಸ ಮಾಡುವವನು ಒಡ್ರ ಓರಿಸ್ಸಾದವನು ಎಂದು ವಿವರಿಸಲಾಗಿದೆ".[೬]

ಭೋವಿ- ಒಡ್ಡ, ವಡ್ಡ, ವಡ್ಡರು, ವಡ್ರು ಎಂಬ ಪದಗಳು ಸಮಾನ ಅರ್ಥವನ್ನು ಪಡೆದ ಒಂದೇ ಜನಸಮುದಾಯದ ಹೆಸರುಗಳಾಗಿವೆ. ಈ ಸಮುದಾಯದಲ್ಲಿ ಜಾತಿಯ ಪದಗಳು ಬೇರೆ ಬೇರೆ ಕರೆದರೂ ಆಚಾರ, ವಿಚಾರ, ಸಂಪ್ರದಾಯ ಒಂದೇಯಾಗಿದ್ದು ವೈವಾಹಿಕ ಸಂಬಂಧಗಳು ನಡೆಯುತ್ತವೆ. "ಭೋವಿ ಸಮುದಾಯವನ್ನು ಮೊದಲು ವಡ್ಡ-ವಡ್ಡರು ಎಂದು ಕರೆಯುತ್ತಿದ್ದರು. ಆದರೆ! ೧೯೪೪ರಲ್ಲಿ ಮೈಸೂರು ರಾಜ್ಯದ ಭೋವಿ ಸಮುದಾಯದ ಪ್ರಥಮ ಪರಿಷತ್ತಿನಲ್ಲಿ ವಡ್ಡರನ್ನು ಭೋವಿಗಳೆಂದು ಕರೆಯಬೇಕೆಂದು ಆದೇಶ ಪಾಸು ಮಾಡಲಾಯಿತು. ಪರಿಣಾಮವಾಗಿ ೧೯೪೬ರಲ್ಲಿ ಮೈಸೂರು ಸರ್ಕಾರ ತನ್ನ ಎಲ್ಲಾ ಪ್ರಕಟಣೆಗಳಲ್ಲಿ ವಡ್ಡರ ಬದಲಾಗಿ 'ಭೋವಿ' ಎಂದು ಕರೆಯಲಾರಂಭಿಸಿತು".[೭]

ಭೋವಿ ಸಮುದಾಯದ ಜನರು ಓಡಿಸ್ಸಾದಿಂದ ಆಂಧ್ರ ಪ್ರದೇಶಕ್ಕೆ ವಲಸೆ ಬಂದು ನೆಲೆಸಿ ನಂತರ ಕರ್ನಾಟಕಕ್ಕೆ ಬಂದಿದ್ದಾರೆ. ಏಕೆಂದರೆ ಕರ್ನಾಟಕದಲ್ಲಿರುವ ಎಲ್ಲಾ ಭೋವಿ ಸಮುದಾಯದ ಜನರು ಜಾಸ್ತಿ ತೆಲುಗು ಮಾತನಾಡುತ್ತಾರೆ ಮತ್ತು ಆಂಧ್ರದಲ್ಲಿ ವೈವಾಹಿಕ ಸಂಬಂದವನ್ನು ಬೆಳೆಸಿದ್ದಾರೆ. ಇದನ್ನು ಗಮನಿಸಿದರೆ ಭೋವಿ ಸಮುದಾಯ ಆಂಧ್ರದ ಮೂಲಕ ಕರ್ನಾಟಕಕ್ಕೆ ವಲಸೆ ಬಂದಿದೆ ಎಂಬುದು ತಿಳಿದುಬರುತ್ತದೆ.

ಕೋಟೆಹಾಳು ಸೂಗೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಭೋವಿ ಸಮುದಾಯದ ಜನರನ್ನು ಕಾರ್ಯ ಕ್ಷೇತ್ರದಲ್ಲಿ ಭೇಟಿ ಮಾಡಿ ತಮ್ಮ ಮೂಲದ ಬಗ್ಗೆ ಕೇಳಿದರೆ "ಆ ಜನರು ತಮ್ಮ ಪೂರ್ವಜರು ಆದ ತಿಪ್ಪಮ್ಮ ಅವ್ವ ಪತ್ತಿಕೊಂಡ ಇದು ಆಂಧ್ರ ಪ್ರದೇಶದಿಂದ ಜೀವನ ಮಾಡಲು ಕಲ್ಲು ಕೆಲಸ, ಗೋಡೆ ಕಟ್ಟುವ ಕೆಲಸವನ್ನು ಮಾಡಿಕೊಂಡು ಕೋಟೆಹಾಳು ಸೂಗೂರಿಗೆ ಬಂದರು ಈ ಊರಿನಲ್ಲಿ ಗೋಡೆ ಕಟ್ಟುವ ವೃತ್ತಿಯನ್ನು ಮಾಡುತ್ತಾ ಕೋಟೆಹಾಳು ಸೂಗೂರಿನಲ್ಲಿ ವಾಸವಾಗಿದ್ದೇವೆಂದು ತಿಳಿಸಿದರು".[೮] ಕರ್ನಾಟಕದಲ್ಲಿ ಭೋವಿ ಸಮುದಾಯದವರನ್ನು ವೃತ್ತಿಯ ಆಧಾರದ ಮೇಲೆ ಗುರುತಿಸಿದ್ದಾರೆ. ಆ ಸಮುದಾಯಗಳು ಕಲ್ಲುವಡ್ಡರು, ಮಣ್ಣುವಡ್ಡರು, ಬಂಡಿ

ವಡ್ಡರು, ಗುಡಿವಡ್ಡರು, ಶಿಲ್ಪಿವಡ್ಡರೆಂದು ಕರೆಯಲಾಯಿತು. "ಈ ಭೋವಿ ಸಮುದಾಯವನ್ನು ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಿದ್ದಾರೆ. ಆಂಧ್ರದಲ್ಲಿ ವಡ್ಡಲು, ವಡ್ಡೊಳ್ಳು, ವೊಡ್ಡಾಲು, ತಮಿಳುನಾಡಿನಲ್ಲಿ ಒಟ್ಟಾನ್, ನಾಯಕನ್, ಮಧ್ಯಪ್ರದೇಶದಲ್ಲಿ ಓಡ, ಓಡಿಯಾ, ಓರಿಸ್ಸಾದಲ್ಲಿ ಓಡ, ಓಡಿಯಾ, ಓಡೆ, ವಾಡ್ರಾ, ವಾಡಿಯಾ ಎಂದು ವಿವಿಧ ಹೆಸರುಗಳಿಂದ ಕರೆಯುತ್ತಾರೆ.[೮] ಭೋವಿ ಸಮುದಾಯದ ಮೂಲ ಕ್ರಿ. ಪೂ.ದಿಂದಲೂ ಬೆಳಕಿನಲ್ಲಿತ್ತು ಎಂದು ಹರಪ್ಪ ಅಥವಾ ಸಿಂಧೂ ಸಂಸ್ಕೃತಿಯ ಜನರು ಬಳಸುತ್ತಿದ್ದ ಆಭರಣಗಳು, ತೋಳು ಬಂಧಿಗಳು, ಕಡಗಗಳು, ಬೆರಳಿನ ಉಂಗುರಗಳು, ಜೇಡಿಮಣ್ಣು, ಚಿಪ್ಪುಕಲ್ಲು, ಪಿಂಗಾಣಿ, ತಾಮ್ರ, ಬೆಳ್ಳಿ, ಹಾಲುಗಲ್ಲು, ಅಮೃತಶಿಲೆ ಇವುಗಳಿಂದ ನಿರ್ಮಿತವಾಗಿದ್ದು ಅದೇ ಮಾಧರಿಯ ವಸ್ತುಗಳನ್ನು ಭೋವಿ ಸಮುದಾಯದ ಭೋವಿ ಸಮುದಾಯದ ಜನರು ಬಳಸುತ್ತಿದ್ದರು. ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದರೆ ಭೋವಿ ಸಮುದಾಯವು ಸಮಾಜಕ್ಕೆ ಉತ್ತಮ ಕೊಡುಗೆ ಕೊಡುವುದರಲ್ಲಿ ಪುರಾತನ ಕಾಲದಿಂದಲೂ ಇದ್ದು ಭೋವಿ ಸಮುದಾಯವು ಹರಪ್ಪ ಮತ್ತು ಸಿಂಧೂ ಬಯಲಿನ ಮೂಲದವರೆಂದು ತಿಳಿದುಬರುತ್ತದೆ".[೯]

ಹಿಂದಿನ ಕಾಲದಿಂದಲೂ ಒಂದೊಂದು ಸಮುದಾಯಕ್ಕೆ ಅಥವಾ ಜನಾಂಗಕ್ಕೆ ತನ್ನದೇ ಆದ ಅರ್ಥ ಮೂಲ ಇರುವುದು ತಿಳಿದು ಬರುತ್ತದೆ. ಅದರಂತೆ ಸಮಾಜದ ಒಳಗೆ ಹೋದಾಗ ಹಲವಾರು ಜಾತಿಗಳಿಗೆ ತಾವುಗಳು ಮಾಡುತ್ತಿರುವ ಕೆಲಸಗಳನ್ನಾಧರಿಸಿ ಇಲ್ಲವೇ ತಮ್ಮ ಮೂಲಗಳನ್ನಾಧರಿಸಿಕೊಂಡು ತಾವು ಮಾಡುವ ಪ್ರದೇಶವನ್ನಾಧಾರಿಸಿಕೊಂಡು ಮುಂದೆ ಆಯಾ ಸಮುದಾಯಕ್ಕೆ ಅದೇ ಹೆಸರು ಕೊಡುಗೆಯಾಗಿ ಬಂದಿರುವುದು ಕಾಣಬಹುದು. ಅದೇರೀತಿಯಾಗಿ ಭೋವಿ ಸಮುದಾಯಕ್ಕೆ ತನ್ನದೇ ಆದ ಅರ್ಥವಿವರಣೆ ಹೊಂದಿರುವುದು ಈ ಕೆಳಗಿನಂತೆ ಕಾಣಬಹುದು.

"ಒಡ್ಡ ಎಂದರೆ ಕಲ್ಲು ಮಣ್ಣು ಕೆಲಸ ಮಾಡುವವನು ಹಾಗೂ ಒರಟ ಎಂದು ಅರ್ಥ ಮತ್ತು ಒಡೆ, ಸೀಳು ಪುಡಿಮಾಡು, ಎಂದು ಸಹ ತಿಳಿದು ಬರುತ್ತದೆ. ಭೋವಿ ಸಮುದಾಯದ ಮೂಲ ವೃತ್ತಿಯು ಸಹ ಕಲ್ಲು ಮಣ್ಣಿನ ಕೆಲಸವಾಗಿದೆ ಹಾಗೂ ಬೃಹತ್ತಾದ ಕಲ್ಲುಗಳನ್ನು ಪುಡಿ ಮಾಡುವುದು ಎಂದು ತಿಳಿದು ಬರುತ್ತದೆ".[೧೦]

"ಭೋವಿ ಅಥವಾ ವಡ್ಡ ಎನ್ನುವ ಪದ ಮೂಲ ದ್ರಾವಿಡ ಶಬ್ದ. ವಡ್ಡರು ಹೆಚ್ಚಾಗಿ ಕಪ್ಪು ಬಣ್ಣದವರಾಗಿದ್ದುದ್ದರಿಂದ ದ್ರಾವಿಡರೆಂದು, ಭೋವಿ ಅಥವಾ ವಡ್ಡ ಜನಾಂಗದ ಉಗಮ ಸ್ಥಾನ ಓಡಿಸ್ಸಾ, ಒಡ್ಡದೇಶ, ಒಡ್ರದೇಶ ಎಂದು ಅವರನ್ನು ಪ್ರಾಕೃತದಲ್ಲಿ ಒಡ್ಡ, ಸಂಸ್ಕೃತದಲ್ಲಿ ಒಡ್ರ, ತಮಿಳಿನಲ್ಲಿ ಒಡ್ಡಿಯನ್, ಮಲಯಾಳಂನಲ್ಲಿ ಒಟ್ಟಿಯಾನ್, ತೆಲುಗಿನಲ್ಲಿ ವಡ್ಡ, ಎಂದು

ಕರೆಯಲಾಗುತ್ತಿದ್ದು ಬಹುಶಃ ಕಾಲಸರಿದಂತೆ ಕಾಲಾ ಚಕ್ರದ ಗತಿಯಲ್ಲಿ ಒರಟ ಶಬ್ದ ಬಂದಿರಬಹುದು, ಹಾಗೇಯೇ ದ್ರಾವೀಡ ಶಬ್ದಗಳಿಂದ ಒಟ್ಟಿಯನ್, ಒಟ್ಟನ್, ಒಡ್ಡೆ ಶಬ್ದಗಳನ್ನು ಗಮನಿಸಿದರೆ ಬಹುಶಃ ಈ ಶಬ್ದದಿಂದಲೇ ಪ್ರಾಕೃತಕ್ಕೆ ಒಡ್ಡ ಎಂದು ಹೋಗಿದ್ದಿರಬೇಕು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದುದೇನೆಂದರೆ ವಡ್ಡ ಇದೊಂದು ವೃತ್ತಿ ಸೂಚಕವಾದ ದ್ರಾವೀಡ ಮೂಲದ ಪದ. ವಡ್ಡರು ಅಥವಾ ಭೋವಿಗಳು ಕಲ್ಲು ಕಟ್ಟುವುದು, ಭಾವಿ ತೋಡುವುದು, ಕೆರೆ,ಕಾಲುವೆ, ಆಣೆಕಟ್ಟುಗಳನ್ನು ಕಟ್ಟುವುದು, ಮಣ್ಣುಕೆಲಸ, ಕಲ್ಲುಗಳಲ್ಲಿ ಮೂರ್ತಿ ಕೆತ್ತನೆ ಮಾಡುತ್ತಾರೆ. ಬೇರೆ ಬೇರೆ ಜನಾಂಗಗಳಿಗಿಂತ ವಡ್ಡರು ಇಂತಹ ಕೆಲಸಗಳನ್ನು ಅತಿವೇಗದಿಂದ ಮಾಡುವುದು ಮತ್ತು ಇಂತಹ ಕೆಲಸಗಳನ್ನು ಮಾಡುವಲ್ಲಿ ವಿಶೇಷ ಜ್ಞಾನವನ್ನು ಹೊಂದಿದವರಾಗಿದ್ದಾರೆ.

ಭೋವಿ ಸಮುದಾಯದಲ್ಲಿ ಶಿಕ್ಷಣವನ್ನು ಕಲಿತವರು ಕಡಿಮೆ ಆದರೆ ಕಟ್ಟಡ ಕಟ್ಟುವಲ್ಲಿ ಅಳತೆ ಮಾಪಕಗಳು, ಅಂಕೆ ಸಂಖ್ಯೆಗಳ ಪರಿಜ್ಞಾನದಿಂದ ಕಟ್ಟಡಗಳನ್ನು ವಿಶೇಷವಾಗಿ ನಿರ್ಮಿಸಿಕೊಡುತ್ತಾರೆ".[೧೧]

ಡಿ. ಗಂಗಪ್ಪ (ಐಎಎಸ್,ಆರ್‌ಡಿಟಿ) ರವರ ಅಭಿಪ್ರಾಯದಲ್ಲಿ "ವಡ್ಡ ಸಮುದಾಯದವರು ಮೂಲ ಒಡ್ರದೇಶ ಕಳಿಂಗದಲ್ಲಿದ್ದು ದೇವನಾಂಪ್ರಿಯ ಪ್ರಿಯದರ್ಶಿ ಅಶೋಕನು ಕಳಿಂಗದ ಮೇಲೆ ಯುದ್ದವನ್ನು ಘೋಷಣೆ ಮಾಡಿದಾಗ ಕಳಿಂಗದ ರಾಜನನ್ನೇ ಸೋಲಿಸಿ ಬಹಳಷ್ಟು ಜನರನ್ನು ಸೆರೆಹಿಡಿದು ಈ ಯುದ್ದದಲ್ಲಿ ಭೋವಿ ಅಥವಾ ವಡ್ಡರು ಹೆಚ್ಚು ಸಂಖ್ಯೆಯ ಸೈನಿಕರು ಮರಣವನ್ನಪ್ಪಿದರು. ಭಯಭೀತಗೊಂಡ ಉಳಿದ ಜನರು ಅಶೋಕನ ದಾಳಿಗೆ ಹೆದರಿ ಪ್ರಾಣ ಭಯದಿಂದ ಜೀವನವನ್ನು ಉಳಿಸಿಕೊಳ್ಳಲು ತಮ್ಮ ಮೂಲ ನೆಲೆಯಾದ ಓಡಿಸ್ಸಾ, ಓರಿಸ್ಸಾ ಆಗಿನ ಒಡ್ರಾ ದೇಶವನ್ನು ಬಿಟ್ಟು ಭಾರತದ ಬೇರೆ ಬೇರೆ ರಾಜ್ಯಗಳಿಗೆ ವಲಸೆಹೋದರು ಅದರಲ್ಲಿ ಒಂದು ಗುಂಪೇ ಅಲ್ಲಿಂದ ಹತ್ತಿರವಿರುವ ದಕ್ಷಿಣದಿಕ್ಕಿಗೆ ಆಂದ್ರ, ಕೇರಳ, ಮದ್ರಾಸ್, ಮತ್ತು ಕರ್ನಾಟಕ ಕ್ಕೆ ಪಲಾಯನಗೊಂಡರು. ಭೋವಿ ಅಥವಾ ಒಡ್ಡಜನಾಂಗ ಒಡ್ರದೇಶದಲ್ಲಿದ್ದುದರಿಂದ ಒರಟು ಕೆಲಸ ಮಾಡುತ್ತಿರುವುದರಿಂದ ತಮ್ಮ ದೈಹಿಕ ಮತ್ತು ಮಾನಸಿಕ ಸ್ಥಾನಮಾನಗಳಿಂದ ಒರಟುತನವಿರುವುದರಿಂದ ಆವರಿಗೆ ಒಡ್ಡ ಎಂಬ ಶಬ್ದ ಹೇಳುತ್ತಾರೆ".[೧೨]

"ಭೋವಿ ಅಥವಾ ವಡ್ಡ ಜನಾಂಗದ ಬಗ್ಗೆ ಬಾಂಬೆ ಗೆಜೆಟಿಯರ್‌ನಲ್ಲಿ ಸರಳ ಹಾಗೂ ಸೂಕ್ತವಾಗಿ ವಿಶ್ಲೇಷಿಸುತ್ತಾ ವಡ್ಡ ಜನರನ್ನು ಒಡ್ಡ, ವಡ್ಡರು, ವಾಡರ್ಸ್ ಎಂದು ಕರೆಯಲಾಗಿದೆ. ಒಡ್ಡ ಮತ್ತು ವಡ್ಡ ಶಬ್ದಗಳು ಸಾಮಾನ್ಯವಾಗಿದ್ದು ಒಡ್ಡ ಮತ್ತು ಭೋವಿಶಬ್ದಕ್ಕೆ ಸಮಾನವಾಗಿ ಬಳಸಲಾಗಿದೆಯೆಂದು ಕಂಡು ಬರುತ್ತದೆ".[೧೩]

ಈ ಸಮುದಾಯದ ಜನರು ಪ್ರಾಚೀನ ಕಾಲದಿಂದಲೂ ಕಠಿಣವಾದ ವೃತ್ತಿಯನ್ನು ಆಧರಿಸಿಕೊಂಡು ತಮ್ಮ ದಿನನಿತ್ಯದ ಜೀವನಕ್ಕಾಗಿ ಸಮಾಜಕ್ಕೆ ಉಪಯೋಗವಾಗುವಂತಹ ಅನೇಕ ಐತಿಹಾಸಿಕ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ನೀಡಿದ್ದಾರೆ. ಭೋವಿ ಸಮಾಜದ ಜನರನ್ನು ವಿಶಾಲ ದೃಷ್ಟಿಕೋನದಲ್ಲಿ ಗಮನಿಸಿದಾಗ ಅವರ ಅಪಾರವಾದ ನಿಷ್ಠೆ, ಭಕ್ತಿ, ಕೆಲಸದಲ್ಲಿ ಸಧೃಡತೆ, ನಂಬಿಕೆ, ಪ್ರಾಮಾಣಿಕತೆಗಳು ಕಂಡುಬರುತ್ತವೆ. ಭೋವಿ ಸಮುದಾಯದ ಜನರು ಭಾರತದ ಇತಿಹಾಸದ ನಿರ್ಮಾಣಕ್ಕಾಗಿ ಕಲೆ, ಶಿಲ್ಪಕಲೆ, ವಾಸ್ತುಶಿಲ್ಪಕಲೆಗೆ ಹೆಚ್ಚು ಮಹತ್ವವನ್ನು ಕೊಟ್ಟು ಕಾಡುಕಲ್ಲುಗಳನ್ನು ಬೆಂಕಿಯಿಂದ ಸುಟ್ಟು ಉಳಿ, ಸುತ್ತಿಗೆಯಿಂದ ಮಣಿಸಿ, ಶಿಲಾ ಮೂರ್ತಿಯನ್ನಾಗಿ ಕೆತ್ತಿರುವುದು ನಿಜವಾಗಿಯೂ ಇತಿಹಾಸದಲ್ಲಿ ಚಿರಸ್ಮರಣೀಯವಾಗಿದೆ.

ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರವೂ ಭೋವಿ ಸಮುದಾಯವು ನಿರಂತರವಾಗಿ, ಸಮಾಜದ ಏಳಿಗೆಗಾಗಿ, ರಕ್ಷಣೆಗಾಗಿ ಒಂದಲ್ಲ ಒಂದು ರೀತಿಯಲ್ಲಿ ಪರಿಪೂರ್ಣತೆಯಿಂದ ಬಿಸಿಲು, ಬೆಂಕಿ ಎಂಬ ಪರಿವೇ ಇಲ್ಲದೇ ಸೇವೆಯನ್ನು ಸಲ್ಲಿಸುತ್ತಿದೆ.

"ಹಿಂದಿನ ಕಾಲದಲ್ಲಿ ರಾಜರು ಈ ಜನರನ್ನು ಕೋಟೆ ಮತ್ತು ಅರಮನೆಗಳನ್ನು ಕಟ್ಟಲು ಭೋವಿ ಸಮುದಾಯವನ್ನು ಇಟ್ಟುಕೊಳ್ಳುತ್ತಿದ್ದರು. ಬಂಡೆ ಕಲ್ಲು ಅಗೆಯುವುದು, ಕಲ್ಲುಕಟ್ಟುವುದು ಅವರ ಸಾಂಪ್ರದಾಯಿಕ ಉದ್ಯೋಗವಾಗಿರುತ್ತಿತ್ತು. ಬಾವಿ ತೋಡುವುದು, ರಸ್ತೆ ನಿರ್ಮಾಣ ಮಾಡುವುದು ಮತ್ತು ಕೆರೆಗಳನ್ನು ತೋಡುವುದು ಮುಂತಾದ ಉದ್ಯೋಗಗಳಲ್ಲಿ ಕೂಡ ಅವರು ತೊಡಗಿದ್ದಾರೆ. ಈ ಮೇಲಿನ ಅಂಶಗಳನ್ನು ಗಮನಿಸಿದರೆ ಭೋವಿ ಸಮುದಾಯದ ಜನರು ಆಂದ್ರದ ಮೂಲದಿಂದ ಬಂದವರೆಂದು ತಿಳಿದು ಬರುತ್ತದೆ. ಆದರೆ ಇಂದು ಹಲವಾರು ವೃತ್ತಿಗಳಾದ ವ್ಯಾಪಾರ, ಗುತ್ತಿಗೆ, ಕೃಷಿ, ಪಶುಪಾಲನೆ, ದಿನಗೂಲಿ, ನೌಕರಿಯಂತಹ ಕೆಲಸಗಳನ್ನು ಮಾಡುತ್ತಾ ಶ್ರಮವಹಿಸಿ ಜೀವನ ನಡೆಸುತ್ತಿರುವುದು ಕಂಡು ಬರುತ್ತದೆ".[೧೪] ತಿರುಪತಿ ವೆಂಕಟರಮಣನನ್ನು ಬೇಡರ ದೇವರೆಂದೂ ಹಾಗೂ ವಡ್ಡರ (ಭೋವಿ) ಗಂಡು ದೇವರು ಕೂಡಾ ತಿರುಪತಿ ವೆಂಕಟರಮಣನೆಂದೂ ಉಲ್ಲೇಖಿಸಿದ್ದಾರೆ. ಎಡ್ಗರ್ ಥರ್ಸ್ಟನ್‌ನ ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸೌತ್ ಇಂಡಿಯಾ ಎಂಬ ೧ನೇ ಸಂಪುಟದಲ್ಲಿ ಭೋವಿ ಹಾಗೂ ಬೇಡರ ಒಂದೇ ಸಮುದಾಯದವರೆಂದೂ ಕರೆದಿದ್ದಾರೆ. ನನ್ನ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಕ್ಷೇತ್ರ ಕಾರ್ಯದಲ್ಲಿ ಭೋವಿ ಸಮುದಾಯದ ಕುಟುಂಬಗಳನ್ನು ಸಂದರ್ಶಿಸಿದಾಗ ತಮ್ಮ ಮನೆದೇವರು ಯಾರು? ಎಂದು ಕೇಳಿದಾಗ, ತಿರುಪತಿ ತಿಮ್ಮಪ್ಪ (ವೆಂಕಟರಮಣ) ಎಂದು ತಿಳಿಸಿದರು ಹಾಗೂ ಪ್ರತಿ ವರ್ಷ ಹಲವು ಕುಟುಂಬಗಳು ಕುಟುಂಬ ಸಮೇತವಾಗಿ ಈ ದೇವರಿಗೆ ಪೂಜೆಮಾಡಲು ಹೋಗುತ್ತಾರೆ ಮತ್ತು ತಲೆಮುಂಡಿ (ತಲೆ ಗುಂಡು) ಮಾಡಿಸಿಕೊಂಡು ಬರುತ್ತಾರೆ. ಈ ರೀತಿ

ಮಾಡುವುದರಿಂದ ಈ ದೇವರಿಗೆ ಪೂಜೆ ಸಲ್ಲಿಸುವ ಕುಟುಂಬಗಳಿಗೆ ಒಳ್ಳೆಯದು ಆಗಿದೆಯಂತೆ ಮತ್ತು ಆರ್ಥಿಕವಾಗಿ ಅಭಿವೃದ್ಧಿಯ ಹಂತದಲ್ಲಿರುವುದನ್ನು ಕಾಣಬಹುದು". [೧೫]

ಭೋವಿ ಸಮುದಾಯದ ಮೂಲ ನೆಲೆ ಇಂದಿನ ಒರಿಸ್ಸಾ ರಾಜ್ಯವಾಗಿದ್ದರೂ ಒರಿಸ್ಸಾದಿಂದ ೧೧ನೇಯ ಶತಮಾನದಲ್ಲಿ ಆಂಧ್ರಪ್ರದೇಶಕ್ಕೆ ಅಲ್ಲಿಂದ ೧೨ನೇ ಶತಮಾನದಿಂದ ೧೪ನೇ ಶತಮಾನದವರೆಗೆ ವಿಜಯನಗರ ಅರಸರ ಆಳ್ವಿಕೆಯ ಕಾಲಕ್ಕೆ ಕೋಟೆಗಳು ಅರಮನೆಗಳು ಹಾಗೂ ಮೂರ್ತಿಗಳ ಕೆತ್ತನೆಗೆ ಕರ್ನಾಟಕಕ್ಕೆ ವಲಸೆ ಬಂದರೆಂದು ಐತಿಹಾಸಿಕ ಉಲ್ಲೇಖವಿದೆ".[೧೬]

ದಂತ ಕಥೆಗಳು:

ಭೋವಿಗಳ ಸಾಂಸ್ಕೃತಿಕ ಪರಂಪರೆಯಲ್ಲಿ ಹಲವುದಂತ ಕಥೆಗಳು ದಾಖಲಾಗಿವೆ. ಇವುಗಳ ಸಮುದಾಯದ ಪುಣ್ಯಕಥೆಗಳಂತೆ ವರ್ಣಿಸಲ್ಪಡುತ್ತವೆ ಈ ದಂತ ಕತೆಗಳಲ್ಲಿಯ ನಾಯಕು ವೀರರಂತೆ, ಅದ್ಭುತಗಳನ್ನು ಸಾಧಿಸಿದ್ದಾರೆ. ಇವುಗಳ ಮೂಲಕ ಧಾರ್ಮಿಕ ಸಂಗತಿಗಳನ್ನು ತಿಳಿದುಕೊಳ್ಳಬಹುದಾಗಿದೆ.

ಜಸ್ಮಾ ಎಂಬ ಸ್ತ್ರೀ:

ಗುಜರಾತ ರಾಜ್ಯವನ್ನು ರಾಜಾ ಜಯಸಿಂಹನು ಆಳುತ್ತಿದ್ದನು ವಡ್ಡರು ಕೆರೆಯ ನಿರ್ಮಾಣದ ಕೆಲಸದಲ್ಲಿ ತೊಡಗಿಕೊಂಡಿದ್ದರು. ಅದನ್ನು ನೋಡಲು ಜಯಸಿಂಹ ಎಂಬ ರಾಜ ಪ್ರತಿದಿನ ಬರುತ್ತಿದ್ದನು. ಜಸ್ಮಾ ಎಂಬ ಸುಂದರ ಭೋವಿ ಯುವತಿಯು ಕೆಲಸಮಾಡುತ್ತಿರುವುದನ್ನು ರಾಜನು ನೋಡಿ ಅವಳ ಸೌಂದರ್ಯವನ್ನು ಕಂಡು ಮನಸೋತು ಜಸ್ಮಾಳನ್ನು ವಿವಾಹವಾಗುವುದಾಗಿ ವಡ್ಡರ ಮುಖಂಡರನ್ನು ಕೇಳಿದನು. ಅದಕ್ಕೆ ಮುಖಂಡರು ಅನುಮತಿ ನೀಡಲಿಲ್ಲ. ಕೋಪಿಸಿಕೊಂಡ ರಾಜನು ತನ್ನ ಸೇವಕರಿಂದ ಅವರನ್ನು ಹಿಂಸಿಸಿ ಜಸ್ಮಾಳನ್ನು ಅಪಹರಣ ಮಾಡುವ ಪ್ರಯತ್ನದಲ್ಲಿರುವಾಗ ವಿಷಯ ತಿಳಿದ ಜಸ್ಮಾಳು ಆತ್ಮಹತ್ಯೆ ಮಾಡಿಕೊಂಡಳು. ಪೂರ್ವದಲ್ಲಿ ರಾಜ ಕಟ್ಟಿಸುತ್ತಿರುವ ಈ ಕೆರೆಗೆ ನೀರು ಸಂಗ್ರಹಣೆ ಆಗಬಾರದು, ಇನ್ನು ಮುಂದೆ ವಡ್ಡರ ಸಮುದಾಯದಲ್ಲಿ ಸೌಂದರ್ಯವತಿ ಸ್ತ್ರೀ ಜನಿಸಬಾರದೆಂದು ಶಾಪನೀಡಿದಳು, ಅವಳ ಶಾಪದಿಂದ ಪಶ್ಚಾತ್ತಾಪ ಪಟ್ಟ ರಾಜನು ಅವಳ ನೆನಪಿಗಾಗಿ ಒಂದು ದೇವಾಲಯವನ್ನು ಕಟ್ಟಿಸಿದನು. ನಂತರ ಕೆರೆ ನೀರಿನಿಂದ ತುಂಬಿತು ಎಂಬ ಕಥೆ ಇದೆ. ಜಸ್ಮಾಳ ನೆನಪಿಗಾಗಿ ಬೆಂಗಳೂರ ನಗರದಲ್ಲಿ ೧೯೯೯ರಲ್ಲಿ ಕರ್ನಾಟಕ ರಾಜ್ಯ ಭೋವಿ ಸಮುದಾಯದ ಪ್ರತಿಭಾವಂತ ಯುವಕ, ಯುವತಿಯರಿಗೆ ಪ್ರತಿವರ್ಷ ಪ್ರತಿಭಾಪುರಸ್ಕಾರ ನೀಡಿ ಸನ್ಮಾನ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ"[೧೭]

"ಶ್ರೀ ಮರುಳ ಸಿದ್ದಯ್ಯನವರು ತಮ್ಮ ಗ್ರಂಥವಾದ 'ಹೂ ತಂದವರು' ಎಂಬುದರಲ್ಲಿ ಶಿಲ್ಪಿ ಜಕ್ಕಣಾಚಾರಿ ಒಡ್ಡರವರು ಎಂದು ಉಲ್ಲೇಖಿಸಿದ್ದಾರೆ. ತೋಳಿನಲ್ಲಿ ಶಕ್ತಿ ಇರುವತನಕ ಉಳಿಯಲ್ಲಿ

ಪರಿತ ಇರುವವರಿಗೆ ಯಾವ ಒಡ್ಡನು ಅರಸನ ಆಳಾಗುವುದಿಲ್ಲ ಎಂದು ಜಕ್ಕಣಾಚಾರಿಯೇ ಹೇಳಿದ್ದಾನೆ ಅವರ ಈ ಮಾತು ಭೋವಿ ವಡ್ಡರ ಸಮುದಾಯದ ಸ್ವಾಭಿಮಾನದ ಸಂಕೇತವಾಗಿದೆ. ಭಾರತ ದೇಶದ ಬಹುಪಾಲು ಕೋಟೆ ಕೊತ್ತಲಗಳು, ದೇವಾಲಯಗಳು, ಅರಮನೆಗಳು, ಆಣೆಕಟ್ಟುಗಳು, ಕೆರೆ ಕಾಲುವೆಗಳು ಮತ್ತು ಕಟ್ಟಡಗಳನ್ನು ನಿರ್ಮಿಸುವಲ್ಲಿ ಭೋವಿ ಸಮುದಾಯದ ಕಾರ್ಯ ಪ್ರಮುಖವಾಗಿದೆ.[೧೮]

ಒಡ್ಡರ ಗುರು ಶ್ರೀ ಸಿದ್ದರಾಮೇಶ್ವರರು:

"ಭಾರತದಲ್ಲಿ ಅನೇಕ ಜನ ಸಮುದಾಯಗಳು ಜೀವಿಸಿವೆ ಹಾಗೂ ಅಂತಹ ಜನ ಸಮುದಾಯಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಗುರುಗಳು ಇದ್ದಾರೆ ಮತ್ತು ಗುರುವಿನ ಮಾರ್ಗದರ್ಶನ ಸಿಕ್ಕಿವೆ ಎಂಬ ಸಂಗತಿಯನ್ನು ಇತಿಹಾಸದ ಪುಟಗಳಲ್ಲಿ ಉಲ್ಲೇಖಿಸಲಾಗಿದೆ. ಗುರು ಎಂದರೆ ಹಿರಿಯ, ಮಾರ್ಗದರ್ಶಕ, ದಾರಿತಪ್ಪಿದಾಗ ತಿದ್ದಿಕೊಳ್ಳಲು ಹೇಳುವವರು ಎಂದು ಗುರುತಿಸಿದ್ದಾರೆ. ಅಂತೆಯೇ ಸಾಮಾಜದಲ್ಲಿ ಗುರುವಿಗೆ ಉನ್ನತ ಸ್ಥಾನ ಮಾನ ನೀಡಲಾಗಿದೆ.

ಭೋವಿ (ವಡ್ಡರ) ಸಮುದಾಯದ ೧೨ನೆಯ ಶತಮಾನದ ಶ್ರೀಗುರು ಸಿದ್ದರಾಮೇಶ್ವರರು ವಿವರಗಳನ್ನು ರಾಘವಾಂಕ ಕವಿ ತನ್ನ ಸಿದ್ದರಾಮ ಚರಿತ್ರೆಯಲ್ಲಿ ವಿವರಿಸಿದ್ದಾನೆ. ಇದಕ್ಕೂ ಮೊದಲು ಸಮುದಾಯದ ಬಗೆಗೆ ಯಾವುದೇ ಲಿಖಿತ ದಾಖಲೆಗಳು ದೊರೆತಿಲ್ಲ. ಭೋವಿ ಸಮುದಾಯದವರು ಶ್ರೀಗುರು ಸಿದ್ದರಾಮೇಶ್ವರನು ತಮ್ಮ ಕುಲಗುರುಗಳೆಂದು ಒಪ್ಪಿಕೊಂಡ ಸಂಗತಿಯು ಇತಿಹಾಸದಿಂದ ತಿಳಿಯುತ್ತದೆ ಹಾಗೂ ಕನ್ನಡ ಸಾಹಿತ್ಯ ಕೃತಿಗಳಲ್ಲಿ ರಾಘವಾಂಕ ಕವಿಯು ಸಿದ್ದರಾಮಚರಿತೆ, ಚಾಮರಸ ಕವಿಯ ಪ್ರಭುಲಿಂಗ ಲೀಲೆ ಮತ್ತು ಭೀಮ ಕವಿಯ ಬಸವ ಪುರಾಣಗಳಲ್ಲಿ ಸಿದ್ದರಾಮೇಶ್ವರನು ಒಡ್ಡರ ಗುರುಎಂದೇ ಸಂಭೋದಿಸಿದ್ದಾರೆ. ಶ್ರೀ ಸಿದ್ದರಾಮೇಶ್ವರನು ತಮ್ಮ ಕುಲಗುರುಗಳೆಂದು ಭಾವಿಸಿ ಪ್ರತಿವರ್ಷ ಜನೇವರಿ ೧೪ರಂದು ಅವರ ಜಯಂತ್ಯೋತ್ಸವವನ್ನು ಸಂಭ್ರಮದಿಂದ ಆಚರಿಸುತ್ತಾರೆ".[೨೦]


"ಕುಲದೈವವಾದ ಆಧ್ಯಾತ್ಮ ಹಾಗೂ ಜೀವನದ ಬೆಸುಗೆ ಮಾಡಿದವರು ಈ ಲೋಕವೇ ಸತ್ಯವೆಂದು ಸಾರಿದ ಮಹಾಪುರುಷರು. ಸರ್ವ ಧರ್ಮ ಸಮಾನತೆಗೆ ಒತ್ತು ನೀಡಿದವರು, "ಸಿದ್ದರಾಮರು ಸೊಲ್ಲಾಪುರವನ್ನು (ಮಹಾರಾಷ್ಟ್ರ) ಅಭಿನವ ಶ್ರೀ ಶೈಲವನ್ನಾಗಿ ಮಾಡಿದ ಯೋಗ ಪುರುಷರು. ಕಾಯಕದಿಂದ ಮುಕ್ತಿಯೆಂಬ ಬಸವಣ್ಣನವರ ಗಾದೆ ಮಾತಿನಂತೆ ಶ್ರಮವಹಿಸಿ ದುಡಿದು ಹಣಪಡೆಯಬೇಕು. ಶ್ರಮದಿಂದಲೇ ಮುಕ್ತಿಯೆಂದು ತಿಳಿದು ಭೋವಿಜನರು ಕಾಡುಕಲ್ಲುಗಳನ್ನೆ ಬೆಣ್ಣೆಮುಂಡೆಯಂತೆ ಕಡಿದು ಸಮಾಜದ ಜನರಿಗೆ ಸೇವೆಯನ್ನು ಕೊಟ್ಟವರು. 'ಆಚಾರವೇ ಕುಲ

ಅನಾಚಾರವೇ ಹೊಲೆಯ' ಎಂದು ದುಡಿಮೆಗೆ ಗೌರವ ನೀಡಿದವನು ಸಕಲ ಸಾಮಾಜಿಕ ರೋಗ ರುಜಿನಗಳಿಗೆ ಜಾತಿ ವಿನಾಶವೇ ಮದ್ದೆಂದು ತಿಳಿದವನು. ಹಾಗಾಗಿ ಮಣ್ಣಿನ ಮಕ್ಕಳಿಗೆ, ಕಲ್ಲು ಹೊಡೆಯುವವರಿಗೆ, ವಡ್ಡರಿಗೆ, ಕೂಲಿಕಾರರಿಗೆ ಸಿದ್ದರಾಮಯ್ಯ ಆದರ್ಶ ಗುರುವೆಂದು ಸ್ವೀಕರಿಸಿ ಸಿದ್ದರಾಮರ ಆದರ್ಶದಂತೆ ಜೀವನ ನಡೆಸುತ್ತಾ ಬಂದವರು". ಈ ಸಮುದಾಯದ ಜನರು ಶಿಕ್ಷಣದಲ್ಲಿ ಅಭಿವೃದ್ಧಿಯನ್ನು ಕಂಡಿಲ್ಲ. ಪ್ರಾಥಮಿಕ ಪ್ರೌಢಶಿಕ್ಷಣಕ್ಕೆ ಕೊನೆಮಾಡಿ ತಮ್ಮ ವೃತ್ತಿ ಬದುಕಿಗೆ ಒಲವು ತೋರಿಸಿದ ನಿದರ್ಶನಗಳು ಬಹಳ ಇವೆ. ಆರ್ಥಿಕವಾಗಿ ಅಷ್ಟೇನು ಅಭಿವೃದ್ಧಿ ಕಾಣದೇ ಇದ್ದಾರೆ. ಇತ್ತೀಚಿನ ದಿನಮಾನಗಳಲ್ಲಿ ಸ್ವಲ್ಪಮಟ್ಟಿಗೆ ಪದವಿ, ಸ್ನಾತಕೋತ್ತರ ಪದವಿ ಮುಗಿಸಿ ನೌಕರಿಗೆ ಸೇರಿದ್ದಾರೆ. ಹೀಗೆಯೇ ಭೋವಿ ಸಮುದಾಯವುಜೀವನ ಸಾಗಿಸುತ್ತಾ ಬಂದಿದೆ.

೨.೩. ಜನಸಂಖ್ಯೆ

(census of india population profile.2011)

ಕ್ರಸಂ	ಊರಿನ ಹೆಸರು	ಒಟ್ಟು ಮನೆಗಳು	ಒಟ್ಟು ಜನಸಂಖ್ಯೆ			ಲಿಂಗಾನುಪಾತ	ಲಿಂಗಾನುಪಾತ ೦-೬ ವರ್ಷ
			ಗಂಡು	ಹೆಣ್ಣು	ಒಟ್ಟು		
೧.	ಕೋಟೆಹಾಳು ಸೂಗೂರು	೪೩೧	೧೨೧೪	೧೧೯೨	೨೪೦೬	೯೮೨	೧೦೦೫
೨.	ಕೋಟೆಹಾಳು	೧೯೮	೫೨೮	೫೩೨	೧೦೬೦	೧೦೦೮	೮೮೨
೩.	ಬಂಡ್ರಾಳು	೪೫೧	೧೧೯೩	೧೨೪೩	೨೪೩೬	೧೦೪೨	೧೦೭೪
೪.	ಹೀರಾಳು	೨೧೪	೫೮೪	೫೯೫	೧೧೭೯	೧೦೧೯	೧೦೪೩
೫.	ಮುದೆನೂರು	೩೧೯	೯೧೦	೯೩೯	೧೮೪೯	೧೦೩೯	೯೮೮
ಒಟ್ಟು					೮೯೩೦	ಜನರು	



೨೦೧೧ರ ಜನಗಣತಿಯ ಪ್ರಕಾರ ಕೋಟೆಹಾಳು ಸೂಗೂರು ಗ್ರಾಮ ಪಂಚಾಯ್ತಿಯ ಒಟ್ಟು ಜನಸಂಖ್ಯೆ-೮೯೩೦ ಜನರಿದ್ದಾರೆ. ಕೋಟೆಹಾಳು ಸೂಗೂರಿನಲ್ಲಿ ಒಟ್ಟು ೪೩೧ ಮನೆಗಳಿದ್ದು ಲಿಂಗಾಯಿತರು, ಕುರುಬರು, ಒಡ್ಡರು,ಕೊರಚರು, ಹರಿಜನರು, ಚಲುವಾದಿ, ಸವಿತಾ ಸಮಾಜದ ಜನ, ಸ್ವಾಮಿಗಳು, ಬ್ರಾಹ್ಮಣರು, ನಾಯಕರು, ಕುಬ್ಬೇರು, ಬಡೀಗೇರರು ಎಂಬ ಇಷ್ಟು ಸಮುದಾಯಗಳಿವೆ. ಇದರಲ್ಲಿ ಕುರುಬರ ಸಮುದಾಯದ ಮನೆಗಳು ಯೆಥೇಚ್ಚವಾಗಿವೆ. ಕೋಟೆಹಾಳು ಸೂಗೂರಿನ ಒಟ್ಟು ಜನಸಂಖ್ಯೆ ೨೪೦೬ ಇದ್ದು, ೧೨೧೪ ಗಂಡು, ೧೧೯೨ ಹೆಣ್ಣು ಇದ್ದಾರೆ ಒಟ್ಟು ಲಿಂಗಾನುಪಾತ ೯೮೨ ರಷ್ಟು ಇದ್ದು ೦-೬ ವರ್ಷ ವಯಸ್ಸಿನ ಮಕ್ಕಳ ಲಿಂಗಾನುಪಾತ ೧೦೦೫ ರಷ್ಟಿದೆ.


ಕೋಟೆಹಾಳೂ ಗ್ರಾಮದಲ್ಲಿ ೧೯೮ ಮನೆಗಳಿದ್ದು ೫೨೮ ಗಂಡು,೫೩೨ ಹೆಣ್ಣು ಒಟ್ಟು ೧೦೬೦ ಜನರಿದ್ದಾರೆ. ಲಿಂಗಾನುಪಾತ ೧೦೦೮ ಇದ್ದು ೦-೬ ವರ್ಷ ವಯಸ್ಸಿನ ಮಕ್ಕಳ ಲಿಂಗಾನುಪಾತ ೮೮೨ ರಷ್ಟಿದೆ.

ಬಂಡ್ರಾಳು ಗ್ರಾಮದಲ್ಲಿ ೪೫೧ ಮನೆಗಳಿದ್ದು ೧೧೯೩ ಗಂಡು, ೧೨೪೩ ಹೆಣ್ಣು ಒಟ್ಟು ೨೪೩೬ ಜನರಿದ್ದಾರೆ. ಲಿಂಗಾನುಪಾತ ೧೦೪೨ ರಷ್ಟಿದ್ದು, ೦-೬ ವರ್ಷ ವಯಸ್ಸಿನ ಮಕ್ಕಳ ಲಿಂಗಾನುಪಾತ ೧೦೭೪ ರಷ್ಟಿದೆ.

ಹೀರಾಳು ಗ್ರಾಮದಲ್ಲಿ ೨೧೪ ಮನೆಗಳಿದ್ದು ೫೮೪ ಗಂಡು, ೫೯೫ ಹೆಣ್ಣು, ಒಟ್ಟು ೧೧೭೯ ಜನರಿದ್ದಾರೆ. ಲಿಂಗಾನುಪಾತ ೧೦೧೯ ರಷ್ಟಿದ್ದು. ೦-೬ ವರ್ಷದ ವಯಸ್ಸಿನ ಲಿಂಗಾನುಪಾತ ೧೦೪೩ ರಷ್ಟಿದೆ.

ಮುದೆನೂರು ಗ್ರಾಮದಲ್ಲಿ ೩೧೯ ಮನೆಗಳಿದ್ದು ೯೧೦ ಗಂಡು, ೯೩೯ ಹೆಣ್ಣು ಒಟ್ಟು ೧೮೪೯ ಜನರಿದ್ದಾರೆ. ಲಿಂಗಾನುಪಾತ ೧೮೪೯ ರಷ್ಟಿದ್ದು ೦-೬ ವರ್ಷ ವಯಸ್ಸಿನ ಮಕ್ಕಳ ಲಿಂಗಾನುಪಾತ ೯೮೮ ರಷ್ಟಿದೆ.

ಶಿಕ್ಷಣದ ಗುಣಮಟ್ಟ					ದುಡಿಯುವವರ ಮಟ್ಟ		ಪರಿಶಿಷ್ಟ ಜಾತಿ ಜನಸಂಖ್ಯೆ		ಪರಿಶಿಷ್ಟ ಪಂಗಡ ಜನಸಂಖ್ಯೆ		ಎಮ್ ಡಿ.ಡಿ.ಎಸ್ ಕೋಡ್
ಗ್ರಾಮ	ಕ್ರ ಸ ೦.	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	-
ಕೆ.ಸೂಗೂರು	೧	೬೧.೫೦	೩೬.೫೬	೪೮.೮೫	೫೯.೮೫	೫೪.೭೦	೨೬	೨೬	೧೩	೧೩	೬೦೪ ೮೦೮
ಕೋಟೆಹಾಳು	೨	೬೬.೫೩	೩೯.೫೮	೫೩.೦೩	೫೯.೭೯	೫೫.೨೬	೧	೦	೧೪೩	೧೫೨	೬೦೪೮೦೭
ಬಂಡ್ರಾಳು	೩	೫೯.೯೦	೩೨.೨೦	೪೬.೨೧	೫೮.೮೧	೫೫.೧೨	೪೫೦	೪೨೬	೩	೮	೬೦೪೮೦೯
ಈರಾಳು	೪	೬೭.೬೨	೩೪.೭೪	೫೧.೦೬	೫೮.೦೫	೬೧.೮೫	೭೩	೮೧	೨೧೫	೨೧೦	೬೦೪೮೩೭
ಮುದೆನೂರು	೫	೪೭.೩೧	೨೫.೬೮	೩೬.೨೭	೬೨.೨೦	೬೦.೪೯	೨೮೯	೩೦೨	೫೫	೪೨	೬೦೪೮೩೮



೨೦೧೧ರ ಜನಗಣತಿಯ ಪ್ರಕಾರ ಕೋಟೆಹಾಳು ಸೂಗೂರು ಗ್ರಾಮದ ಒಟ್ಟು ಶಿಕ್ಷಣದ ಮಟ್ಟ ೪೮.೮೫ ಅದರಲ್ಲಿ ಪುರುಷರು ೬೧.೫೦ ೫೪.೭೦ ರಷ್ಟು ಸ್ತ್ರೀಯರು ೩೬.೫೬ ರಷ್ಟು ದುಡಿಯುವ ಜನರ ಮಟ್ಟ ೫೯.೮೫ ಗಂಡು ೫೪.೭೦ ರಷ್ಟು ಹೆಣ್ಣು ಅದರಲ್ಲಿ ಪರಿಶಿಷ್ಟ ಜಾತಿ ಪುರುಷರು ಮತ್ತು ಸ್ತ್ರೀಯರು ೨೬ ಜನ, ಪರಿಶಿಷ್ಟ ಪಂಗಡದ ಜನ ೧೩.

ಕೋಟೆಹಾಳು ಗ್ರಾಮದಲ್ಲಿ ಒಟ್ಟು ಶಿಕ್ಷಣ ಮಟ್ಟ ೫೩.೦೩ ರಷ್ಟು ಗಂಡು ೬೬.೫೩, ಹೆಣ್ಣು ೩೯.೫೮ ರಷ್ಟು, ದುಡಿಯುವ ಜನರು ಗಂಡು ೫೯.೭೯, ಹೆಣ್ಣು ೫೫.೨೬ ರಷ್ಟು ಪರಿಶಿಷ್ಟ ಜಾತಿ ಗಂಡು ೧ ಹೆಣ್ಣು ೦, ಪರಿಶಿಷ್ಟ ಪಂಗಡ ೧೪೩ ಗಂಡು,೧೫೨ ಹೆಣ್ಣು.

ಈರಾಳು ಗ್ರಾಮದಲ್ಲಿ ಒಟ್ಟು ಶಿಕ್ಷಣದ ಮಟ್ಟ ೫೧.೦೬ ರಷ್ಟು, ಅದರಲ್ಲಿ ಗಂಡು ೬೭.೬೨, ಹೆಣ್ಣು ೩೪.೭೪ ರಷ್ಟು ಶಿಕ್ಷಣ ಪಡೆದಿದ್ದಾರೆ. ದುಡಿಯುವ ಜನ ಗಂಡು ೫೮.೦೫ ರಷ್ಟು, ಹೆಣ್ಣು

೬೧.೮೫ ರಷ್ಟು ಇದ್ದಾರೆ. ಪರಿಶಿಷ್ಟ ಜಾತಿ ಗಂಡು ೭೩ ಹೆಣ್ಣು ೮೧, ಪರಿಶಿಷ್ಟ ಪಂಗಡದ ಗಂಡು ೨೧೫ ಹೆಣ್ಣು ೨೧೦ ಜನರಿದ್ದಾರೆ.

ಮುದೆನೂರು ಗ್ರಾಮದಲ್ಲಿ ಶಿಕ್ಷಣ ಪಡೆದವರು ಒಟ್ಟು ೩೬.೨೭ ರಷ್ಟು ಗಂಡು ೪೭.೩೧, ಹೆಣ್ಣು ೨೫.೬೮ ಶಿಕ್ಷಣ ಪಡೆದಿದ್ದಾರೆ. ದುಡಿಯುವ ಜನ ಗಂಡು ೬೦.೨೦, ಹೆಣ್ಣು ೬೦.೪೯ ರಷ್ಟು ಇದ್ದಾರೆ. ಪರಿಶಿಷ್ಟ ಜಾತಿ ಜನ ಗಂಡು ೨೮೯, ಹೆಣ್ಣು ೩೦೨ ಜನ ಇದ್ದಾರೆ. ಪರಿಶಿಷ್ಟ ಪಂಗಡ ಜನ ಗಂಡು ೫೫, ಹೆಣ್ಣು ೪೨ ಜನರಿದ್ದಾರೆ.

ಕೋಟೆಹಾಳು ಸೂಗೂರು ಗ್ರಾಮ ಪಂಚಾಯ್ತಿಯು ಹಲವಾರು ಸಮುದಾಯಗಳ ಜನಗಳನ್ನು ಹೊಂದಿದ್ದು ಬಹುಸಂಖ್ಯಾತರಾದ ಕುರುಬರು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರನ್ನು ಬಿಟ್ಟು ಇನ್ನು ಕೆಲವು ಸಮುದಾಯಗಳು ಕಡಿಮೆ ಜನಸಂಖ್ಯೆಯಲ್ಲಿದ್ದಾರೆ. ಈ ವ್ಯವಸ್ಥೆಯಿಂದ ಕೂಡಿದ ಗ್ರಾಮವಾಗಿದೆ. ಆದರೆ ಅಲ್ಪಸಂಖ್ಯೆಯ ಸಮುದಾಯಗಳು ಬಡತನ, ನಿರುದ್ಯೋಗ, ಅನಕ್ಷರತೆ, ಮೂಲ ಸೌಕರ್ಯಗಳ ಕೊರತೆಯಿಂದ ಅನುಭವಿಸುತ್ತವೆ. ಭಾರತಕ್ಕೆ ಸ್ವಾತಂತ್ರ್ಯ ಬಂದು ೬೮ ವರ್ಷ ಪೂರೈಸಿದ್ದು, ವೈಜ್ಞಾನಿಕತೆಯ ಬೆಳವಣಿಗೆಯ ಕಾಲದಲ್ಲೂ ಸಹ ಹಲವಾರು ಸಮುದಾಯಗಳು ಮೂಢ ನಂಬಿಕೆ, ಅವೈಜ್ಞಾನಿಕತೆಯಿಂದ ಜೀವನ ನಡೆಸುತ್ತಿದ್ದಾರೆ.


ಬಡತನ ರೇಖೆಗಿಂತ ಕೆಳಗಿರುವ ಪ.ಜಾತಿ, ಪ.ಪಂಗಡ ಮತ್ತು ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ಹಲವಾರು ಯೋಜನೆಗಳು ಜಾರಿಗೆ ಬಂದರೂ ಸಹ ಫಲಾನುಭವಿಗಳ ಕೈಗೆ ದೊರೆಯದೇ ಮಧ್ಯಸ್ತಗಾರರ ಕೈ ಸೋರುತ್ತಿವೆ. ಇಂತಹ ಮೋಸದ ಕೆಲಸಗಳನ್ನು ತಪ್ಪಿಸಲು ಸರ್ಕಾರವು ಯೋಜನೆಗಳು ಫಲಾನುಭವಿಗಳಿಗೆ ತಲುಪಿದ್ದಾವೆಯೋ ಇಲ್ಲವೋ ಎಂಬುದಲ್ಲೆ ಕ್ಷೇತ್ರ ಗುಪ್ತಜರ ವರದಿಗಾರರನ್ನು ನೇಮಿಸುವ ಅಗತ್ಯವಿದೆ ಎಂಬುವುದೊಂದು ಅಭಿಪ್ರಾಯವಾಗಿದೆ.

೨.೩.೩. ಜನಸಂಖ್ಯೆ

ಕ್ಷೇತ್ರಕಾರ್ಯ ಕೈಗೊಂಡಾಗ ಭೋವಿ ಸಮುದಾಯದಲ್ಲಿ ದೊರೆತ ಮಾಹಿತಿ ಪ್ರಕಾರ ಅಧ್ಯಯನ ಕ್ಷೇತ್ರದ ಕುಟುಂಬಗಳ ಗ್ರಾಮವಾರು, ಲಿಂಗವಾರು ಜನಸಂಖ್ಯೆಯ ಹಂಚಿಕೆ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕ್ರಸಂ.	ಗ್ರಾಮಗಳ ಹೆಸರು	ಕುಟುಂಬಗಳ ಸಂಖ್ಯೆ	ಪುರುಷರ ಸಂಖ್ಯೆ	ಸ್ತ್ರೀಯರ ಸಂಖ್ಯೆ	ಒಟ್ಟು ಜನಸಂಖ್ಯೆ
೧	ಕೆ.ಸೂಗೂರು	೫೦	೧೩ ೪೯.೨೪%	೧೩೪ ೫೦.೭೫%	೨೬೪ ೬೧.೩೯%
೨	ಬೆಂಚೆಕ್ಯಾಂಪ್	೬	೧೪ ೪೬.೬೬%	೧೬ ೫೩.೩೩%	೩೦ ೬.೯೭%
೩	ಮುದೆನೂರು	೩೪	೬೨	೭೪	೧೩೬

			೪೫.೫೮%	೫೪.೪೧%	೩೧.೬೨%
ಒಟ್ಟು		೯೦	೨೦೬ ೪೭.೯೦%	೨೨೪ ೫೨.೦೯%	೪೩೦ (೧೦೦)



ಮೇಲಿನ ಕೋಷ್ಟಕವನ್ನು ನೋಡಿದಾಗ ಭೋವಿ ಸಮುದಾಯದ ಕುಟುಂಬಗಳ ಗ್ರಾಮವಾರು, ಲಿಂಗವಾರು ಜನಸಂಖ್ಯೆಯನ್ನು ಅವಲೋಕಿಸಿ ಅಂಕೆ–ಸಂಖ್ಯೆಗಳ ಸಮೇತ ಕ್ರೋಢಿಕರಿಸಲಾಗಿದೆ.

ಕೆ.ಸೂಗೂರು ಗ್ರಾಮದಲ್ಲಿ ಒಟ್ಟು ೫೦ ಕುಟುಂಬಗಳಿದ್ದು ಅದರಲ್ಲಿ ಒಟ್ಟು ಜನಸಂಖ್ಯೆ ೨೬೪ ಜನ. ಅದರಲ್ಲಿ ಪುರುಷರು ೧೩೦ ಜನ ಶೇಕಡ ೪೯.೨೪% ರಷ್ಟು, ಸ್ತ್ರೀಯರು ೧೩೪ ಜನ ಶೇಕಡ ೫೦.೭೫% ರಷ್ಟು. ಪುರುಷರಿಗಿಂತ ಸ್ತ್ರೀಯರ ಜನಸಂಖ್ಯೆ ಜಾಸ್ತಿ ಇದ್ದು ಪುರುಷ ಪ್ರಧಾನತೆಗೆ ಜಾಸ್ತಿ ಆದ್ಯತೆ ಇರುವುದರಿಂದ ಪುರುಷರೇ ಮನೆಯ ಯಜಮಾನರಾಗಿದ್ದಾರೆ.

ಬೆಂಚೆಕ್ಯಾಂಪ್ ಎಂಬ ಗ್ರಾಮದಲ್ಲಿ ೬ ಭೋವಿ ಕುಟುಂಬಗಳಿದ್ದು. ಪುರುಷರು ೧೧ ಜನ ಶೇಕಡ ೩೬.೬೬% ರಷ್ಟು, ಸ್ತ್ರೀಯರು ೧೩ ಜನ ಶೇಕಡ ೪೩.೩೫% ರಷ್ಟು ಇದ್ದು ಒಟ್ಟು ೩೦ ಜನರಿದ್ದಾರೆ. ಮುದೆನೂರು ಎಂಬ ಗ್ರಾಮದಲ್ಲಿ ೩೪ ಕುಟುಂಬಗಳಿದ್ದು, ಪುರುಷರು ೬೨ ಜನ ಶೇಕಡ ೪೩.೩೫%, ಸ್ತ್ರೀಯರು ೭೪ ಜನ ಶೇಕಡ ೫೧.೭೪ ರಷ್ಟು ಒಟ್ಟು ೧೪೩ ಜನರಿದ್ದಾರೆ. ಕೆ.ಸೂಗೂರು ಗ್ರಾಮಪಂಚಾಯ್ತಿಯಲ್ಲಿ ಒಟ್ಟು ೯೦ ಭೋವಿ ಕುಟುಂಬಗಳಿದ್ದು ಈ ಎಲ್ಲಾ ಕುಟುಂಬಗಳು ವಿಭಕ್ತ ಕುಟುಂಬಗಳಾಗಿವೆ ಹಾಗೂ ಪಂಚಾಯ್ತಿ ವ್ಯಾಪ್ತಿಯಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಮೇಲುಗೈ ಇದೆ. ಮೂರು ಹಳ್ಳಿಗಳಲ್ಲಿ ವಾಸಿಸುವ ಒಟ್ಟು ೪೩೭ ಜನಸಂಖ್ಯೆಯಲ್ಲಿ ಪುರುಷರು ೨೦೩(೪೬.೪೫%). ಸ್ತ್ರೀಯರು ೨೨೧(೫೦.೫೭%)ರಷ್ಟು ಇದ್ದಾರೆ. ಈ ಜನಸಂಖ್ಯೆಯು ದಿನಕಳೆದಂತೆ ಬೆಳೆಯುತ್ತಾ ಹೋಗುತ್ತದೆ.

ಅಡಿ ಟಿಪ್ಪಣಿಗಳು

೧. ಮಾಹಿತಿದಾರರು: ಗಂಟೆಲಿಂಗಪ್ಪ, ವಯಸ್ಸು-೭೬, ಕೆ.ಸೂಗೂರು.

೨. ಗುರುಮೂರ್ತಿ ಪೆಂಡಕೂರು ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು ಪ್ರಕಟಿತ ಲೇಖನ ಪು.೩೪

೩. ವಿಕಿಪೀಡಿಯ. ಡಾಟ್ ಕಾಮ್ (ಅಂತರ ಜಾಲ)

೪. ರೈತ ಸಂಪರ್ಕ ಕೇಂದ್ರ ಸಿರುಗುಪ್ಪ

೫. ಸಂಗಳದ ಎನ್.ಬಿ. ಭೋವಿ ಸಮುದಾಯದ ಸಾಮಾಜಿಕ ಅಧ್ಯಯನ ಪು.೧೨

೬. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಪು. ೧೩೭

೭. ಸಂಗಳದ ಎನ್.ಬಿ. ಭೋವಿ ಸಮುದಾಯದ ಸಾಮಾಜಿಕ ಅಧ್ಯಯನ ಪು.೨೯

೮. ಮಾಹಿತಿದಾರರು ಲಕ್ಷ್ಮಮ್ಮ ವಯಸ್ಸು ೭೫, ಕೆ.ಸೂಗೂರು

೯. ಪೂರ್ವೋಕ್ತ ಪು.೩೦

೧೦. ಕನ್ನಡ ರತ್ನಕೋಶ ಪರಿಷ್ಕೃತ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಪು.೪೩

೧೧. ಗಂಗಾಧರಯ್ಯ ಭೋವಿ ಸಮಾಜದ ಸಂಸ್ಕೃತಿ ಮತ್ತು ಕೊಡುಗೆಗಳು ಪು.೫

೧೨. ಅದೇ ಪು.೧೮

೧೩. ಬಾಂಬೆ ಗೆಝಿಟಿಯರ್ ಪು.೨೫

೧೪. ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೧ ಪು.೩೭೬

೧೫. ಕೊಲ್ಲಾಪುರ ಪವಾರ ಸತೀಶ ವಡ್ಡರ ಸಮಾಜ ಮತ್ತು ಸಂಸ್ಕೃತಿ ಪು.೫೬

೧೬. ಎಡ್ಗರ್ ಥರ್ಸ್ಟನ್‌ರವರ cast and tribes of south India ಸಂಪುಟ-೩, ಪು.೯೮

೧೭. ಪೂರ್ವೋಕ್ತ- ಪು.೩೨

೧೮. ಪೂರ್ವೋಕ್ತ- ಪು.೩೭

೧೯. ಪೂರ್ವೋಕ್ತ- ಪು.೩೬

೨೦. ಬೆಟಗೇರಿ ವೈವೈ ವಡ್ಡರ ಪರಂಪರೆ ಪು.೨೮.

ಅಧ್ಯಾಯ ಮೂರು

ಭೋವಿ ಸಮುದಾಯದ ಆರ್ಥಿಕ ಸ್ಥಿತಿಗತಿಗಳು

೩.೧. ಪಾರಂಪರೀಕ ಕಸುಬುಗಳು

೩.೧.೧. ಕಟ್ಟಡಗಳ ನಿರ್ಮಾಣ

೩.೧.೨. ಬೃಹತ್ ಗಾತ್ರದ ಕಲ್ಲು ಸೀಳುವುದು

೩.೧.೩. ಬಿಂಚೆ ಕುಟ್ಟುವುದು

೩.೧.೪. ಗೃಹೋಪಯೋಗಿ ಸಲಕರಣೆಗಳ ನಿರ್ಮಾಣ

೩.೧.೫. ಕೆರೆ, ಕಾಲುವೆಗಳ ನಿರ್ಮಾಣ

೩.೧.೬. ಮೂರ್ತಿಗಳ ನಿರ್ಮಾಣ

೩.೧.೭. ಗುತ್ತಿಗೆ ಹಿಡಿಯುವುದು

೩.೨. ಉಪ ಕಸುಬುಗಳು

೩.೨.೧. ಕೃಷಿ

೩.೨.೨. ವ್ಯಾಪಾರ

೩.೨.೩. ಪಶುಪಾಲನೆ

೩.೨.೪. ಕುರಿಸಾಕಾಣಿಕೆ

೩.೨.೫. ದಿನಗೂಲಿ

೩.೨.೬. ವಯಸ್ಸು ಮತ್ತು ದುಡಿಮೆ

೩.೨.೭. ಶಿಕ್ಷಣ ಪ್ರಮಾಣ

ಭೋವಿ ಸಮುದಾಯದ ಆರ್ಥಿಕ ಸ್ಥಿತಿಗತಿಗಳು


೩.೧ ಪಾರಂಪರೀಕ ಕಸುಬುಗಳು:

ಜೀವನ ನಿರ್ವಹಣೆಗಾಗಿ ಯಾವುದೇ ಒಂದು ಸಮುದಾಯವು ತನ್ನ ಬುದ್ದಿಶಕ್ತಿ ಮತ್ತು ದೈಹಿಕ ಬಲದಿಂದ ತನಗೆ ಆಸಕ್ತಿ ಇರುವ ಅಥವಾ ಒತ್ತಡದಿಂದಲೂ ಹಾಗೂ ಸಂದರ್ಭಿಕವಾಗಿಯೂ ಯಾವುದು ಒಂದು ವೃತ್ತಿಗೆ ಒಲವು ತೋರಿ ಅದೇ ವೃತ್ತಿಯನ್ನು ತಲೆಮಾರಿನಿಂದ ತಲೆಮಾರಿಗೆ ಸಾಂಪ್ರದಾಯಿಕವಾಗಿ ಮುಂದುವರಿಸುತ್ತ ಬಂದಿರುವುದನ್ನು ಪಾರಂಪರಿಕ ಕಸಬುಗಳು ಎಂದು ಕರೆಯುತ್ತಾರೆ. ಮತ್ತು ಐತಿಹಾಸಿಕ ಕಾಲದಿಂದಲೂ ಭೂವಿ ಸಮುದಾಯವು ಕಲ್ಲುಹೊಡೆಯುತ್ತಾ, ಕಟ್ಟಡಗಳನ್ನು ಕಟ್ಟುತ್ತ ತಂದೆಯಿಂದ ಮಗ ಮಗನಿಂದ ಮೊಮ್ಮಗ ಬಂದಿರುವುದನ್ನು ಕುಲಕಸಬುಗಳು ಅಥವಾ ಪಾರಂಪರಿಕ ಕಸಬುಗಳು ಎಂದು ಕರೆಯುತ್ತಾರೆ. ಈ ವೃತ್ತಿಗಳನ್ನು ಮುಂದುವರಿಸುತ್ತಾ ಬಂದಿರುವುದು ಈ ಕೆಳಗಿನಂತೆ ಕಂಡುಬರುತ್ತವೆ.

೩. ೧.೧ ಕಟ್ಟಡ ನಿರ್ಮಾಣ ಮಾಡುವವರು

ಕ್ಷೇತ್ರ ಕಾರ್ಯದಿಂದ ದೊರಕಿದ ಮಾಹಿತಿ ಪ್ರಕಾರ ಭೋವಿ ಸಮುದಾಯದ ಕುಟುಂಬಗಳು ಕಟ್ಟಡ ನಿರ್ಮಾಣ ಮಾಡುವವರ ಪ್ರಮಾಣವನ್ನು ಗ್ರಾಮವಾರು ಅಂಕೆ ಸಂಖ್ಯೆಗಳ ಸಮೇತ ಈ ಕೆಳಗಿನ ಕೋಷ್ಟಕದಲ್ಲಿ ಕ್ರೂಢೀಕರಿಸಿ ವಿಶ್ಲೇಷಿಸಲಾಗಿದೆ.

ಕ್ರ ಸಂ.	ಗ್ರಾಮದ ಹೆಸರು	ಬೇಲ್ದಾರ್/ಮೇಸ್ತ್ರಿ		ಹೆಲ್ಪರ್		ದುಡಿಯುವ ಸಮಯ	ದಿನದ ಆದಾಯ	ಒಟ್ಟು ಜನಸಂಖ್ಯೆ
		ಗಂಡು	ಹೆಣ್ಣು	ಗಂಡು	ಹೆಣ್ಣು			
೧	ಕೆ.ಸೂಗೂರು	೨೦ ೭.೫೭	–	೨೦ ೭.೫೭	೧೫ ೫.೧೮	೯ ಗಂಟೆ	೪೦೦-೨೦೦	೨೬೪ ೬೧.೩೯
೨	ಬೆಂಚೆಕ್ಯಾಂಪ್	೫ ೧೬.೬೬	–	೮ ೨೬.೬೬	೫ ೧೬.೬೬	೯ ಗಂಟೆ	೪೦೦-೨೦೦	೩೦ ೬.೯೭
೩	ಮುದೆನೂರು	೧೫ ೧೧.೦೨	–	೧೪ ೧೦.೨೯	೮ ೫.೮೮	೯ ಗಂಟೆ	೪೦೦-೨೦೦	೧೩೬ ೩೧.೬೨
ಒಟ್ಟು		೪೦ ೯.೩೦	–	೪೨ ೯.೭೬	೧ ೦.೨೩	೯ ಗಂಟೆ	೪೦೦-೨೦೦	೪೩೦ (೧೦೦)



ಕಟ್ಟಡದ ನಿರ್ಮಾಣ ಮಾಡುವುದರಲ್ಲಿ ನಿರತರಾದ ಭೋವಿ ಸಮುದಾಯ ಜನರು (ಗ್ರಾಮವಾರು) ಪ್ರಮಾಣವನ್ನು ಈ ಕೆಳಗಿನಂತೆ ತಿಳಿಸಲಾಗಿದೆ ಕೆ. ಸೂಗೂರು ಗ್ರಾಮದಲ್ಲಿ ೨೦ ಜನ ಬೇಲ್ದರ್‌ಗಳಿದ್ದು ಶೇಕಡ ೭.೫೭% ರಷ್ಟು, ಸ್ತ್ರೀಯರು ಯಾರು ಕಟ್ಟಡವನ್ನು ಕಟ್ಟುವುದಿಲ್ಲ, ಹೆಲ್ಪರ್‌ಗಳಾಗಿ ಪುರುಷರು ೨೦ ಜನ ಶೇಕಡ ೭.೫೭, ಸ್ತ್ರೀಯರು ೧೫ ಜನ ಶೇಕಡ ೫.೬೮ ರಷ್ಟು ಇದ್ದು ಇದರಲ್ಲಿ ಸ್ತ್ರೀಯರಿಗಿಂತ ಪುರುಷರು ಜಾಸ್ತಿ ಕಟ್ಟಡ ನಿರ್ಮಾಣ ಮಾಡಲು ಜಾಸ್ತಿ ಆದ್ಯತೆ ನೀಡುತ್ತಿದ್ದಾರೆ ಬೆಂಚೆಕ್ಯಾಂಪ್ ಎಂಬ ಗ್ರಾಮದಲ್ಲಿ ಒಟ್ಟು ೩೦ ಜನರಿದ್ದು ಬೇಲ್ದಾರ್‌ಗಳು ೧ ಪುರುಷರು ೫ಜನ ಶೇ(೧೬.೬೬) ಸ್ತ್ರೀಯರ ಸಂಖ್ಯೆ ಇಲ್ಲಿ ಹೆಲ್ಪರ್‌ಗಳಾಗಿ ಪುರುಷರು ೮ ಜನ ಶೇ೨೬.೬೬. ಸ್ತ್ರೀಯರು ೫ ಜನ ೧೬.೬೬.% ರಷ್ಟು ಇದ್ದಾರೆ ಮುದೆನೂರು ಎಂಬ ಗ್ರಾಮದಲ್ಲಿ ಒಟ್ಟು ೧೪೩ ಜನರಿದ್ದು ಬೇಲ್ದಾರ್‌ಗಳು ಪುರಿಷರು ೧೫ ಜನ ಶೇ ೧೧.೦೨, ಸ್ತ್ರೀಯರು ಇಲ್ಲಿ. ಹೆಲ್ಪರ್‌ಗಳು ೧೪ ಜನ ೧೦.೨೯% ಸ್ತ್ರೀಯರು ೮ ಜನ ೫.೮೮% ರಷ್ಟು ಇದ್ದಾರೆ ಪುರುಷ ಬೇಲ್ಪರ್‌ಗಳಿಗೆ ದಿನಕ್ಕೆ ೪೦೦ ಕೂಲಿ ಕೊಡುತ್ತಿದ್ದು.[೧]

೯ ಗಂಟೆಗಳ ವರೆಗೆ ಶ್ರಮವಹಿಸಬೇಕು ಸ್ತ್ರೀಯರಿಗೆ ದಿನಕ್ಕೆ ೧೫೦ ರಿಂದ ೨೦೦ರೂಗಳವರೆಗೆ ಕೂಲಿಕೊಡುತ್ತಾರೆ. ಇವರು ೯ ಗಂಟೆ ಕೆಲಸ ಮಾಡಬೇಕು. ದಿನಕ್ಕೆ ೨೦೦ರೂ ಕೂಲಿ ಕೊಡುತ್ತಾರೆ. ಈ ವೃತ್ತಿ ಮಾಡುವ ಕುಟುಂಬಗಳು ಆರ್ಥಿಕವಾಗಿ ಅಭಿವೃದ್ಧಿ ಹೊಂದದೇ ದಿನನಿತ್ಯ ಕಟ್ಟಡ ಕೆಲಸ ಮಾಡುವುದರಲ್ಲಿ ತೊಡಗಿಕೊಂಡಿವೆ. ಬಿಸಿಲು, ಬೆಂಕಿಯನ್ನದೆ ದೈಹಿಕವಾಗಿ ಮಾನಸಿಕವಾಗಿ ಶ್ರಮವಹಿಸಿ ಕೆಲಸಮಾಡುತ್ತಾರೆ. ಆದರೆ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದಾಗಿದೆ. ಈ ಸಮುದಾಯದ ಜನರ ಮಕ್ಕಳಿಗೆ ಶಿಕ್ಷಣ ಕೊಡಿಸಲಾಗದೆ, ಸರ್ಕಾರಿ ಶಾಲೆಗಳಿಗೆ ಶಿಕ್ಷಣ ಕಲಿಯಲು ಕಳುಹಿಸಲಾಗದೆ ತಮ್ಮ ವೃತ್ತಿ ಬದುಕಿನ ಸ್ಥಳಕ್ಕೆ ಕರೆದುಕೊಂಡು ಬಂದು ದುಡಿಯುತ್ತಿದ್ದಾರೆ ಹಾಗೂ ೧೫-೧೬ ವರ್ಷದ ಕೆಳಗೆ ಇರುವ ಮಕ್ಕಳಿಗೆ ವೃತ್ತಿ ಬದುಕಿನ ವಲವು ತೋರಿಸಿ ಬಾಲಕಾರ್ಮಿಕರನ್ನಾಗಿ ಮಾಡಿದ್ದಾರೆ.

ಕಟ್ಟಡ ನಿರ್ಮಾಣ ಮಾಡವವರಲ್ಲಿ ಪದವೀದರರು ಐದು ಜನರಿದ್ದಾರೆ. ಮನೆಯ ಆರ್ಥಿಕ ಸ್ಥಿತಿಗತಿ ನೋಡದೆ ಶಿಕ್ಷಣವನ್ನು ಕಲಿಯಲು ಬಿಟ್ಟು ಕಟ್ಟಡ ನಿರ್ಮಾಣ ಮಾಡುವುದರಲ್ಲಿ ತೊಡಗಿದ್ದಾರೆ. ಭೋವಿ ಸಮುದಾಯದ ಕುಟುಂಬಗಳು ಪುರಾತನ ಕಾಲದಿಂದಲೂ ಈ ವೃತ್ತಿಯನ್ನು

ಮುಂದುವರಿಸಿಕೊಂಡು ಬಂದಿದ್ದು ಕೆಲವು ಸಮಯದಲ್ಲಿ ವೃತ್ತಿಯನ್ನು ಅರಸಿ ವಲಸೆಯನ್ನು ಹೋಗುತ್ತಾರೆ ಇದರಿಂದ ಅನಾರೋಗ್ಯದ ತೊಂದರೆಯಿಂದ ಬಳಲುತ್ತಿರುವುದು ಕಂಡು ಬಂದಿದೆ.

ಬೆಲ್ದಾರ್‌ಗಳಿಗೆ ದಿನಕ್ಕೆ ೪೦೦ ರೂಪಾಯಿಯಂತೆ ವಾರಕ್ಕೆ ೨೪೦೦ ರೂ ಆದಾಯ ಬಂದರೂ ಕುಡಿತದ ಚಟಗಳಿಗೆ ಬಿದ್ದು ದಿನಕ್ಕೆ ೨೦೦ ರೂಪಾಯಿಯಂತೆ ಖರ್ಚುಮಾಡಿ ಮನೆಯ ನಿರ್ವಹಣೆಯನ್ನು ಮಾಡಲಾರದೆ ಬಡತನದಲ್ಲಿ ಜೀವನ ಮಾಡುತ್ತಿದ್ದಾರೆ, ಮತ್ತು ತಮ್ಮ ಮನೆಗಳನ್ನು ಕಟ್ಟಿಕೊಳ್ಳಲಾಗದೆ ಗುಡಿಸಲು, ತಗಡಿನ ಮನೆಗಳಲ್ಲಿ ವಾಸಿಸುತ್ತಿದ್ದಾರೆ.

ಈ ಕುಟುಂಬಗಳು ವೃತ್ತಿಯನ್ನರಸಿಕೊಂಡು ಬೆಂಗಳೂರು, ಬಾಂಬೆ ಮುಂತಾದ ನಗರಗಳಿಗೆ ವಲಸೆ ಹೋಗುತ್ತಿರುವುದು ಕಂಡು ಬರುತ್ತದೆ. ಒಮ್ಮೆ ಹೋದರೆ ೩ ತಿಂಗಳು, ೪ ತಿಂಗಳುಗಳವರೆಗೆ ವಲಸೆ ಹೋಗಿ ಮರಳಿ ವಾಸಸ್ಥಳಕ್ಕೆ ಬರುತ್ತಾರೆ. ಈ ವ್ಯವಸ್ಥೆಯಿಂದ ಇವರು ಮಕ್ಕಳಿಗೆ ಶಿಕ್ಷಣ ಕೊಡಿಸಲಾಗುತ್ತಿಲ್ಲ ಮತ್ತು ಸ್ವಂತ ಮನೆಗಳನ್ನು ನಿರ್ಮಾಣ ಮಾಡಿಕೊಳ್ಳಲಾಗುತ್ತಿಲ್ಲ.

ಪ್ರಸ್ತುತ ಸಮಾಜದಲ್ಲಿ ದೇವಾಲಯಗಳು ಭವ್ಯಪರಂಪರೆಯನ್ನು ಹೊಂದಿ ಐತಿಹಾಸಿಕ ಸ್ಥಳಗಳಾಗಿ. ದೇಶ ವಿದೇಶಗಳಿಂದ ಜನರನ್ನು ಬರಮಾಡಿಕೊಂಡಿವೆ ದೇಶದ ಸಂಸ್ಕೃತಿಯನ್ನು ಉಳಿಸುವಲ್ಲಿ ದೇವಾಲಯಗಳು ಪ್ರಮುಖವಾಗಿ ಮಹತ್ವವನ್ನು ವಹಿಸುತ್ತದೆ, ದೇವಾಲಯಗಳು ಇಲ್ಲದ ದೇಶಗಳೇ ಇಲ್ಲ, ಎಂದು ಇತಿಹಾಸ ಕಾರರು ಹೇಳುತ್ತಾರೆ ಇಂತಹ ನಾಡಿನಲ್ಲಿ ದೇವಾಲಯಗಳನ್ನು ಸುಂದರವಾಗಿ ಕಟ್ಟಿದವರು ಭೋವಿ ಸಮುದಾಯದವರು ಈ ಸಮುದಾಯದ ಜನರು ದೇಶಕ್ಕಾಗಿ ದುಡಿದ ವೀರ ಪುರುಷರು, ಆದರೆ ಇಂತಹ ದೇವಾಲಯವನ್ನು ನಿರ್ಮಿಸಿದ, ದೇವರ ಮೂರ್ತಿಯನ್ನು ಕೆತ್ತಿದ ಭೋವಿ ಜನರು ದೇವಾಲಯದ ಗರ್ಭಗುಡಿಯೊಳಗೆ ಪ್ರವೇಶ ಮಾಡುವುದಿಲ್ಲ. ಮತ್ತು ದೇವರ ಪೂಜಾರಿಗಳಾಗಿ ಇರುವುದಿಲ್ಲ ಈ ಕಾರ್ಯಗಳನ್ನು ಮಾಡುವವರು ಬ್ರಾಹ್ಮಣರು, ಇಂತಹ ವಿಷಯಗಳ ಬಗ್ಗೆ ಗಮನ ಕೊಡದೆ ತಮ್ಮ ಹೊಟ್ಟೆ ಪಾಡಿಗಾಗಿ ಇಂತಹ ಅನೇಕ ಕೆಲಸಗಳನ್ನ ಮಾಡುತ್ತ ಬಂದವರು.

ಕಟ್ಟಡ ವೃತ್ತಿಯನ್ನೆ ಅವಲಂಬಿಸಿಕೊಂಡು ಬದುಕುತ್ತಿರುವ ಕುಟುಂಬಗಳು ಇತ್ತೀಚೆಗೆ ಅನೇಕ ಕಷ್ಟವನ್ನು ಅನುಭವಿಸುತ್ತವೆ. ಏಕೆಂದರೆ ಕಟ್ಟಡಕಟ್ಟಲು ಮುಖ್ಯವಾಗಿ ಉಸುಕು(ಮರಳು) ಬೇಕು ಇಂದು ಸರ್ಕಾರವು ಮರಳು ಸಾಗಾಣಿಕೆಯನ್ನು ನಿಲ್ಲಿಸಿದ್ದರಿಂದ ಕಟ್ಟಡಗಳ ಸಂಖ್ಯೆ ಕಡಿಮೆಯಾಗಿದೆ ಮತ್ತು ಕಟ್ಟಡ ವೃತ್ತಿಮಾಡುವವರು ನಿರುದ್ಯೋಗವನ್ನು ಅನುಭವಿಸುವಂತಾಗಿದೆ.

೩.೧.೨ ಬೃಹತ್ ಗಾತ್ರದ ಕಲ್ಲು ಸೀಳುವುದು

ಮನೆಗಳ ನಿರ್ಮಾಣ, ಕೆರೆಗಳು, ವಡ್ಡುಗಳ ನಿರ್ಮಾಣ ಮಾಡಲು ಕಲ್ಲುಗಳನ್ನು ಸೀಳಿ ರಫ್ತುಮಾಡುವ ಗ್ರಾಮವಾರು ಜನಸಂಖ್ಯೆಯ ಪ್ರಮಾಣ ಈ ಕೆಳಗಿನ ಕೋಷ್ಟಕದಲ್ಲಿ ವಿಶ್ಲೇಷಿಸಲಾಗಿದೆ.

ಕ್ರ.ಸಂ.	ಗ್ರಾಮದ ಹೆಸರು	ವಯಸ್ಕರು				ಮದ್ಯ ವಯಸ್ಕರು		ಮಕ್ಕಳು		ಒಟ್ಟು ಕೆಲಸಮಾಡುವವರು	ಒಟ್ಟು ಜನಸಂಖ್ಯೆ
		ವಿವಾಹಿತ		ಅವಿವಾಹಿತ		ಗಂ	ಹೆ	ಗಂ	ಹೆ		
		ಗಂ	ಹೆ	ಗಂ	ಹೆ						
೧	ಕೆ.ಸೂಗೂರು	೫ ೧.೮೯	೪ ೧.೫೧	೨ ೦.೭೫	–	೨ ೦.೭೫	೧ ೦.೩೭	–	–	೧೪ ೫.೩೦	೨೬೪
೨	ಬೆಂಚೆಕ್ಯಾಂಪ್	೨ ೬.೬೬	–	೧ ೩.೩	–	–	–	–	–	೩ ೧೦%	೩೦
೩	ಮುದೆನೂರು	೨ ೧.೪೭	–	೩ ೨.೨೦	–	೧ ೦.೭೩	–	–	–	೬ ೪.೪೧	೧೩೬
ಒಟ್ಟು		೮ ೧.೮೬	೪ ೦.೯೩	–	೫ ೧.೧೬	೩ ೦.೬೯	೧ ೦.೨೩	–	–	೨೩ ೫.೩೪	೪೩೦ (೧೦೦)

ಪ್ರಕೃತಿಯಲ್ಲಿ ಇರುವ ಬೃಹತ್‌ಗಾತ್ರದ ಕಲ್ಲುಗಳು, ಬಂಡೆಗಳನ್ನು ಮಳೆ, ಸುತ್ತಿಗೆಯಿಂದ ಸೀಳಿ ಹಲವಾರು ಸಮುದಾಯಗಳಿಗೆ ಸಾಗಿಸುತ್ತಾರೆ, ಕೆ. ಸೂಗೂರು ಗ್ರಾಮದಲ್ಲಿ ವಯಸ್ಕ ವಿವಾಹಿತ ಪುರುಷರು ೫ ಜನರಿದ್ದು ಶೇಕಡ ೧.೮೯%. ರಷ್ಟು ಈ ವೃತ್ತಿಯಲ್ಲಿ ತೊಡಗಿದ್ದಾರೆ ಮತ್ತು ವಯಸ್ಕ ಮಹಿಳೆಯರು ೪ ಜನರಿದ್ದು ಶೇಕಡ ೧.೫೧. ರಷ್ಟು. ಇವರು ಕಲ್ಲು ಸೀಳುವ ಪುರುಷರಿಗೆ ಸಹಾಯಕರಾಗಿದ್ದು ಬಂಡೆಗಳನ್ನು ಸೀಳಲು ಬೆಂಕಿಯು ಅವಶ್ಯಕವಾಗಿದೆ ಇದಕ್ಕೆ ಸೌದೆಯನ್ನು ತಂದು ಕೊಡುತ್ತಾರೆ. ಅವಿವಾಹಿತ ಪುರುಷರು ೨ ಜನ ಶೇಕಡ ೦.೭೫% ರಷ್ಟು ಸ್ತ್ರೀಯರು ಇಲ್ಲ. ಮದ್ಯ ವಯಸ್ಕರು ಪುರುಷರು ೨ ಜನರಿದ್ದು ಶೇಕಡ ೦.೭೫% ರಷ್ಟು ಮಹಿಳೆಯರು ಒಬ್ಬರಿದ್ದು ಶೇಕಡ ೦.೩೭% ಒಟ್ಟು ಕೆ.ಸೂಗೂರು ಗ್ರಾಮದಲ್ಲಿ ಕಲ್ಲು ಸೀಳುವವರ ಸಂಖ್ಯೆ ೧೪ ಶೇಕಡ ೫.೩೦% ರಷ್ಟು.

ಬೆಂಚೆಕ್ಯಾಂಪ್ ಗ್ರಾಮದಲ್ಲಿ ವಯಸ್ಕ ಪುರುಷರು ೨ ಜನ ಶೇಕಡ ೬.೬೬ ವಿವಾಹಿತರು. ಅವಿವಾಹಿತಪುರುಷರು ಒಬ್ಬರು ಶೇ ೩.೩.ಮದ್ಯವಯಸ್ಕರು ಮತ್ತು ಮಕ್ಕಳು ಈ ವೃತ್ತಿಯಲ್ಲಿ ತೊಡಗಿಲ್ಲ. ಇಲ್ಲಿ ಒಟ್ಟು ೩ ಜನರಿದ್ದು ೧೦% ರಷ್ಟು ಮಾತ್ರ ಈ ವೃತ್ತಿಮಾಡುತ್ತಿದ್ದಾರೆ.[3]

ಭೋವಿ ಸಮುದಾಯದಲ್ಲಿ ಕಲ್ಲು ಸೀಳುವ ಕೆಲಸ ಮಾಡುವವರು ಕಲ್ಲುಗಳನ್ನು (ಪಾಳಿಸಲು) ಬೆಂಕಿಯನ್ನು ಬಳಸದೇ ಅಥವಾ ಕಟ್ಟಿಗೆಗಳಿಂದ ಬೆಂಕಿಯ ಕಾವನ್ನು ಕಲ್ಲಿಗೆ ತಟ್ಟಿಸದೇ ಮಾಡುವ ಕೆಲಸವನ್ನು 'ಹಸೆಕಲ್ಲು' ಕೆಲಸ ಎನ್ನುತ್ತಾರೆ. ಪ್ರಕೃತಿಯಲ್ಲಿ ದೊರೆಯುವ ದೊಡ್ಡ ದೊಡ್ಡ ಬಂಡೆಯಮೇಲೆ ಕುಳಿತು ಸಣ್ಣ ರಂಧ್ರ ಮಾಡಿ ಸಿಡಿಮದ್ದು ಅಥವಾ ಡೈನಮೆಟ್‌ನ್ನು ಅದರಲ್ಲಿ ಮದ್ದನ್ನು ತುಂಬು ಕಲ್ಲನ್ನು ಸಿಡಿಸುತ್ತಾರೆ. ನಂತರ ಬೇರೆ ಬೇರೆ ಮಾಡಿ ತಮಗೆ ಬೇಕಾದ ಆಕಾರಕ್ಕೆ ತುಂಡು ಮಾಡಿಕೊಳ್ಳುತ್ತಾರೆ. ಸಣ್ಣ ಸಣ್ಣ ಕಲ್ಲು ಬಂಡೆಗಳು ಅಥವಾ ಕಲ್ಲುಗಳನ್ನು ತಮ್ಮ ಮಳೆ, ಉಳಿ, ಚಮಟೆ (ಸಾಂಬಡ) ದೊಡ್ಡದಾದ ಕಬ್ಬಿಣದ ಸುತ್ತಿಗೆ ಅಥವಾ ಗನ್ ದಿಂದ ಒಡೆದು ತೆಗೆಯುತ್ತಾರೆ.

ಕಲ್ಲಿನ ಕೆಲಸ ಮಾಡುವಾಗ ಬಹಳ ಎಚ್ಚರಿಕೆಯಿಂದ ಮಾಡುತ್ತಾರೆ ಒಂದುಕ್ಷಣ ಮೈಮರೆತರೆ ಕೈ, ಕಾಲು ಮುರಿಯುತ್ತದೆ. ಇಂತಹ ಎಷ್ಟೋ ಘಟನೆಗಳು ನಡೆದಿವೆ. ಆದ್ದರಿಂದ ಈ ಭೋವಿ ಸಮುದಾಯದ ಜನರು ದಿನನಿತ್ಯ ಮಾಂಸಾಹಾರ ಮತ್ತು ಮದ್ಯಪಾನ ಮಾಡದೆ ಇರುವುದಿಲ್ಲ, ಕೆಲಸ ಮಾಡುವ ಸಮಯದಲ್ಲಿ ಮಧ್ಯಪಾನ ಮಾಡುವುದಿಲ್ಲ. ಕೆಲಸಮಾಡಿ ಮನೆಗೆ ಬರುವಾಗ ಕುಡಿಯುತ್ತಾರೆ. ಆದ್ದರಿಂದ ಈ ಸಮುದಾಯದ ಬಹಳ ಜನ ಮದ್ಯವಯಸ್ಸಿಗೆ ಬರುವುದರಲ್ಲಿ ನಿಧನರಾಗುತ್ತಾರೆ ಹಾಗೂ ನಿಶ್ಯಕ್ತರಾಗುತ್ತಾರೆ. ಈ ಕುಟುಂಬಗಳು ಕತ್ತರಿಸಿದ ಕಲ್ಲುಗಳಿಂದ ಕೋಟೆಗಳು, ಅರಮನೆಗಳನ್ನು ನಿರ್ಮಾಣ ಮಾಡಲು ಬಳಸುತ್ತಾರೆ. ಆದರೆ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದೆ ಪ್ರಾಣಿಗಳಂತೆ ದುಡಿದು ಮಾಲೀಕರನ್ನು ಬೆಳೆಸುವುದಾಗಿದೆ.

ವಿಶೇಷವಾಗಿ ಕಲ್ಲುವಡ್ಡರು ತಮ್ಮ ಆರ್ಥಿಕ ಜೀವನದಲ್ಲಿ ಬಹಳ ಹಿಂದೆ ಉಳಿದಿದ್ದರೂ ಸಮಾಜದ ಅಭಿವೃದ್ಧಿಗಾಗಿ ದೊಡ್ಡದೊಡ್ಡ ಅಣೆಕಟ್ಟುಗಳನ್ನು ಕಟ್ಟಿ ಕೃಷಿಯ ಬೆಳವಣಿಗೆಗೆ, ನಿರುದ್ಯೋಗ ಸಮಸ್ಯೆ ನಿವಾರಣೆ, ಕೈಗಾರಿಕೆಗಳ ಬೆಳವಣಿಗೆಗೆ ಸಹಕಾರಿಯಾಗಿ ಒಟ್ಟು ಇಡೀ ದೇಶದ ಆರ್ಥಿಕ ಅಭಿವೃದ್ಧಿಯ ಬೆಳವಣಿಗೆಗೆ ಕೊಡುಗೆಯನ್ನು ನೀಡಿದ್ದಾರೆ.

ಮುದೆನೂರು ಗ್ರಾಮದಲ್ಲಿ ಕಲ್ಲುಸೀಳುವ ವಯಸ್ಕ ವಿವಾಹಿತ ಪುರುಷರು ಸಂಖ್ಯೆ ಇಬ್ಬರು ಮಾತ್ರ ಇದ್ದು ಶೇಕಡ ೧.೪೭% ರಷ್ಟಿದೆ. ಆದರೆ ಮಹಿಳೆಯರು ಕಂಡುಬರುವುದಿಲ್ಲ. ಅವಿವಾಹಿತ ವಯಸ್ಕ ಪುರುಷರು ೩ ಜನರಿದ್ದು ಶೇಕಡ ೨.೨೦% ರಷ್ಟಿದೆ. ಹಾಗೂ ಮದ್ಯ ವಯಸ್ಕ ಪುರುಷರು ಒಬ್ಬರು ಇದ್ದು ಶೇಕಡ ೦.೭೩% ರಷ್ಟು ಜನರಿದ್ದಾರೆ. ಒಟ್ಟಾರೆ ಬೃಹತ್‌ಕಲ್ಲು ಸೀಳುವವರು ಕೆ.ಸೂಗೂರು ಗ್ರಾಮದಲ್ಲಿ ಅತಿಹೆಚ್ಚಾಗಿ ಇದ್ದಾರೆಯೇ ಹೊರತು ಇತರೆ ಗ್ರಾಮಗಳಲ್ಲಿ ಕಂಡುಬರುವುದಿಲ್ಲ. ಒಟ್ಟು ೧೪ ಜನರು ಶೇಕಡ ೫.೩೦% ರಷ್ಟು ಉಳಿದ ಗ್ರಾಮಗಳಾದ ಬೆಂಚೆಕ್ಯಾಂಪ್‌ನಲ್ಲಿ ೩ ಜನ, ಮುದೆನೂರು ಗ್ರಾಮದಲ್ಲಿ ೬ ಜನ ದೊಡ್ಡ ಕಲ್ಲುಗಳನ್ನು ಸೀಳಿ ಸೈಜುಕಲ್ಲುಗಳನ್ನಾಗಿ ಮಾಡುತ್ತಾರೆ ಮತ್ತು ಬಂಡೆಗಳನ್ನಾಗಿ ಮಾಡುತ್ತಾರೆ. ಬೋಡ್ರಸ್(೧ ಕೆ.ಜಿ. ಗಾತ್ರದಲ್ಲಿ) ಕಲ್ಲುಗಳನ್ನು ಕೈಯಿಂದ ಸೀಳಿ ಜೀವನ ನಡೆಸುತ್ತಿದ್ದಾರೆ. ಒಂದು ದಿನಕ್ಕೆ ೨೦ ಕಲ್ಲುಗಳನ್ನು

ಸೀಳುತ್ತಾರೆ. ೧ ಕಲ್ಲಿಗೆ ೧೨ ರೂಪಾಯಿ. ಒಂದು ದಿನದ ಆದಾಯ ೨೨೦ ರೂಪಾಯಿ ಆದರಲ್ಲಿ ೭೦% ರಷ್ಟು ಹಣ ಕುಡಿತಕ್ಕೆ ಖರ್ಚು ಮಾಡುತ್ತಾರೆ. ಮೈಕೈ ನೋವು ತಾಳಲಾರದೆ ಪ್ರತಿದಿನ ಮದ್ಯಪಾನ ಮಾಡದೆ ಇರಲು ಸಾಧ್ಯವಿಲ್ಲ ಎಂದು ತಿಳಿದುಬರುತ್ತದೆ.

ದೊಡ್ಡದಾದ ಕಲ್ಲುಗಳನ್ನು ಸೀಳಿ ಹಕ್ಕಪಕ್ಕದ ಹಳ್ಳಿಗಳಾದ ಈರಾಳು, ಬಂಡ್ರಾಳು, ಬೆಳಗಲ್ಲು, ರಾರಾವಿ ಎಂಬ ಗ್ರಾಮಗಳಿಗೆ ಸಾಗಿಸುತ್ತಾರೆ. ಬಳಕೆಗೆ ತಕ್ಕಂತೆ ಬಂಡೆಗಳನ್ನು ಸೀಳಿ ಕೊಡುತ್ತಾರೆ. ಕೆ.ಸೂಗೂರು ಗ್ರಾಮದ ಪೂರ್ವದಲ್ಲಿ ೧ ಕಿ.ಮೀ. ಅಂತರದಲ್ಲಿ ಭೋವಿ ಸಮುದಾಯದ ದೊಡ್ಡ ಕೋರೆ ಇದೆ. ಇದನ್ನು ಛಾಯಾ ಚಿತ್ರದ ಮೂಲಕ ಸೆರೆ ಹಿಡಿದು ಅನುಬಂಧದಲ್ಲಿ ನೀಡಲಾಗಿದೆ.

ಕಟ್ಟಡ ಕಾರ್ಮಿಕರ ಜೀವನ ರಕ್ಷಣೆಗಾಗಿ ಸರ್ಕಾರವು ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದರೂ ಅದರ ಉಪಯೋಗವನ್ನು ಬೆರಳೆಣಿಕೆಯಷ್ಟು ಜನ ಪಡೆಯದವರಾಗಿದ್ದಾರೆ. ಈ ಸಮುದಾಯಕ್ಕೆ ವ್ಯವಸಾಯ ಮಾಡಲು ಭೂಮಿ ಇಲ್ಲದಿರುವುದರಿಂದ ಪ್ರಕೃತಿಯಲ್ಲಿ ಇರುವ ಕಾಡುಕಲ್ಲುಗಳನ್ನು ಸೀಳಿ ಜೀವನ ನಡೆಸುವುದು ಅನಿವಾರ್ಯವಾಗಿದೆ ಎಂದು ಕಂಡುಬರುತ್ತದೆ. ಆದರೆ ಇಂದು ಸರ್ಕಾರ ಕಲ್ಲು ಗಣಿಗಾರಿಕೆ ಮಾಡುವ ಕುಟುಂಬಗಳಿಗೆ ನಿಯಂತ್ರಣಹೇರಿ ಪ್ರಕೃತಿಯ ನಾಶವಾಗುತ್ತದೆ ಎಂದು ಅರಣ್ಯ ಇಲಾಖೆಯವರು ಕಲ್ಲುಗಣಿಗಾರಿಕೆ ನಿಲ್ಲಿಸಿದ್ದಾರೆ. ಹಾಗೂ ಇತ್ತೀಚಿನ ದಿನಗಳಲ್ಲಿ ಸಿಮೆಂಟ್ ಎಳ್ಳೆ, ಇಟ್ಟಿಗೆ ಬಳಸುವುದರಿಂದ ಕಲ್ಲುಗಳಿಗೆ ಬೇಡಿಕೆ ಕಡಿಮೆಯಾಗಿ ಕಲ್ಲು ಸೀಳುವ ಜನರು ನಗರ ಪ್ರದೇಶಗಳಿಗೆ ವಲಸೆ ಹೋಗುವಂತಾಗಿದೆ.

೩.೧.೨. ಜಲ್ಲಿ ಕುಟ್ಟುವುದು

ಈ ಅಧ್ಯಯನದಲ್ಲಿ ಗ್ರಾಮವಾರು ಕುಟುಂಬಗಳಲ್ಲಿ ಜಲ್ಲಿಹೊಡೆದು ಜೀವನ ನಡೆಸುವವರ ಅಂಕಿ–ಸಂಖ್ಯೆಗಳ ಆಧಾರದಿಂದ ಸ್ತ್ರೀಯರು, ಪುರುಷರು, ಚಿಕ್ಕಮಕ್ಕಳು ಎಂದು ಮೂರು ಗುಂಪುಗಳಲ್ಲಿ ವಿಂಗಡಿಸಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕ್ರಸಂ.	ಗ್ರಾಮದ ಹೆಸರು	ಪುರುಷರು	ಸ್ತ್ರೀಯರು	ಮಕ್ಕಳು		ಒಟ್ಟು
				ಗಂಡು	ಹೆಣ್ಣು	
೧	ಕೆ.ಸೂಗೂರು	೫ ೧.೮೯	೬ ೨.೨೭	೨ ೦.೭೫	೧ ೦.೩೭	೧೪ ೫.೩೦
೨	ಬೆಂಚಿಕ್ಯಾಂಪ್	೨ ೬.೬೬	೨ ೬.೬೬	–	–	೪ ೧೩.೩೩
೩	ಮುದೆನೂರು	೪ ೨.೨೦	೫ ೩.೬೭	–	–	೯ ೬.೬೧

ಒಟ್ಟು	೧೧ ೨.೫೫	೧೩ ೩.೦೨	೨ ೦.೪೧	೧ ೦.೨೩	೨೭(೧೦೦) ೬.೨೭

ಕೆ.ಸೂಗೂರು ಗ್ರಾಮದಲ್ಲಿ ಜಲ್ಲಿಹೊಡೆದು ಜೀವನ ನಡೆಸುವ ಪುರುಷರು ೫ ಜನರಿದ್ದು ೧.೮೯%. ರಷ್ಟು. ಸ್ತ್ರೀಯರು ೬ ಜನ ೨.೨೭%. ಚಿಕ್ಕಮಕ್ಕಳು ಪುರುಷರು ಇಬ್ಬರು ೦.೭೫%. ಒಟ್ಟು ೧೪ ಜನಿದ್ದು ಒಟ್ಟು ೨೬೪ ಜನರಲ್ಲಿ ಜಲ್ಲಿಹೊಡೆದು ಜೀವನ ನಡೆಸುವವರು ೫.೩೦% ರಷ್ಟು ಇದ್ದಾರೆ. ಬೆಂಚೆಕ್ಯಾಂಪ್ ಗ್ರಾಮದಲ್ಲಿ ಪುರುಷರು ೨ ಜನ ೬.೬೬. ಸ್ತ್ರೀಯರು ೨ ಜನ ೬.೬೬. ಒಟ್ಟು ಈ ಗ್ರಾಮದಲ್ಲಿ ೩೦ ಜನರಿದ್ದು ೪ ಜನರು ಈ ವೃತ್ತಿಯಲ್ಲಿ ತೊಡಗಿದ್ದಾರೆ. ೧೩.೩೩ ಮಾತ್ರ ಇದ್ದಾರೆ. ಮುದೆನೂರು ಗ್ರಾಮದಲ್ಲಿ ಒಟ್ಟು ೧೪೩ ಜನರಿದ್ದು ಬಿಂಚೆಕುಟ್ಟುವವರು ಪುರುಷರು ೪ ಜನ ೨.೨೦. ಸ್ತ್ರೀಯರು ೫ ಜನ ೩.೬೭. ಮಕ್ಕಳು ಇಲ್ಲ. ಒಟ್ಟು ೯ ಜನ ೬.೨೯% ರಷ್ಟು ಜನರು ಜಲ್ಲಿಹೊಡೆದು ಜೀವಿನ ನಡೆಸುತ್ತಿದ್ದಾರೆ. ಇಡಿ ಮೂರು ಹಳ್ಳಿಗಳ ಒಟ್ಟು ೪೩೭ ಜನರಲ್ಲಿ ೨೭ ಜನ ಈ ವೃತ್ತಿ ಮಾಡುತ್ತಿದ್ದು ೬.೨೭ ರಷ್ಟು ಮಾತ್ರ ಇದ್ದಾರೆ. ಈ ಕುಟುಂಬಗಳು ತಮ್ಮ ಜಮೀನು ಮಳೆಯಾಶ್ರಿತವಾಗಿದ್ದು ಬಿತ್ತಲು ಬರದಿರುವುದರಿಂದ ಆ ಜಮೀನಿನಲ್ಲಿ ೨ ಅಡಿ ಆಳದಲ್ಲಿ ತೋಡಿದಾಗ ಬಂಡೆ ಬಂದಿದ್ದು ಆ ಬಂಡೆಯನ್ನು ಬೆಂಕಿಯಿಂದ ಸುಟ್ಟು ಕಲ್ಲನ್ನು ಹೊಡೆಯುತ್ತಾ ಜೀವನ ನಡೆಸುತ್ತಾರೆ.

ಇದರಲ್ಲಿ ಕೆ.ಸೂಗೂರು ಗ್ರಾಮದ ಜನರು ಈ ವೃತ್ತಿಯಲ್ಲಿ ಜಾಸ್ತಿ ತೊಡಗಿರುವುದು ಕಂಡುಬಂದಿದೆ. ಬಿಂಚೆಯನ್ನು ಟ್ರಾಕ್ಟರನ ಟ್ರಿಪ್ ಪ್ರಕಾರ ಮಾರಾಟ ಮಾಡುತ್ತಾರೆ. ಒಂದು ಟ್ರಿಪ್‌ಗೆ ೫೦೦೦ ಸಾವಿರ ರೂಪಾಯಿಗಳು ಈ ಟ್ರಿಪ್ ಜಲ್ಲಿ ಹೊಡೆಯಲು ತೆಗೆದುಕೊಳ್ಳುವ ಸಮಯ ಒಂದು ತಿಂಗಳುಗಳ ಕಾಲ ಬೇಕಾಗುತ್ತದೆ. ಇದಕ್ಕೆ ಮೂಲಕಾರಣ ಬೇರೆ ವೃತ್ತಿಮಾಡಲು ಅದರಲ್ಲಿ ಅನುಭವ ಇಲ್ಲದಿರುವುದು ಮತ್ತು ಆರ್ಥಿಕವಾಗಿ ಅಭಿವೃದ್ಧಿ ಆಗದಿರುವುದು ಮತ್ತು ಪಾರಂಪರಿಕತೆಯಿಂದ ಬೆಳಸಿಕೊಂಡು ಬಂದಿರುವುದು.

ಈ ಸಮುದಾಯದ ಜನರು ಹಿಂದಿನ ಕಾಲದಿಂದಲೂ ರಸ್ತೆಗಳ ನಿರ್ಮಾಣಕ್ಕೆ, ಮನೆಗಳ ನಿರ್ಮಾಣಕ್ಕೆ ಬಿಂಚೆಗಳನ್ನು ಒಡೆಯುತ್ತಾ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಿದವರು. ಯಾವುದೇ ದೇಶ ಅಭಿವೃದ್ಧಿ ಹೊಂದಲು ಮುಖ್ಯವಾಗಿ ರಸ್ತೆ ಸಂಪರ್ಕ ಬೇಕು. ಅಂತಹ ವ್ಯವಸ್ಥೆಗೆ ಕಲ್ಲು, ಮಣ್ಣು ಒಡೆದು ಶ್ರಮವಹಿಸಿ ರಸ್ತೆಯನ್ನು ಮಾಡಿದವರು ಈ ಭೋವಿ ಸಮುದಾಯದ ಜನರು. ಆದರೆ ಇಂದು ಆಧುನಿಕ ಯಂತ್ರಗಳು ಬಂದು ರಸ್ತೆಗೆ ಬೇಕಾದಷ್ಟು ಕ್ಷಣಾರ್ದದಲ್ಲಿ ಲೋಡ್‌ಗಟ್ಟಲೆ ಬಿಂಚೆಕಳಿಸಿಕೊಡುತ್ತದೆ. ಕೈಯಿಂದ ಬಿಂಚೆವಡಿಯುವವರು ನಿಧಾನವಾಗಿ ವಡೆಯುವುದರಿಂದ ಈ ವೃತ್ತಿಯಲ್ಲಿರುವ ಕುಟುಂಬಗಳು ಅಂತಂತ್ರವಾಗಿವೆ ಹಾಗೂ ರಸ್ತೆಗಳು, ದೊಡ್ಡ ದೊಡ್ಡ ಕಟ್ಟಡಗಳಿಗೆ

ಯಂತ್ರಗಳಿಂದ ಪುಡಿಮಾಡಿದ ಜಲ್ಲಿಯನ್ನು ಬಳಸುತ್ತಾರೆ. ಬಹಳ ಬೇಕಾಗಿರುವುದರಿಂದ ಈ ಜನರಿಂದ ಕೊಳ್ಳದೇ ಇರುವುದರಿಂದ ಆರ್ಥಿಕವಾಗಿ ಹಿಂದುಳಿದಿರುವುದು ಕಂಡುಬರುತ್ತದೆ.

೩.೧.೪ ಗೃಹೋಪಯೋಗಿ ಸಲಕರಣೆಗಳ ನಿರ್ಮಾಣ

ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಗಮನಿಸಿದಾಗ ಈ ಸಮುದಾಯದ ಸಾಂಪ್ರದಾಯಿಕ ವೃತ್ತಿ ವೈವಿಧ್ಯತೆ ಕುರಿತು ಸಂಗ್ರಹಿಸಿದ ದತ್ತಾಂಶಗಳನ್ನು ಗ್ರಾಮವಾರು ಒಟ್ಟು ಜನರ ಸಂಖ್ಯೆ ಹಾಗೂ ದಿನದ ಆದಾಯವನ್ನು ಈ ಕೆಳಗಿನಂತೆ ಕೋಷ್ಟಕದಲ್ಲಿ ವಿಶ್ಲೇಷಿಸಲಾಗಿದೆ.

ಕ್ರ.ಸಂ.	ಗ್ರಾಮದ ಹೆಸರು	ಪುರುಷರು	ಒಟ್ಟು ಪುರುಷರು	ದಿನದ ಆದಾಯ
೧	ಕೆ.ಸೂಗೂರು	೫ ೧.೮೯%	೧೩೦ ೬೧.೩೯	೩೦೦
೨	ಬೆಂಚಿಕ್ಯಾಂಪ್	೩ ೧೦%	೧೪ ೬.೯೭	೩೦೦
೩	ಮುದೆನೂರು	೨ ೧.೪೭	೬೨ ೩೧.೬೨	೩೦೦
ಒಟ್ಟು		೧೦ ೨.೩೨	೨೦೬(೧೦೦) ೪೭.೯೦	-

ಕ್ಷೇತ್ರಕಾರ್ಯದ ಮೂಲಕ ಗಮನಿಸಿದಾಗ ಗ್ರಾಮವಾರು ಗೃಹಬಳಕೆಯ ಸಲಕರಣೆ ಮಾಡುವವರು ಸ್ತ್ರೀಯರು, ಮಕ್ಕಳು ಇಲ್ಲ. ಕೆ.ಸೂಗೂರು ಗ್ರಾಮದಲ್ಲಿ ೫ ಜನ ಪುರುಷರಿದ್ದು ೧.೮೯%. ಬೆಂಚಿಕ್ಯಾಂಪ್ ಗ್ರಾಮದಲ್ಲಿ ೩ ಜನ ಪುರುಷರು ೧೦%. ಮುದೆನೂರು ಗ್ರಾಮದಲ್ಲಿ ೨ ಜನ ೧.೪೭. ಅತಿಹೆಚ್ಚು ಜನ ಗೃಹ ಬಳಕೆಯ ಸಲಕರಣೆ ಮಾಡುವ ಜನರು ಕೆ.ಸೂಗೂರು ಗ್ರಾಮದಲ್ಲಿ ೧೩೦ ಪುರುಷರಲ್ಲಿ ೫ ಜನರು ೧.೮೯% ರಷ್ಟು ಇದ್ದಾರೆ. ಉಳಿದ ಗ್ರಾಮಗಳಲ್ಲಿ ಕಡಿಮೆ ಇದ್ದಾರೆ. ಒಟ್ಟು ೧೦ ಜನರಿದ್ದು ೨.೩೨% ಇದ್ದಾರೆ. ಇತ್ತೀಚಿನ ದಿನಗಳಲ್ಲಿ ಮಿಕ್ಸರ್, ಗ್ರ್ಯಾಂಡರ್‌ಗಳ ಬಳಕೆ ಜಾಸ್ತಿ ಮಾಡುವುದರಿಂದ ಗೃಹಬಳಕೆಯ ವರಳುಕಲ್ಲು, ಬೀಸುವ ಕಲ್ಲುಗಳನ್ನು ಮಾಡುವವರು ಕಡಿಮೆಯಾಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಸಾಂಪ್ರದಾಯಿಕವಾಗಿ ಗೌರಿಹುಣ್ಣಿಮೆಯದಿನ ಬೀಸುವ ಕಲ್ಲಿಗೆ, ವರಳು ಕಲ್ಲಿಗೆ ಪೂಜೆ ಮಾಡಲು ಈ ಸಲಕರಣೆ ಕೊಳ್ಳುತ್ತಿದ್ದಾರೆ.[9]

ಆಧುನಿಕ ಸಲಕರಣೆಗಳ ಬಳಕೆ ಜಾಸ್ತಿಯಾಗಿರುವುದರಿಂದ ಪ್ರಾಚೀನ ಸಲಕರಣೆಗಳಿಗೆ ಬೇಡಿಕೆ ಇಲ್ಲದಂತಾಗಿ ಗೃಹಕೈಗಾರಿಕೆಗಳು ಮರೆಯಾಗುತ್ತಿವೆ. ಮತ್ತು ಗ್ರಾಮೀಣ ಕುಶಲ ಕರ್ಮಿಗಳು ನಿರುದ್ಯೋಗಿಗಳಾಗಿದ್ದಾರೆ. ಇದರಿಂದ ಬಡತನ, ಆರ್ಥಿಕತೆಯ ತೊಂದರೆ ಹೆಚ್ಚಾಗುತ್ತಿದೆ.

೩.೧.೫. ಕೆರೆ, ಕಾಲುವೆಗಳ ನಿರ್ಮಾಣ

ಭೋವಿ ಸಮುದಾಯದ ಕುಟುಂಬಗಳು ಕೆರೆ, ಕಾಲುವೆಗಳನ್ನು ನಿರ್ಮಾಣ ಮಾಡುತ್ತಿದ್ದು ಗ್ರಾಮವಾರು ಜನರ ಜನಸಂಖ್ಯೆ, ದಿನದ ಆದಾಯ, ಒಟ್ಟು ಪ್ರಮಾಣವನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಕ್ರಸಂ.	ಗ್ರಾಮದ ಹೆಸರು	ಗಂಡು	ಹೆಣ್ಣು	ದಿನದ ಆದಾಯ		ಒಟ್ಟು ಬೇಲ್ದಾರ್	ಹೆಲ್ಪಾರ್	ಒಟ್ಟು
				ಗಂಡು	ಹೆಣ್ಣು			
೧	ಕೆ.ಸೂಗೂರು	೩೦ ೧೧.೩೬	೧೯ ೭.೧೯	೪೦೦	೧೫೦	೨೫ ೯.೪೬	೨೪ ೯.೦೯	೪೯ ೧೮%
೨	ಬೆಂಚಿಕ್ಯಾಂಪ್	೧೦ ೩೩.೩೩	೫ ೧೬	೪೦೦	೧೫೦	೫ ೧೬%	೧೦ ೩೩%	೧೫ ೫೦%
೩	ಮುದೆನೂರು	೧೫ ೧೦%	೧೮ ೧೨%	೪೦೦	೧೫೦	೯ ೬.೨೯	೨೪ ೧೬%	೩೩ ೨೩%
ಒಟ್ಟು								೯೭ (೧೦೦)

ಕೆ.ಸೂಗೂರು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಕೆರೆ, ಕಾಲುವೆಗಳನ್ನು ನಿರ್ಮಾಣ ಮಾಡುವ ಭೋವಿ ಸಮುದಾಯ ಒಟ್ಟು ೯೦ ಕುಟುಂಬಗಳು ಕಂಡು ಬಂದಿದ್ದು, ಅದರಲ್ಲಿ ಕೆ, ಸೂಗೂರು ಗ್ರಾಮದಲ್ಲಿ ಗಂಡು ೩೦ ಜನ ಶೇ ೧೧.೩೬%. ಹೆಣ್ಣು ೧೯ ಜನ, ಶೇ೭.೧೯% ಅದರಲ್ಲಿ ಬೇಲ್ದಾರ್‌ಗಳು ೨೫ ಜನ ಶೇ ೯.೪೬% ಹೆಲ್ಪಾರ್‌ಗಳು ೨೪ ಜನ ಶೇ ೯.೦೯%ರಷ್ಟು ಒಟ್ಟು ೪೯ ಜನ ಶೇ ೧೮% ರಷ್ಟು.

ಬೆಂಚಿಕ್ಯಾಂಪ್‌ನಲ್ಲಿ ಗಂಡು ೧೦ ಜನ ಶೇ ೩೩%, ಹೆಣ್ಣು ೫ ಜನ ಶೇ ೧೬%, ಅದರಲ್ಲಿ ೫ ಜನ ಬೇಲ್ದಾರ್‌ಗಳು ಶೇ ೧೬% ಹೆಲ್ಪಾರ್‌ಗಳು ೧೦ ಜನ ಶೇ ೩೩% ರಷ್ಟು ಒಟ್ಟು ೧೫ ಜನ ಶೇ. ೫೦% ರಷ್ಟು.

ಮುದೆನೂರು ಗ್ರಾಮದಲ್ಲಿ ಗಂಡು ೧೫ ಜನ ಶೇ೧೦%, ಹೆಣ್ಣು ೧೮ ಜನ ಶೆ ೧೨%. ಅದರಲ್ಲಿ ಬೇಲ್ದಾರ್‌ಗಳು ೯ ಜನ ಶೇ ೬.೨೯%. ಹೆಲ್ಪಾರ್‌ಗಳು ೨೪ ಜನ ಶೇ ೧೬% ರಷ್ಟು ಇದ್ದು ಒಟ್ಟು ೩೩ ಜನರಿದ್ದು ಶೇ ೨೩% ರಷ್ಟು ಕೆ.ಸೂಗೂರು ಗ್ರಾಮದಲ್ಲಿ ಒಟ್ಟು ೪೯ ಜನ ಅತಿ ಹೆಚ್ಚು ಕಾಲುವೆ. ಕೆರೆಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿದವರು ಇವರ ಹಿರಿಯರು ಪಾರಂಪರಿಕತೆಯಿಂದ

ಇಲ್ಲಿಯವರೆಗೆ ಕೆರೆ, ಕಾಲುವೆ ನಿರ್ಮಾಣ ಮಾಡಲು ಹೆಚ್ಚು ಆದ್ಯತೆ ನೀಡಿದ್ದು ಸಮಾಜದ ಹಲವಾರು ಸಮುದಾಯ, ಪಕ್ಷಿಸಂಕುಲಗಳಿಗೆ ಉಪಯುಕ್ತವಾಗಿದೆ, ಬೇಲ್ದಾರಗಳಿಗೆ ದಿನಕ್ಕೆ ೪೦೦ ರೂಪಾಯಿ, ಹೆಲ್ಪಾರ್‌ಗಳಿಗೆ ಗಂಡುಮಕ್ಕಳಿಗೆ ೨೦೦ , ಹೆಣ್ಣುಮಕ್ಕಳಿಗೆ ದಿನಕ್ಕೆ ೧೫೦ . ಈ ಭೋವಿ ಸಮುದಾಯದ ಜನರು ಇಂತಹ ಕಷ್ಟಕರವಾದ ಕೆಲಸಗಳನ್ನು ಇಷ್ಟಪಟ್ಟು ಮಾಡಿ ಮುಗಿಸುತ್ತಾರೆ, ಬಿಸಿಲು, ಮಳೆಯನ್ನು ಲೆಕ್ಕಿಸದೆ ಧೈರ್ಯದಿಂದ ಪೂರ್ಣಗೊಳಿಸುತ್ತಾರೆ. ಈ ಸಮುದಾಯದ ಶ್ರಮಕ್ಕೆ ತಕ್ಕ ಪ್ರತಿಫಲ ಇಲ್ಲದಂತಾಗಿದೆ. ಇಂದು ಆಧುನಿಕ ಯಂತ್ರಗಳ ಬಳಕೆಯಿಂದ ಕೆರೆ, ಕಾಲುವೆಯ ಬದುವು ನಿರ್ಮಾಣ ಮಾಡುವ ಜನರಿಗೆ ಕೆಲಸವಿಲ್ಲದಂತಾಗಿ ಪರದಾಡುವ ಸ್ಥಿತಿಯಲ್ಲಿದ್ದಾರೆ. ಯಂತ್ರಗಳು ಕಾಲುವೆ ಕಟ್ಟಲು ಬೇಕಾಗುವ ಕಾಂಕ್ರಿಟ್‌ನ್ನು ತಾನೇ ಸಿದ್ದಮಾಡಿಕೊಂಡು ಬೇಕಾದಲ್ಲಿಗೆ ತಾನೆ ತಂದು ಒದಗಿಸುತ್ತದೆ. ಇದರಿಂದ ಕೆಲಸ ಬೇಗ ಮುಕ್ತಾಯವಾಗಿ ಗುತ್ತಿಗೆ ಹಿಡಿದವರು ಆರ್ಥಿಕವಾಗಿ ಅಭಿವೃದ್ಧಿ ಹೊಂದುವುದರಿಂದ ಭೋವಿ ಸಮುದಾಯದ ಎಲ್ಲಾ ಜನರಿಗೂ ಕೆಲಸ ಇಲ್ಲದಂತಾಗಿದೆ.

೩.೧.೬ ಮೂರ್ತಿ ನಿರ್ಮಾಣ

ಭಾರತೀಯ ಸಂಸ್ಕೃತಿಯ, ಇತಿಹಾಸದ ಕುರುಹುಗಳಾದ ಉಬ್ಬು ಶಿಲ್ಪಗಳು, ವಾಸ್ತುಶಿಲ್ಪ, ದೇವಾಲಯದ ಗೋಪುರಗಳ ನಿರ್ಮಾಣ ಮಾಡಿಕೊಡುವುದರಲ್ಲಿ ಬಹುದೊಡ್ಡ ಕೊಡುಗೆ ಸಲ್ಲಿಸಿದವರು ಭೋವಿ ಸಮುದಾಯದ ಜನರು ಪರಂಪರೆಯನ್ನು ಉಳಿಸಿಕೊಂಡು ಬಂದು ಇಂದಿಗೂ ಸಹ ವೃತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ ಇಂತಹ ಕುಟುಂಬದ ಜನಸಂಖ್ಯೆಯನ್ನು ಗ್ರಾಮವಾರು ಈ ಕೆಳಗಿನ ಕೋಷ್ಟಕದಲ್ಲಿ ವಿಶ್ಲೇಷಿಸಲಾಗಿದೆ.

ಕ್ರಸಂ.	ಗ್ರಾಮದ ಹೆಸರು	ಮೂರ್ತಿ ನಿರ್ಮಾಣ ಮಾಡುವವರ ಸಂಖ್ಯೆ	ಶಿಕ್ಷಣ	ತಿಂಗಳ ಆದಾಯ	ವಯಸ್ಸು
೧	ಕೆ.ಸೂಗೂರು	೪ ೦.೯೩%	–	೮೦೦೦	೪–೫೦
೨	ಬೆಂಚೆಕ್ಯಾಂಪ್	–	–	–	–
೩	ಮುದೆನೂರು	–	–	–	–

ಮೇಲಿನ ಕೋಷ್ಟಕವನ್ನು ಗಮನಿಸಿ ಗ್ರಾಮವಾರು ಮೂರ್ತಿಗಳ ಪ್ರಮಾಣವನ್ನು ಸಂಖ್ಯೆ ಹಾಗೂ ಶೇಕಡಾವಾರು ಕುರಿತು ವಿಶ್ಲೇಷಣೆ ನೀಡಲಾಗಿದೆ.

ಕೆಸೂಗೂರು ಗ್ರಾ.ಪಂ ವ್ಯಾಪ್ತಿಯಲ್ಲಿ ಬರುವ ಬೆಂಚೆಕ್ಯಾಂಪ್, ಮುದೆಸೂರು, ಈರಾಳು, ಬಂಡ್ರಾಳು, ಕೊಟ್ಟಳು ಎಂಬ ಗ್ರಾಮಗಳಲ್ಲಿ ಕೆ.ಸೂಗೂರು ಗ್ರಾಮದಲ್ಲಿ ಮಾತ್ರ ದೇವರ ಮೂರ್ತಿಗಳನ್ನು ಮಾಡುವವರು ೪ ಜನರಿದ್ದಾರೆ ಹಾಗೂ ಗುಡಿ, ಗೋಪುರಗಳಲ್ಲಿ ಮೂರ್ತಿಗಳನ್ನು ಕೆತ್ತನೆ ಮಾಡುತ್ತಾರೆ ಇವರು ಕಲ್ಲಿನಲ್ಲಿ ಮೂರ್ತಿ ಕೆತ್ತನೆ ಮಾಡುತ್ತಾರೆ, ಸಿಮೆಂಟ್‌ನಿಂದಲೂ ಸಹ ಮೂರ್ತಿ ಮಾಡುತ್ತಾರೆ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು ೪೩೭ ಜನರಲ್ಲಿ ೪ ಜನ ಶೇಕಡ ೦.೯೩% ರಷ್ಟು. ಇವರು ಶಿಕ್ಷಣವೇನು ಕಲಿತಿಲ್ಲ ಪೂರ್ವಜರ ವೃತ್ತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ತಿಂಗಳ ಆದಾಯ ೮೦೦೦/- ರೂಪಾಯಿಗಳು ಇವರ ವಯಸ್ಸು ೪೦-ರಿಂದ-೫೦ ವರ್ಷಗಳು ಇವೆ."[೭]

ಈ ಮೂರ್ತಿಗಳನ್ನು ಮಾಡುವ ಜನರಿಗೆ ಕಟ್ಟಡ ಕೆಲಸ ಬರುವುದಿಲ್ಲ, ಕೃಷಿ ಮಾಡಲು ಭೂಮಿ ಇಲ್ಲದಿರುವುದರಿಂದ ಈ ಮೂರ್ತಿ ನಿರ್ಮಾಣ ವೃತ್ತಿಯಿಂದ ಜೀವನ ನಡೆಸುತ್ತಾರೆ. ಕೆಲವರು ಇತರೆ ವೃತ್ತಿಯನ್ನು ಅರಿಸಿಕೊಂಡು ಬೇರೆ ಬೇರೆ ಊರುಗಳಿಗೆ ವಲಸೆಹೋಗುತ್ತಾರೆ. ಅಲ್ಲಿ ಸೆಡ್‌ಗಳಲ್ಲಿ, ಗುಡಿಸಲುಗಳಲ್ಲಿ, ದೇವರ ಗುಡಿಗಳಲ್ಲಿ ಇದ್ದುಕೊಂಡು ಕೆಲಸ ಮಾಡುತ್ತಾರೆ. ಈ ಸಮುದಾಯವು ನಿರಂತರ ಕೆಲಸದಲ್ಲಿ ತೊಡಗಿದ್ದರೂ ಆರ್ಥಿಕವಾಗಿ ಅಭಿವೃದ್ಧಿ ಕಂಡಿಲ್ಲ, ದಿನದ ಜೀವನ ನಡೆದಲ್ಲಿಗೆ ವೆಚ್ಚಮಾಡಿದಲ್ಲಿಗೆ ಎಂಬ ರೀತಿಯಲ್ಲಿ ಇದ್ದಾರೆ.

ಇತಿಹಾಸದಲ್ಲಿ ರಾಜ, ಮಹಾರಾಜರ ಹೆಸರುಗಳು ಕಂಡುಬರುತ್ತವೆ. ಆದರೆ ಇತಿಹಾಸ ಉಳಿವಿಗೆ ಕಾರಣೀಕರ್ತರಾದವರ ಹೆಸರು ಎಲ್ಲಿಯೂ ಕಂಡುಬರುವುದಿಲ್ಲ. ಆದರೆ ಪರಂಪರಾನುಗತವಾಗಿ ಉಳಿಸಿಕೊಂಡುಬಂದಿರುವ ವೃತ್ತಿಯ ಆಧಾರದ ಮೇಲೆ ಈ ಸಮುದಾಯದ ಕೊಡುಗೆ ಗುರುತಿಸಬಹುದು ಮತ್ತು ಹಲವಾರು ಸಂಶೋಧನಾಕಾರರು ಸಂಗ್ರಹಿಸಿದ ಮಾಹಿತಿಯಿಂದ ಈ ಸಮುದಾಯದ ಸೇವೆ ಅಜರಾಮರವಾಗಿದೆ ಎಂಬುದನ್ನು ತಿಳಿಯಬಹುದಾಗಿದೆ.

ಆಧುನಿಕ ಯುಗದಲ್ಲಿ ಯಾರೂ ಸಹ ಕಲ್ಲಿನ ಮೂರ್ತಿಗಳನ್ನು ಕೆತ್ತನೆ ಮಾಡಿಸುವುದಿಲ್ಲ. ಮೂರ್ತಿಗಳನ್ನು ಕೆತ್ತಿಸಿದರೂ ಬಹಳ ಕಡಿಮೆ. ಆದ್ದರಿಂದ ಕೆತ್ತನೆಯ ಕೆಲಸವನ್ನು ಮಾಡುವವರು ವ್ಯಾಪಾರ, ದಿನಗೂಲಿ, ಕೃಷಿ, ಕೃಷಿಕೂಲಿಯಂತಹ ವೃತ್ತಿಯನ್ನು ಮಾಡುತ್ತಾ ಬಡತನದಿಂದ ಜೀವನ ನಡೆಸುವುದು ಕಂಡುಬಂದಿದೆ.

೩.೧.೭. ಗುತ್ತಿಗೆ ಹಿಡಿಯುವುದು

ಈ ವಿಷಯಕ್ಕೆ ಸಂಬಂಧಿಸಿದಂತೆ ಕ್ಷೇತ್ರ ಅಧ್ಯಯನ ಕೈಗೊಂಡ ಸಮಯದಲ್ಲಿ ಗುತ್ತಿಗೆದಾರರ ಸಂಖ್ಯೆ, ಗುತ್ತಿಗೆಹಿಡಿಯುವ ಮನೆಗಳ ಸಂಖ್ಯೆಯನ್ನು ಸಂಗ್ರಹಿಸಿ ಈ ಕೆಳಗಿನ ಕೋಷ್ಟಕದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಗ್ರಾಮವಾರು ಗುತ್ತಿಗೆದಾರರ ಮಾಹಿತಿ

ಕ್ರ ಸ ಂ.	ಗ್ರಾಮದ ಹೆಸರು	ಗುತ್ತಿಗೆದಾರ ರ ಸಂಖ್ಯೆ	ಕಟ್ಟಡಗಳ ಸಂಖ್ಯೆ	ಮನೆಗಳ ಸಂಖ್ಯೆ	ಅಳತೆ ಮಾಪಕ	ಗುತ್ತಿಗೆ ಮೊತ್ತ ರೂ.	ಕಟ್ಟಡ ಪೂರ್ಣಗೊ ಳಿಸುವ ಸಮಯ	ಪೂರ್ಣಮಾ ಡುವ ಕಟ್ಟಡ ಸಂಖ್ಯೆ
೧	ಕೆ.ಸೂಗೂರು	೧೦ ೩.೭೮%	೧೫	೧೫	ಯುನಿಟ ್ ಪ್ರಕಾರ	೧ ಯುನಿಟ್‌ಗೆ ೧೫೦೦೦	೧,೨ ವರ್ಷ	೧೫
೨	ಬೆಂಚೆಕ್ಯಾಂಪ್	೩. ೧೦%	೩	೩	ಯುನಿಟ ್ ಪ್ರಕಾರ	೧ ಯುನಿಟ್‌ಗೆ ೧೫೦೦೦	೧೫ ತಿಂಗಳು	೩
೩	ಮುದೆನೂರು	೫ ೩.೪೯%	೫	೫	ಯುನಿಟ ್ ಪ್ರಕಾರ	೧ ಯುನಿಟ್‌ಗೆ ೧೫೦೦೦	೧೮ ತಿಂಗಳು	೫
	ಒಟ್ಟು	೧೮ ೪.೧೧%	**೨೩**	**೨೩**				**೨೩**

ಭೋವಿ ಸಮುದಾಯದಲ್ಲಿ ಕಟ್ಟಡಗಳನ್ನು ಗುತ್ತಿಗೆ ಹಿಡಿಯುವವರ ಸಂಖ್ಯೆ ೧೦ ಜನರಿದ್ದು ಶೇ. ಒಟ್ಟು ಜನ ಸಂಖ್ಯೆಯಲ್ಲಿ ೩.೭೮% ರಷ್ಟು ಇದ್ದಾರೆ. ಒಬ್ಬ ಗುತ್ತಿಗೆದಾರ ೧ ರಿಂದ ಎರಡು ಕಟ್ಟಡಗಳನ್ನು ಗುತ್ತಿಗೆ ಹಿಡಿದು ಕೆಲಸ ಪ್ರಾರಂಬಿಸುತ್ತಾನೆ. ಯುನಿಟ್ ಪ್ರಕಾರ ಕಟ್ಟಡ ಗುತ್ತಿಗೆ ಹಿಡಿಯುತ್ತಾನೆ. ಒಂದು ಯುನಿಟ್‌ಗೆ ೧೫೦೦೦ ಸಾವಿರ. ಮಾಲೀಕ ಬೇಗ ಸಾಮಗ್ರಿಗಳನ್ನು ಕೊಟ್ಟರೆ ೧ ವರ್ಷ ಆಗುತ್ತದೆ ಇಲ್ಲವಾದರೆ ೨ ವರ್ಷವಾಗುತ್ತದೆ.

ಬೆಂಚೆಕ್ಯಾಪ್‌ನಲ್ಲಿ ೩ ಜನರು ಗುತ್ತಿಗೆದಾರರಿದ್ದು ಶೇ. ೧೦% ರಷ್ಟು, ೩ ಕಟ್ಟಡ ಇಲ್ಲವೆ ಮೂರು ಮನೆಗಳನ್ನು ತಲಾ ಒಂದರಂತೆ ಗುತ್ತಿಗೆ ಹಿಡಿದು ಕೆಲಸ ಮಾಡಿಸುತ್ತಿದ್ದಾರೆ. ಮುದೆನೂರು ಗ್ರಾಮದಲ್ಲಿ ೫ ಜನರು ಗುತ್ತಿಗೆದಾರರು ೫ ಮನೆಗಳನ್ನು ಗುತ್ತಿಗೆ ಹಿಡಿದಿದ್ದರು. ಒಂದು ಯುನಿಟ್‌ಗೆ ೧೫೦೦೦ ಸಾವಿರ ರೂಪಾಯಿಗಳು ಇವರು ಕಟ್ಟಡ ಪೂರ್ಣಗೊಳಿಸಲು ೧೮ ತಿಂಗಳು ಅಥವಾ ೨ ವರ್ಷ ಸಮಯ ತೆಗೆದುಕೊಳ್ಳುತ್ತಾರೆ. ಬೇರೆ ಬೇರೆ ಸಮುದಾಯದ ಜನರು ಗುತ್ತಿಗೆ ಹಿಡಿದು ಮಾಡಿಸುತ್ತಿದ್ದರಿಂದ ಭೋವಿ ಸಮುದಾಯದ ಜನರು ಬೇರೆ ಬೇರೆವೃತ್ತಿ ಬದುಕಿಗೆ ಕಾಲಿಡಬೇಕಾಗಿದೆ. ಮನೆ ಕಟ್ಟಿಸಿದ ಕೆಲವು ಮಾಲೀಕರು ಮನೆ ಮುಗಿದ ಮೇಲೆ ಲೆಕ್ಕಪ್ರಕಾರ ಹಣಕೊಡದೆ ಮೋಸಮಾಡುತ್ತಾರೆ ಹಾಗೂ ತಡವಾಗಿ ಕೊಡುತ್ತಿದ್ದಾರೆ. ಆದ್ದರಿಂದ ಗುತ್ತಿಗೆದಾರ ತನ್ನ ಕೈ ಕೆಳಗೆ ಕೆಲಸಮಾಡುವ ಬೇಲ್ದರ್, ಹೆಲ್ಪರ್‌ಗಳಿಗೆ ಕೈಯಿಂದ ಹಣ ಕೊಡುವ ಪರಿಸ್ಥಿತಿ ಎದುರಾಗುವ ಸಂದರ್ಭಗಳು ಬರುತ್ತಿವೆ. ಅಂತಹ ಸಮಯದಲ್ಲಿ ಮನೆಯಲ್ಲಿರುವ ಒಡವೆಗಳನ್ನು ಬ್ಯಾಂಕ್‌ಗಳಲ್ಲಿ ಒತ್ತೆಇಡಬೇಕಾಗುತ್ತದೆ, ಒಡವೆ ಇಲ್ಲದ ಗುತ್ತಿಗೆದಾರರು ಊರುಬಿಟ್ಟು ಹೋಗುವ ಸನ್ನಿವೇಶ

ಬರುತ್ತಿರುವುದರಿಂದ ಭೋವಿ ಸಮುದಾಯದ ಜನರು ದಿನಗೂಲಿ ಪ್ರಕಾರ ಮಾಡುವುದು ಒಳಿತು ಎಂದು ಹಲವು ಜನ ದಿನಗೂಲಿ ಪ್ರಕಾರ ದಿನಕ್ಕೆ ೬ ಗಂಟೆ ಕೆಲಸಮಾಡುತ್ತಿದ್ದಾರೆ.

ಕಟ್ಟಡ ಕೆಲಸ ಮಾಡುವ ಭೋವಿ ಸಮುದಾಯದ ಕುಟುಂಬಗಳಿಗೆ ಬಾರಿ ಬೇಡಿಕೆ ಇತ್ತು, ಕಟ್ಟಡ ಕೆಲಸವನ್ನು ಬೇರೆ ಯಾವ ಸಮುದಾಯವು ಮಾಡುತ್ತಿರಲಿಲ್ಲ. ಆದರೆ ಇಂದು ಅನೇಕ ಸಮುದಾಯಗಳು ಕಟ್ಟಡ ವೃತ್ತಿ ಮಾಡುತ್ತಿದ್ದು, ಬೇರೆ ಬೇರೆ ಸಮುದಾಯಗಳು ಗುತ್ತಿಗೆ ಹಿಡಿಯುತ್ತಿದ್ದು ಭೂಮಿ ಇಲ್ಲದೆ, ಸರ್ಕಾರಿ ನೌಕರಿ ಇಲ್ಲದೆ ಇರುವ ಕುಟುಂಬಗಳು ಬಡತನ, ನಿರುದ್ಯೋಗದಂತಹ ಸಮಸ್ಯೆಗಳನ್ನು ಎದುರಿಸುತ್ತವೆ ಹಾಗೂ ಮೂಲ ಸೌಕರ್ಯಗಳಿಲ್ಲದೆ ಅನಾರೋಗ್ಯಕ್ಕೆ ತುತ್ತಾಗಿ ಜೀವನ ನಡೆಸುತ್ತಿವೆ. ಹಲವು ಸಮುದಾಯಗಳ ಮನೆಗಳಲ್ಲಿ ಮನೆಗೆಲಸ, ಹಾಗೂ ಜೀತದಾಳುಗಳಾಗಿ ಜೀವನ ಮಾಡುತ್ತಿರುವುದು ಕ್ಷೇತ್ರಕಾರ್ಯದಿಂದ ತಿಳಿದು ಬಂದಿದೆ.

೩.೨.೧ ಉಪಕಸುಬುಗಳು

'ಮಾನವ ತನ್ನ ಜೀವನ ನಿರ್ವಹಣೆ ಮಾಡಲು ಸಾಂಪ್ರದಾಯಿಕವಾಗಿ ಮುಂದುವರಿಸಿಕೊಂಡು ಬಂದ ವೃತ್ತಿಯಿಂದ ತನ್ನ ಬಯಕೆಗಳು ಮತ್ತು ಕುಟುಂಬ ನಿರ್ವಹಣೆ ಮಾಡಿಕೊಳ್ಳಲಾಗದಿರುವ ಸಂದರ್ಭದಲ್ಲಿ ಸಾಂಪ್ರದಾಯಿಕ ವೃತ್ತಿಯ ಜೊತೆಗೆ ಬೇರೆ ಬೇರೆ ವೃತ್ತಿಗಳನ್ನು ಮಾಡುತ್ತಿರುವುದಕ್ಕೆ ಉಪಕಸುಬುಗಳು ಎಂದು ಕರೆಯಲಾಗುತ್ತದೆ ಹಾಗೂ ಪ್ರಕೃತಿಯ ವಿಕೋಪದಿಂದ ಸಾಂಪ್ರದಾಯಿಕ ವೃತ್ತಿಯನ್ನು ಮುಂದುವರಿಸಲು ಸಾದ್ಯವಾಗದೇ ಇರುವ ಸಂದರ್ಭದಲ್ಲಿ ಬೇರೆ ಬೇರೆ ವೃತ್ತಿಯನ್ನು ಮಾಡುವುದಕ್ಕೆ ಉಪಕಸಬುಗಳು ಎಂದು ಕರೆಯುತ್ತೇವೆ.

೩.೨.೧ ಕೃಷಿ

ನನ್ನ ಈ ಅಧ್ಯಯನ ಕೇತ್ರದಲ್ಲಿ ಭೋವಿ ಸಮುದಾಯದ ಜನರು ತಮ್ಮ ಪಾರಂಪರಿಕ ಕಸುಬುಗಳ ಜೊತೆಯಲ್ಲಿ ಇತರೆ ಕಸುಬುಗಳಾದ ಕೃಷಿ, ಕೃಷಿಕೂಲಿ, ವ್ಯಾಪಾರದಂತಹ ವೃತ್ತಿಯನ್ನು ಸಹ ಮಾಡುತ್ತಿದ್ದು ಕೃಷಿಯಲ್ಲಿ ತೊಡಗಿಕೊಂಡ ಕುಟುಂಬಗಳ ಅಂಕೆ, ಸಂಖ್ಯೆಗಳನ್ನು ಈ ಕೆಳಗಿನ ಕೋಷ್ಠಕದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಗ್ರಾಮವಾರು ಕುಟುಂಬಗಳ ಭೂ ಹಿಡುವಳಿದಾರರ ವ್ಯವಸಾಯ ಪದ್ದತಿ ಹಾಗೂ ಭೂಮಿ ಇಲ್ಲದವರ ಪ್ರಮಾಣ

ಕ್ರಸಂ	ಗ್ರಾಮಗಳ ಹೆಸರು	ಭೂ ರಹಿತರು	ಸಣ್ಣ ರೈತರು		ಮಧ್ಯಮ ರೈತರು		ದೊಡ್ಡ ರೈತರು		ಒಟ್ಟು		ಪರಾ
			೩ಎ ಒಣ	೨ಎ ನೀರಾವರಿ	೧೦ಎ ಒಣ	೫ಎ ನೀರಾವರಿ	೧೫ಎ ಒಣ	೭ಎ ನೀರಾವರಿ	– ಒಣ	ನೀರಾವರಿ	
೧	ಕೆ.ಸೂಗೂರು	೪೧ ೧೫.೫೩	೪ ೧.೫೧	೨ ೦.೭೫	೨ ೦.೭೫	೧ ೦.೩೭	–	–	೬	೩	೯ ೩.೪೦%
೨	ಬೆಂಚೆಕ್ಯಾಂಪ್	೩ ೧೦%	೨ ೬.೬೬%	೧ ೩.೩೩%	–	–	–	–	೨	೧	೩ ೧೦%
೩	ಮುದೆನೂರು	೨೫ ೧೮.೩೮	೩ ೨.೨೦	೩ ೨.೨೦	೧ ೦.೭೩	೩ ೨.೨೦	–	–	೪	೫	೯ ೬.೬೧%
ಒಟ್ಟು ಶೇ.		೪೩ ೧೦%	೯ ೨.೦೯	೫ ೧.೧೬	೩ ೦.೬೯	೪ ೦.೯೩	೦%	–	–	–	೪೩೦ (೧೦೦)

ಕೃಷಿಯಲ್ಲಿ ತೊಡಗಿಕೊಂಡ ಕೆ.ಸೂಗೂರು ಗ್ರಾಮದ ಭೋವಿ ಸಮುದಾಯದ ೫೦ ಕುಟುಂಬಗಳಲ್ಲಿ ೯ ಕುಟುಂಬಗಳು ಮಾತ್ರ ಕೃಷಿಯಲ್ಲಿ ತೊಡಗಿಕೊಂಡಿದ್ದು ೪೧ ಕುಟುಂಬಗಳು ಭೂಮಿ ಇಲ್ಲದವರಾಗಿದ್ದಾರೆ. ಶೇ. ೧೫.೫೩% ರಷ್ಟು ಭೂಮಿ ಇಲ್ಲದವರು ಶೇ. ೩.೪೦% ರಷ್ಟು ಭೂ ರೈತರು, ಅದರಲ್ಲಿ ಸಣ್ಣ ರೈತರು ೩ ಎಕರೆ ಒಣ ಭೂಮಿ ಇರುವವರು ೪ ಕುಟುಂಬಗಳು ಶೇ ೧.೫೧, ೨ ಎಕರೆ ನೀರಾವರಿ ಇರುವ ಕುಟುಂಬ ೨ ಕುಟುಂಬಗಳು ಶೇ ೦.೭೫%, ಮಧ್ಯಮ ರೈತರು ಒಂದು ಕುಟುಂಬ ಶೇ. ೦.೩೭ ದೊಡ್ಡ ರೈತರು ಯಾರೂ ಕಂಡು ಬಂದಿಲ್ಲ.

ಬೆಂಚೆ ಕ್ಯಾಂಪ್ ಗ್ರಾಮದಲ್ಲಿ ಒಟ್ಟು ೬ ಕುಟುಂಬಗಳಿದ್ದು ೩ ಕುಟುಂಬಗಳು ರೈತರಿದ್ದಾರೆ. ೩ ಕುಟುಂಬ ಭೂಮಿ ಇಲ್ಲದವರಿದ್ದಾರೆ. ಅದರಲ್ಲಿ ಸಣ್ಣ ರೈತರು ಒಣ ಭೂಮಿ ಬೇಸಾಯ ಮಾಡುವ ೩ ಎಕರೆ ಇರುವವರು ೨ ಕುಟುಂಬ ಶೇ. ೧೦% ೨ ಎಕರೆ ನೀರಾವರಿ ಇರುವ ಕುಟುಂಬ ೧ ಕುಟುಂಬ ಶೇ ೩.೩೩% ರಷ್ಟು ಮದ್ಯಮರೈತರು, ದೊಡ್ಡರೈತರು ಯಾರು ಇಲ್ಲ.

ಮುದೆನೂರು ಗ್ರಾಮದಲ್ಲಿ ಒಟ್ಟು ೩೪ ಕುಟುಂಬಗಳಿದ್ದು ೨೫ ಕುಟುಂಬಗಳು ಭೂಮಿ ಇಲ್ಲದವರು, ೯ ಕುಟುಂಬಗಳು ಶೇ. ೬.೬೧% ರಷ್ಟು ಭೂಮಿ ಇರುವವರು ಇದ್ದಾರೆ. ಅವರಲ್ಲಿ ಸಣ್ಣ ರೈತರು ೩ ಎಕರೆ ಬಯಲು ಜಮೀನು ಹೊಂದಿರುವ ಕುಟುಂಬಗಳು ೩ ಕುಟುಂಬ ಶೇ ೨.೨೦%,

೨ ಎಕರೆ ನೀರಾವರಿ ಜಮೀನು ಹೊಂದಿರುವವರು ೨ ಕುಟುಂಬ ಶೇ ೨.೨೦%, ಮಧ್ಯಮ ರೈತರು ೧೦ ಎಕರೆ ಜಮೀನು ಇರುವ ಕುಟುಂಬ ೧. ಶೇ ೦.೭೩, ೫ ಎಕರೆ ನೀರಾವರಿ ಇರುವ ಕುಟುಂಬ ೩. ಶೇ. ೨.೨೦, ಒಟ್ಟು ಕೆ.ಸೂಗೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ೪೩ ಕುಟುಂಬಗಳ ಶೇ. ೧೦% ರಷ್ಟು ಭೂಮಿ ಇಲ್ಲದವರು ೪೧ ಕುಟುಂಬ ಶೇ ೧೫.೫೩ ಭೂಮಿ ಹೊಂದಿರುವವರು ಇದ್ದಾರೆ. ಈ ಅಂಶಗಳನ್ನು ನೋಡಿದರೆ ಅತಿ ಹೆಚ್ಚು ಭೂಮಿ ಇಲ್ಲದ ಭೋವಿ ಕುಟುಂಬಗಳು ದಿನಗೂಲಿ, ಕೃಷಿಕೂಲಿ, ವ್ಯಾಪಾರ, ಕಟ್ಟಡ ಕೆಲಸ ಮಾಡುತ್ತಾ ಜೀವನವನ್ನು ನಡೆಸುತ್ತಿದ್ದಾರೆ. ಇವರು ಆರ್ಥಿಕವಾಗಿ ಅಭಿವೃದ್ಧಿ ಕಾಣದೆ ಬಡತನದಿಂದ ಜೀವನ ನಡೆಸುತ್ತಿರುವುದು ಕಂಡು ಬರುತ್ತದೆ ಹಾಗೂ ನಗರದ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ ಮತ್ತು ಅಲೆಮಾರಿ ಜೀವನ ನಡೆಸುತ್ತಿರುವುದು ಕ್ಷೇತ್ರ ಕಾರ್ಯದಿಂದ ಕಂಡು ಬಂದಿದೆ.

ಆಧುನಿಕ ಯುಗದಲ್ಲಿಯು ಸಹ ಈ ಸಮುದಾಯದ ಹಲವಾರು ಕುಟುಂಬಗಳು ತಮ್ಮ ತಮ್ಮ ಮಕ್ಕಳಿಗೆ ಶಿಕ್ಷಣ ನೀಡಲು ಆಗದೆ ಅನಕ್ಷರಸ್ಥರನ್ನಾಗಿ ಮಾಡಿ ಪಾರಂಪರಿಕ ಕಸುಬುಗಳಿಗೆ ವಲವು ತೋರಿಸಿ ಬಾಲಕಾರ್ಮಿಕರು, ದುಡಿಯುವವರ್ಗವನ್ನಾಗಿ ಮಾಡುವುದು ಕಂಡುಬಂದಿದೆ. ಕೃಷಿ ಮಾಡುವ ಕುಟುಂಬಗಳಿಗೆ ನೀರಾವರಿ ಸೌಲಭ್ಯವಿಲ್ಲದೆ ಬೆಳೆದ ಬೆಳೆಗೆ ಸರಿಯಾಗಿ ಬೆಲೆಸಿಗದೆ, ಬೆಳೆಗಳು ಕೀಟಗಳಿಂದ ನಾಶವಾಗಿ ಕೃಷಿಗೆ ಸಂಬಂಧಿಸಿದ ಮಾಹಿತಿಯ ಕೊರತೆಯಿಂದ ಕೃಷಿಯ ಕಡೆಗೆ ಒಲವು ಕಡಿಮೆ ಯಾಗುವುದು ಕಂಡುಬಂದಿದೆ.

೩.೨.೨ ವ್ಯಾಪಾರ

ಗ್ರಾಮವಾರು ವ್ಯಾಪಾರದಲ್ಲಿ ತೊಡಗಿಕೊಂಡ ಕುಟುಂಬಗಳ ಅಂಕೆ, ಸಂಖ್ಯೆಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಕ್ರೂಡೀಕರಿಸಿ ವಿವರಿಸಲಾಗಿದೆ.

ಕ್ರ.ಸಂ.	ಗ್ರಾಮದ ಹೆಸರು	ಸಣ್ಣ ವ್ಯಾಪಾರ	ಮಧ್ಯಮ ವ್ಯಾಪಾರ	ದೊಡ್ಡ ವ್ಯಾಪಾರ	ಒಟ್ಟು
೧	ಕೆ.ಸೂಗೂರು	೩ ೧.೧೩	೧ ೦.೩೭%	–	೪ ೧.೫೧%
೨	ಬೆಂಚೆಕ್ಯಾಂಪ್	೧ ೩.೩೩	–	–	೧ ೩.೩೩%
೩	ಮುದೆನೂರು	೨ ೧.೪೭%	೧ ೦.೭೪%	–	೩ ೨.೨೦%
ಒಟ್ಟು ಪ್ರಮಾಣ		೬ ೧.೩೯	೨ ೦.೪೬%		೮ ೧.೮೬ (೧೦೦)

ಕೆಲ ಭೋವಿ ಸಮುದಾಯದ ಕುಟುಂಬಗಳು ಸಣ್ಣಪುಟ್ಟ ವ್ಯಾಪಾರವನ್ನು ಮಾಡುತ್ತಿವೆ. ಕೆ.ಸೂಗೂರು ಗ್ರಾಮದಲ್ಲಿ ಒಟ್ಟು ೫೦ ಕುಟುಂಬಗಳಲ್ಲಿ ೪ ಕುಟುಂಬಗಳು ಶೇ ೧.೫೧ ರಷ್ಟು ಸಣ್ಣ ವ್ಯಾಪಾರಸ್ಥರು ೩ ಕುಟುಂಬ ಶೇ.೧.೧೩ ಮಧ್ಯಮ ವ್ಯಾಪಾರ ೧ ಕುಟುಂಬ (ಶೇ ೦.೭೫) ಶೇ.೯೨ ಕುಟುಂಬಗಳು ವಿವಿಧ ವೃತ್ತಿ ಮಾಡುತ್ತಿವೆ.

ಬೆಂಚೆಕ್ಯಾಂಪ್ ಗ್ರಾಮದಲ್ಲಿ ಒಟ್ಟು ೬ ಕುಟುಂಬಗಳಲ್ಲಿ ಸಣ್ಣ ವ್ಯಾಪಾರ ಮಾಡುವವರು ೧ ಕುಟುಂಬ (ಶೇ ೩.೩೩%), ೯೭% ಕುಟುಂಬ ಬೇರೆ ಬೇರೆ ವೃತ್ತಿ ಮಾಡುತ್ತಿವೆ.

ಮದೆನೂರು ಗ್ರಾಮದಲ್ಲಿ ಒಟ್ಟು ೩೪ ಕುಟುಂಬಗಳಿದ್ದು! ವ್ಯಾಪಾರ ಮಾಡುವ ಕುಟುಂಬಗಳು ೨ ಶೇ ೧.೪೭% ರಷ್ಟು, ಮಧ್ಯಮ ವ್ಯಾಪಾರ ಮಾಡುವ ಕುಟುಂಬ ೧.ಶೇ ೦.೭೪% ಒಟ್ಟು ೩ ಕುಟುಂಬ ಶೇ ೨.೨೦ ರಷ್ಟು ಉಳಿದ ೯ ಶೇ. ೯೮% ರಷ್ಟು ಕುಟುಂಬ ಬೇರೆ ಬೇರೆ ಕೆಲಸ ಮಾಡುತ್ತಿವೆ ಇಡಿ ಗ್ರಾಮಪಂಚಾಯಿತಿಯಲ್ಲಿ ೯೦ ಭೋವಿ ಕುಟುಂಬಗಳಿದ್ದು ೬ ಕುಟುಂಬ ಶೇ ೧.೩೯ ರಷ್ಟು ಸಣ್ಣ ವ್ಯಾಪಾರದಲ್ಲಿ ತೊಡಗಿವೆ. ೨ ಕುಟುಂಬ ಶೇ ೦.೪೬% ಮಧ್ಯಮ ವ್ಯಾಪಾರದಲ್ಲಿ ತೊಡಗಿಕೊಂಡಿವೆ.

ಈ ಅಂಕೆ ಸಂಖ್ಯೆಗಳನ್ನು ನೋಡಿದಾಗ ವ್ಯಾಪಾರ ಮಾಡಸುವವರ ಸಂಖ್ಯೆ ಬಹಳ ಕಡಿಮೆ ಇದೆ. ತರಕಾರಿಗಳನ್ನು ಜಮೀನುಗಳಲ್ಲಿ ಬೆಳೆಯಲು ಜಮೀನು ಇಲ್ಲ. ಜಮೀನು ಇರುವ ಕೆಲವು ಕುಟುಂಬಗಳು ತರಕಾರಿ ಬೆಳೆಯ ಬೇಕೆಂದರೆ ನೀರಾವರಿ ಸೌಲಭ್ಯವಿಲ್ಲ ಇದ್ದರೂ ಸರಿಯಾಗಿ ಇಲ್ಲ. ಮಳೆಯು ಅಭಾವ ನೀರಾವರಿ ಸೌಲಭ್ಯ ರೂಪಿಸಿಕೊಳ್ಳಲು ಆರ್ಥಿಕವಾಗಿ ಹಿಂದುಳಿದಿದ್ದಾರೆ. ಸರ್ಕಾರದಿಂದ ಗಂಗಾಕಲ್ಯಾಣದಂತ ಯೋಜನೆಗಳನ್ನು ಪಡೆದುಕೊಳ್ಳಲು ಸಾಮಾನ್ಯ ತಿಳುವಳಿಕೆ ಇರುವ ವ್ಯಕ್ತಿಗಳು ಇಲ್ಲದಿರುವುದರಿಂದ ಪಾರಂಪರಿಕ ಕೃಷಿಯ ಜೊತೆಗೆ ವಿವಿಧ ವೃತ್ತಿ ಮಾಡುತ್ತಾ ಜೀವನ ನಡೆಸುವುದು ಕಂಡುಬರುತ್ತದೆ.

ತರಕಾರಿ ವ್ಯಾಪಾರ ಮಾಡುವವರಿಗೆ ಹತ್ತಿರದ ಮಾರುಕಟ್ಟೆಯ ಸೌಲಭ್ಯ ಇಲ್ಲ. ತರಕಾರಿಯನ್ನು ಮಾರುಕಟ್ಟೆಯಿಂದ ತಂದು ಮಾರಲು ವಾಹನದ ಬಾಡಿಗೆ ಜಾಸ್ತಿ ಮತ್ತು ತರಕಾರಿಗಳ ಬೆಲೆ ಜಾಸ್ತಿ ಇರುವುದರಿಂದ ಅದನ್ನು ತಂದು ಮಾರಾಟ ಮಾಡಲು ಯತ್ನಿಸಿದರೆ ಗ್ರಾಮೀಣ ಪ್ರದೇಶದ ಜನರು ಖರೀದಿಸುವುದಿಲ್ಲ. ಕೆಲ ಸಂದರ್ಭಗಳಲ್ಲಿ ತಂದ ತರಕಾರಿ ಕೊಳೆತು ನಷ್ಟ ಅನುಭವಿಸುತ್ತಿರುವುದರಿಂದ ತರಕಾರಿ ವ್ಯಾಪಾರ ಮಾಡಲು ಇತ್ತೀಚೆಗೆ ಹಿಂಜರಿಯುತ್ತಿರುವುದು ಕಂಡುಬರುತ್ತದೆ.

ವ್ಯಾಪಾರ ಮಾಡುವವರಿಗೆ ಸರ್ಕಾರವು ಬ್ಯಾಂಕ್‌ಗಳಿಂದ ಸಾಲ ಸೌಲಭ್ಯದ ವ್ಯವಸ್ಥೆ ಜಾರಿಗೆ ತಂದಿದ್ದರೂ ಉಪಯೋಗ ಇಲ್ಲದಂತಾಗಿದೆ ಏಕೆಂದರೆ ಸಾಲ ತರಲು ಸಾಕ್ಷಿಗಾಗಿ ಜಮೀನು ಇದ್ದವರು ಸಾಕ್ಷಿ ಹಾಕಬೇಕು. ಅನೇಕ ಭೋವಿ ಕುಟುಂಬಗಳು ಭೂಮಿಯನ್ನು ಹೊಂದಿಲ್ಲದಿರುವುದರಿಂದ ಅವರಿಗೆ ಬ್ಯಾಂಕ್ ಸಾಲದ ಸೌಲಭ್ಯದಿಂದ ವಂಚಿತರಾಗಿದ್ದಾರೆ.

೩.೨.೩ ಪಶುಪಾಲನೆ

ಭೋವಿ ಸಮುದಾಯವು ಪಶುಪಾಲನೆ ವೃತ್ತಿಯಲ್ಲಿ ತೊಡಗಿ ಕೊಂಡ ಗ್ರಾಮ ವಾರು ಕುಟುಂಬಗಳ ಸಂಖ್ಯೆ ಮತ್ತು ಪಶುಸಂಪತ್ತಿನ ಪ್ರಮಾಣವನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿಶ್ಲೇಷಿಸಲಾಗಿದೆ.

ಕ್ರ.ಸಂ	ಗ್ರಾಮದ ಹೆಸರು	ಕುಟುಂಬಗಳ ಸಂಖ್ಯೆ	ಶೇ	ಎತ್ತು	ಎಮ್ಮೆ	ಆಕಳು	ವಾರ್ಷಿಕ ವೆಚ್ಚ	ವಾರ್ಷಿಕ ಆದಾಯ
೧	ಕ.ಸೂಗೂರು	೫	೧೦%	೮	೩	೩	೫೦,೦೦೦	೨೫೦೦೦
೨	ಬೆಂಚಿಕ್ಯಾಂಪ್	೨	೩.೩೩	–	೪	೧	೩೦,೦೦೦	೨೦,೦೦೦
೩	ಮುದೆನೂರು	೦೮	೨೩.೫೨	೬	೭	೨	೬,೦೦೦	೪೦,೦೦೦
ಒಟ್ಟು ಪ್ರಮಾಣ		೧೫	೧೬.೬೬ (೧೦೦)	೧೪	೧೪	೬	೧.೨೦,೦೦	೮೫೦೦೦

ಕೋಷ್ಟಕ ೩.೨.೩ ರಲ್ಲಿ ಪಶುಪಾಲನೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಪಡೆಯಲಾಗಿದೆ. ಪಶುಪಾಲನೆಯಲ್ಲಿ ಆಕಳು, ಎಮ್ಮೆ, ಎತ್ತು ಎಂದು ವಿಭಾಗಿಸಿಕೊಂಡು ಮಾಹಿತಿ ಸಂಗ್ರಹಿಸಲಾಗಿದೆ ಒಟ್ಟು ೯೦ ಕುಟುಂಬಗಳಲ್ಲಿ ೧೫ ಕುಟುಂಬ ಶೇ. ೧೬.೬೬% ರಷ್ಟು ಪಶುಪಾಲನೆ ವೃತ್ತಿಯಲ್ಲಿ ತೊಡಗಿಕೊಂಡಿವೆ. ಕೆ.ಸೂಗೂರು ಗ್ರಾಮದಲ್ಲಿ ೫ ಕುಟುಂಬ ಶೇ ೧೦% ರಷ್ಟಿದೆ, (೮ ಎತ್ತು, ೩ ಎಮ್ಮೆ, ೩ ಆಕಳು ಇವೆ) ಕೋಳಿಯ ಸಾಕಾಣಿಕೆಯನ್ನು ಯಾರು ಮಾಡುತ್ತಿಲ್ಲ.

ಬೆಂಚಿಕ್ಯಾಂಪ್ ಗ್ರಾಮದಲ್ಲಿ ಒಟ್ಟು ೬ ಕುಟುಂಬಗಳಿದ್ದು ಅದರಲ್ಲಿ ೨ ಕುಟುಂಬ ಶೇ ೩.೩೩% ರಷ್ಟು ಪಶುಪಾಲನೆ ಮಾಡುತ್ತಿವೆ (೪ ಎಮ್ಮೆ, ೧ ಆಕಳು ಇವೆ) ಈ ಕುಟುಂಬಗಳು ಒಂದು ವರ್ಷಕ್ಕೆ ೩೦ ಸಾವಿರ ವೆಚ್ಚ ಮಾಡಿದರೆ ೨೦ ಸಾವಿರ ಲಾಭ ಬರುತ್ತದೆ ಎಂದು ಮಾಹಿತಿದಾರರು ವಿವರಣೆ ನೀಡಿದ್ದಾರೆ.

ಮುದೆನೂರು ಗ್ರಾಮದಲ್ಲಿ ಒಟ್ಟು ೩೪ ಕುಟುಂಬಗಳಿದ್ದು ೮ ಕುಟುಂಬ ಶೇ ೨೩.೫೨% ರಷ್ಟು ಪಶುಪಾಲನೆ ವೃತ್ತಿಯಲ್ಲಿ ತೊಡಗಿವೆ (೬ ಎತ್ತು, ೭ ಎಮ್ಮೆ, ೨ ಆಕಳು) ಈ ಕುಟುಂಬಗಳು ಪಶುಪಾಲನೆಗೆ ವಾರ್ಷಿಕ ೬೦ ಸಾವಿರ ವೆಚ್ಚ ಮಾಡಿದರೆ ೪೦ ಸಾವಿರ ಲಾಭ ಬರುತ್ತದೆ ಎಂದು ಅಭಿಪ್ರಾಯ ಪಟ್ಟಿವೆ.

ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದರೆ ಪಶುಪಾಲನೆ ವೃತ್ತಿಮಾಡುವವರು ಯಾವುದೇ ಲಾಭದಲ್ಲಿ ಇಲ್ಲ. ಏಕೆಂದರೆ ಮೇವು ಬೆಳೆಯುವ ಜಮೀನು ಭತ್ತದ ಗದ್ದೆಗಳಾಗಿದ್ದು ಭತ್ತ ಬೆಳೆದ ಮೇಲೆ ಭತ್ತವನ್ನು ಮಿಷನ್‌ಯಿಂದ ಕಟಾವು ಮಾಡಿದ ಪರಿಣಾಮ ಭತ್ತದ ಹುಲ್ಲಿಗೆ ನುಸಿ ಬಿದ್ದು ಯಾವ ದನವು ಆ ಹುಲ್ಲನ್ನು ತಿನ್ನದಂತಾಗುತ್ತದೆ ಮತ್ತು ದಿನದ ಕೂಲಿ ೧೦೦ರೂ ಯಂತೆ ಹಾಕಿದರೂ ತಿಂಗಳಿಗೆ ೩೦ ಸಾವಿರ ವರ್ಷಕ್ಕೆ ೩೬ ಸಾವಿರ ಪಶುಗಳನ್ನು ಕಾಯುವವನಿಗೆ ಕೊಡಬೇಕಾಗುತ್ತದೆ. ಇನ್ನು ಪಶುಗಳ ಅನಾರೋಗ್ಯ ಔಷಧಿ, ಮೊದಲಾದವುಗಳಿಗೆ ಖರ್ಚು ಮಾಡಬೇಕಾಗುತ್ತದೆ. ಆದರೂ ಜಮೀನು ಇರುವ ಕೆಲ ಕೃಷಿಕರು ಪಶುಪಾಲನೆಯನ್ನು ಅಲ್ಲಲ್ಲಿ ಮಾಡುತ್ತಿದ್ದಾರೆ. ಭೋವಿ ಸಮುದಾಯದ ಕುಟುಂಬಗಳು ಅತ್ಯಂತ ಕಡಿಮೆ ಕುಟುಂಬಗಳು ಪಶುಪಾಲನೆಯಲ್ಲಿ ನಿರತರಾಗಿರುವುದು ಕಂಡುಬರುತ್ತದೆ. ಗರಿಷ್ಟ ಕುಟುಂಬಗಳು ದಿನಗೂಲಿ, ಕಟ್ಟಡ ಕಾರ್ಮಿಕರಾಗಿ ದುಡಿಯುತ್ತಿರುವುದು ಕಂಡುಬರುತ್ತದೆ.

೩.೨.೪ ಕುರಿಸಾಕಾಣಿಕೆ

ಕುರಿ ಸಾಕಾಣಿಕೆಯಲ್ಲಿ ತೊಡಗಿದ ಕುಟುಂಬಗಳ ಸಂಖ್ಯೆ ಹಾಗೂ ಕುರಿಗಳ ಸಂಖ್ಯೆ ಮತ್ತು ವಾರ್ಷಿಕ ಆದಾಯ ವೆಚ್ಚದ ಕುರಿತು ಈ ಕೆಳಗಿನ ಕೋಷ್ಟಕದಲ್ಲಿ ವಿಶ್ಲೇಷಿಸಲಾಗಿದೆ.

ಕ್ರ.ಸಂ	ಗ್ರಮಗಳ ಹೆಸರು	ಶೇಕಡ	ಕುರಿ	ಮೇಕೆ	ವಾರ್ಷಿಕ	ವಾರ್ಷಿಕ ಕರ್ಚು	ವಾರ್ಷಿಕ ಒಟ್ಟು ಆದಾಯ
೧	ಕೆ.ಸೂಗೂರು	೨	೪%	೨೦	೫	೫೦,೦೦೦	೪೦,೦೦೦
೨	ಬೆಂಚೆಕ್ಯಾಂಪ್	೧	೧೬%	೨	೧	೨೦,೦೦೦	೧೫೦೦೦
೩	ಮುದೆನೂರು	೩	೮%	೧೦	೩	೩೦,೦೦೦	೨೫೦೦೦
ಒಟ್ಟು		೬ (೯೦)	೬% (೧೦೦)	೩೨	೯	೧.೧೦,೦೦೦	೮೦,೦೦೦

ಈ ಮೇಲಿನ ಕೋಷ್ಟಕದಲ್ಲಿ ಕುರಿಸಾಕಾಣಿಕೆ ಮಾಡುವ ಕುಟುಂಬಗಳು ಕೆ.ಸೂಗೂರು ಗ್ರಾಮದಲ್ಲಿ ಶೇ. ೪% ರಷ್ಟು ೨ ಕುಟುಂಬಗಳು, ೨೦ ಕುರಿ, ೫ ಮೇಕೆಯನ್ನು ಸಾಕುತ್ತಿದ್ದು ವಾರ್ಷಿಕ ೫೦,೦೦೦ ಸಾವಿರ ಖರ್ಚಾಗುತ್ತದೆ ೪೦ ಸಾವಿರ ಲಾಭವಾಗುತ್ತಿದ್ದು ಕನಿಷ್ಟ ಪ್ರಮಾಣದ ಕುಟುಂಬ ಕುರಿಸಾಕಾಣಿಕೆಯಲ್ಲಿ ತೊಡಗಿದ್ದು ಗರಿಷ್ಟ ಪ್ರಮಾಣದ ಜನ ಈ ವೃತ್ತಿಯಿಂದ ದೂರವಿದ್ದಾರೆ.

ಬೆಂಚೆಕ್ಯಾಂಪ್ ಗ್ರಾಮದಲ್ಲಿ ಶೇ ೩೩% ರಷ್ಟು ೨ ಕುಟುಂಬಗಳು, ಒಟ್ಟು ೬ ಕುಟುಂಬಗಳಲ್ಲಿ ಕುರಿಸಾಕಾಣಿಕೆಯಲ್ಲಿ ತೊಡಗಿದ್ದಾರೆ. ೫ ಕುರಿಗಳಿದ್ದು ವಾರ್ಷಿಕ ೨೦ ಸಾವಿರ ವೆಚ್ಚವಾಗಿ ೧೫೦೦೦ ರೂ. ಲಾಭವಾಗುತ್ತದೆ. ಕೆಲ ಸಂದರ್ಭ ಅಥವಾ ಕೆಲವು ವರ್ಷ ಲಾಭವಾಗುತ್ತದೆ ಮತ್ತು ನಷ್ಟವಾಗುತ್ತದೆ.

ಮುದೆನೂರು ಗ್ರಾಮದಲ್ಲಿ ೩ ಕುಟುಂಬ ಶೇ. ೮% ರಷ್ಟು ಕುರಿಸಾಕಾಣಿಕೆಯಲ್ಲಿ ತೊಡಗಿದ್ದು ೧೦ ಕುರಿ, ೩ ಮೇಕೆಗಳಿವೆ. ಇವುಗಳ ಪಾಲನೆಗೆ ೩೦ ಸಾವಿರ ಖರ್ಚಾಗುತ್ತಿದ್ದು, ವಾರ್ಷಿಕ ೨೫೦೦೦ ರೂ. ಲಾಭವಾಗುತ್ತದೆ ಈ ಮೇಲಿನ ಅಂಶಗಳನ್ನು ನೋಡಿದರೆ ಈ ಮೂರು ಗ್ರಾಮದಲ್ಲಿಯ ಭೋವಿ ಸಮುದಾಯದ ಜನರು ಕುರಿಸಾಕಾಣಿಕೆಯಿಂದ ಹಿಂದುಳಿದಿದ್ದಾರೆ ಮತ್ತು ಸರ್ಕಾರವು ಒದಗಿಸಿದ ಕುರಿ ಸಾಲಗಳನ್ನು ಪಡೆದಿಲ್ಲ ಹಾಗೂ ಇಂತಹ ಯೋಜನೆಗಳ ಬಗ್ಗೆ ಈ ಸಮುದಾಯಕ್ಕೆ ತಿಳಿದು ಬಂದಿಲ್ಲವಾದ್ದರಿಂದ ಈ ವೃತ್ತಿಯಲ್ಲಿ ಕನಿಷ್ಟ ಸಮುದಾಯಗಳು ತೊಡಗಿದ್ದು ಕಂಡರೆ ಕೃಷಿಗೆ ಪೂರಕವಾಗಿ ಸಾಕಿದ್ದಾರೆ ಎಂದು ತಿಳಿದು ಬಂದಿದೆ.

೩.೨.೫ ದಿನಗೂಲಿ

ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ ದತ್ತಾಂಶಗಳನ್ನು ಗ್ರಾಮವಾರು ಒಟ್ಟು ದಿನಗೂಲಿ ಮಾಡುವವರ ಸಂಖ್ಯೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿಶ್ಲೇಷಿಸಲಾಗಿದೆ.

ಕ್ರಸಂ	ಗ್ರಾಮಗಳ ಹೆಸರು	ಒಟ್ಟು ಕುಟುಂಬ	ದಿನಗೂಲಿ ಮಾಡುವ ಕುಟುಂಬ	ಲಿಂಗಾನುಪಾತ		ದಿನದ ಕೂಲಿ		ಕೆಲಸದ ಸಮಯ	ದಿನದ ಕರ್ಚು		ಉಳಿತಾಯ	
	–	–	–	ಪುರು	ಸ್ತ್ರೀ	ಗಂ	ಹೆ	–	ಗಂ	ಹೆ	ಗಂ	ಹೆ
೧	ಕೆ.ಸೂಗೂರು	೫೦	೨೦ ೪೦%	೧೯ ೧೪%	೧೪ ೧೦%	೨೦೦	೧೫೦	೮	೧೫೦	೧೦೦	೫೦	೫೦
೨	ಬೆಂಚೆಕ್ಯಾಂಪ್	೬	೩ ೫೦%	೬ ೫೪%	೪ ೩೦%	೨೦೦	೧೫೦	೮	೧೫೦	೧೦೦	೫೦	೫೦
೩	ಮದೆನೂರು	೩೪	೧೫ ೪೪%	೧೨ ೧೯%	೮ ೧೦%	೨೦೦	೧೫೦	೮	೧೫೦	೧೦೦	೫೦	೫೦
ಒಟ್ಟು ಶೇ		೯೦ (೧೦೦)	೩೮ ೪೨%	೩೭ ೧೮%	೨೬ ೧೧%	೨೦೦	೧೫೦	೮	೧೫೦	೧೦೦	೫೦	೫೦ (೧೦೦)

ಈ ಮೇಲಿನ ಕೋಷ್ಟಕದಲ್ಲಿಯ ಅಂಕಿ-ಸಂಖ್ಯೆಗಳ ಪ್ರಕಾರ ಭೋವಿ ಸಮುದಾಯದ ೯೦ ಕುಟುಂಬಗಳಲ್ಲಿ ೩೮ ಕುಟುಂಬಗಳು ದಿನಗೂಲಿ ಮಾಡಿ ಜೀವನ ಮಾಡುತ್ತಿದ್ದಾರೆ ಕೆ.ಸೂಗೂರು ಗ್ರಾಮದಲ್ಲಿ ಒಟ್ಟು ೫೦ ಕುಟುಂಬಗಳಿದ್ದು, ದಿನಗೂಲಿ ಮಾಡುವವರ ಕುಟುಂಬಗಳು ೨೦, ಶೇ. ೪೦% ರಷ್ಟು. ಪುರುಷರು ೧೯ ಜನ ಶೇ. ೧೪% ಸ್ತ್ರೀಯರು ೧೪% ಶೇ ೧೦% ಒಟ್ಟು ಕೆ.ಸೂಗೂರು ಗ್ರಾಮದಲ್ಲಿ ದಿನಗೂಲಿ ಮಾಡುವವರ ಪ್ರಮಾಣ ೩೩ ಜನರಿದ್ದು ಶೇ ೧೨.೫% ದಿನಗೂಲಿ ಮಾಡುವವರು ಕಂಡುಬಂದಿದ್ದಾರೆ. ದಿನಗೂಲಿ ಮಾಡುವ ಪುರುಷರಿಗೆ ದಿನಕ್ಕೆ ೨೦೦ ರೂ. ಖರ್ಚು ೧೫೦ ರೂ. ಉಳಿತಾಯ ೫೦ ರೂ. ಸ್ತ್ರೀಯರಿಗೆ ದಿನಕ್ಕೆ ೧೫೦ ರೂ. ಖರ್ಚು ೧೦೦ ರೂ. ಉಳಿತಾಯ ೫೦ ರೂ. ೮ ಗಂಟೆ ನಿರಂತರ ಕೆಲಸ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದೆ ಪಶುಗಳಂತೆ ದುಡಿಸಿಕೊಳ್ಳುತ್ತಿದ್ದಾರೆ.

ಬೆಂಚೆಕ್ಯಾಂಪ್ ಗ್ರಾಮದಲ್ಲಿ ಒಟ್ಟು ೬ ಕುಟುಂಬಗಳಿದ್ದು ೩ ಕುಟುಂಬ ಶೇ. ೫೦% ದಿನಗೂಲಿ ಮಾಡುತ್ತಾರೆ. ಪುರುಷರು ೬ ಜನ ಶೇ ೫೪% ಸ್ತ್ರೀಯರು ೪ ಜನ ೩೦% ಒಟ್ಟು ೧೦ ಜನ ಶೇ ೩೩% ರಷ್ಟು ದಿನಗೂಲಿ ಮಾಡುತ್ತಿದ್ದಾರೆ. ಕೆ ಸೂಗೂರು ಗ್ರಾಮಕ್ಕಿಂತ ಬೆಂಚೆಕ್ಯಾಂಪ್‌ನಲ್ಲಿ ಅತಿಹೆಚ್ಚು ದಿನಗೂಲಿ ಮಾಡುವವರು ಕಂಡುಬಂದಿದ್ದಾರೆ.

ಮುದೆನೂರು ಗ್ರಾಮದಲ್ಲಿ ಒಟ್ಟು ೩೪ ಕುಟುಂಬಗಳಿದ್ದು ೧೫ ಕುಟುಂಬಗಳು ಶೇ ೪೪% ದಿನಗೂಲಿ ಮಾಡುತ್ತಿದ್ದಾರೆ. ಪುರುಷರು ೧೨ ಜನ ಶೇ ೧೯%, ಸ್ತ್ರೀಯರು ೮ ಜನ ಶೇ.೧೦% ರಷ್ಟು. ದಿನಗೂಲಿ ಮಾಡುವ ಕುಟುಂಬಗಳಿಗೆ ಯಾವುದೇ ರೀತಿಯ ಜಮೀನು ಇಲ್ಲದ ಕಾರಣ ದಿನಗೂಲಿ ಮಾಡಿ ಜೀವನ ನಡೆಸುತ್ತಿದ್ದಾರೆ .

೩.೨.೬ ವಯಸ್ಸು ಮತ್ತು ದುಡಿಮೆ

ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದಲ್ಲಿ ಭೋವಿ ಸಮುದಾಯದ ಗ್ರಾಮವಾರು ದುಡಿಮೆಯಲ್ಲಿ ತೊಡಗಿ ಕೊಂಡವರ ಸಂಖ್ಯೆ, ವಯಸ್ಸು ಕುರಿತು ಸಂಗ್ರಹ ಮಾಡಿದ ದತ್ತಾಂಶಗಳನ್ನು ಒಟ್ಟು ೫ ಗುಂಪುಗಳಲ್ಲಿ ವಿಂಗಡಿಸಲಾಗಿದೆ ಅವುಗಳ ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾಗಿದೆ.

ಕ್ರಸಂ	ಗ್ರಾಮದ ಹೆಸರು	ಒಟ್ಟು ಜನಸಂಖ್ಯೆ	ವಯಸ್ಕರು ೧೮-೪೦		ವೃದ್ಧರು ೪೦-೫೫		ಬಾಲಕಾರ್ಮಿಕರು ೧೨-೧೬		ಒಟ್ಟು	ಪ್ರತಿಶತ
			ಗಂ	ಹೆ	ಗಂ	ಹೆ	ಗಂ	ಹೆ		
೧	ಕೆ.ಸೂಗೂರು	೨೫೪	೫೦ ೧೮%	೪೫ ೧೭%	೩೫ ೧೩%	೩೦ ೧೧%	೮ ೩%	೫ ೧.೮%	೧೭೩	೬೫%
೨	ಬೆಂಚೆಕ್ಯಾಂಪ್	೩೦	೧೦ ೩೩%	೯ ೩೦%	೩ ೧೦%	೨ ೬%	೧ ೩%	೧ ೩%	೨೬	೮೬%
೩	ಮುದೆನೂರು	೧೪೩	೩೦ ೨೦%	೨೮ ೧೯%	೧೧ ೭%	೧೦ ೬%	೫ ೩%	೪ ೨%	೮೮	೬೧%
ಒಟ್ಟು ಪ್ರಾಮಾಣ		೪೩೭ (೧೦೦)	೧೭೨ ೩೯.೩೫%		೯೧ ೨೦.೮೨%		೨೪ ೫.೪೯%		೨೮೭ ೬೫.೬೭%	

ಈ ಮೇಲಿನ ಕೋಷ್ಟಕದಲ್ಲಿಯ ಮಾಹಿತಿ ಪ್ರಕಾರ ಕೆ.ಸೂಗೂರು ಗ್ರಾಮದಲ್ಲಿ ಒಟ್ಟು ೨೬೪ ಜನಸಂಖ್ಯೆಯಲ್ಲಿ ೧೭೩ ಶೇ ೬೫% ರಷ್ಟು ಜನ ದುಡಿಯುವರು ಕಂಡುಬಂದಿದ್ದಾರೆ. ಅದರಲ್ಲಿ ವಯಸ್ಕ ಪುರುಷರು ೫೦ ಜನ ಶೇ ೧೮% ರಷ್ಟು. ಸ್ತ್ರೀಯರು ೪೫% ಶೇ ೧೭% ರಷ್ಟು. ವೃದ್ದ ಪುರುಷರು ೩೫ ಶೇ. ೧೩%, ಸ್ತ್ರೀಯರು ೩೦. ಶೇ. ೧೧% ಬಾಲಕಾರ್ಮಿಕರು ಪುರುಷರು ೮. ಶೇ. ೩%, ಸ್ತ್ರೀಯರು ೫, ಶೇ. ೧.೮%. ಇರುವುದು ಕಂಡುಬರುತ್ತದೆ.

ಬೆಂಚೆಕ್ಯಾಂಪ್ ಗ್ರಾಮದಲ್ಲಿ ೩೦ ಜನರಿದ್ದು ದುಡಿಮೆಯಲ್ಲಿ ತೊಡಗಿದವರು ಒಟ್ಟು ಸಂಖ್ಯೆ ೨೬. ಅದರಲ್ಲಿ ವಯಸ್ಕ ಪುರುಷರು ೧೦ ಜನ ಶೇ ೩೩% ರಷ್ಟು, ಸ್ತ್ರೀಯರು ೯ ಜನ ಶೇ. ೩೦% ರಷ್ಟು, ವೃದ್ಧರು (ವಯಸ್ಸಾದವರು) ಪುರುಷರು ೩ ಜನ ಶೇ. ೧೦% ರಷ್ಟು, ಸ್ತ್ರೀಯರು ೨ ಜನ ಶೇ. ೬% ರಷ್ಟು, ಬಾಲಕಾರ್ಮಿಕರು ಪುರುಷ ೧, ಶೇ. ೩% ರಷ್ಟು, ಸ್ತ್ರೀಯರು ೧ ಶೇ. ೩% ರಷ್ಟು ಇರುವುದು ಕಂಡುಬರುತ್ತದೆ.

ಮುದೆನೂರು ಗ್ರಾಮದಲ್ಲಿ ಒಟ್ಟು ೧೪೩ ಜನರಿದ್ದು, ೮೮ ಜನ ದುಡಿಮೆಯಲ್ಲಿ ತೊಡಗಿದ್ದಾರೆ. ಶೇ ೬೧% ರಷ್ಟು ಅದರಲ್ಲಿ ವಯಸ್ಕ ಪುರುಷರು ೩೦ ಜನ, ಶೇ. ೨೦% ವಯಸ್ಕ ಸ್ತ್ರೀಯರು ೨೮ ಜನ, ಶೇ. ೧೯% ರಷ್ಟು, ವೃದ್ದರು ಪುರುಷ ೧೧ ಜನ, ಶೇ. ೭% ರಷ್ಟು, ಸ್ತ್ರೀಯರು ೧೦ ಜನ, ಶೇ. ೬% ರಷ್ಟು, ಬಾಲಕಾರ್ಮಿಕರು ಪುರುಷ ೫ ಜನ, ಶೇ, ೩% ರಷ್ಟು, ಸ್ತ್ರೀಯರು ೪ ಜನ, ಶೇ, ೨% ರಷ್ಟು. ಈ ಅಂಕಿ-ಸಂಖ್ಯೆಗಳನ್ನು ಗಮನಿಸಿದರೆ, ದುಡಿಮೆಯಲ್ಲಿ ತೊಡಗಿದ ಕುಟುಂಬಗಳು ಕೆ.ಸೂಗೂರು, ಮುದೆನೂರು ಗ್ರಾಮಗಳಿಗಿಂತ ಬೆಂಚೆಕ್ಯಾಂಪ್ ಗ್ರಾಮದಲ್ಲಿ ಅತಿಹೆಚ್ಚು ಜನ ದುಡಿಮೆಯಲ್ಲಿ ತೊಡಗಿದ್ದಾರೆ ಎಂಬುದು ಕಂಡುಬರುತ್ತದೆ. ನಂತರದ ಸ್ಥಾನ ಕೆ.ಸೂಗೂರು ಗ್ರಾಮಕ್ಕೆ ಮಾರನೇ ಸ್ಥಾನ ಮುದೆನೂರು ಗ್ರಾಮಕ್ಕೆ ಎಂದು ಹೇಳಬಹುದು.

ಭೋವಿ ಸಮುದಾಯದ ಕುಟುಂಬಗಳುತೀರ ತೀರ ಬಡತನದಲ್ಲಿರುವುದರಿಂದ ದುಡಿಮೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಈ ಸಮುದಾಯದ ಜನ ಕಾಯಕವನ್ನು ನಂಬಿದವರಾಗಿದ್ದಾರೆ. ಈ ಸಮುದಾಯದಲ್ಲಿ ಅನಕ್ಷರಸ್ಥರ ಸಂಖ್ಯೆ ಹೆಚ್ಚು, ಅಕ್ಷರಸ್ಥರ ಸಂಖ್ಯೆ ಕಡಿಮೆ ಇದೆ. ಸರ್ಕಾರವು ಭೋವಿ ಸಮುದಾಯದ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದರೂ ಆ ಯೋಜನೆಗಳಿಂದ ವಂಚಿತರಾಗಿದ್ದಾರೆ ಎಂದು ಹೇಳಬಹುದು.

ಇತ್ತೀಚಿನ ಅಂಕೆ ಸಂಖ್ಯೆಗಳನ್ನು ಗಮನಿಸಿದರೆ ಭೋವಿ ಸಮುದಾಯದಲ್ಲಿ ಶಿಕ್ಷಣ ಪಡೆಯುತ್ತಿರುವವರ ಪ್ರಮಾಣದಲ್ಲಿ ಏರಿಕೆಯಾಗುತ್ತಿರುವುದು ಕಂಡುಬರುತ್ತದೆ ಹಾಗೂ ಸರ್ಕಾರಿ ನೌಕರಿಯಲ್ಲಿ ಇರುವವರು ಸಂಖ್ಯೆ ಈ ಮೂರು ಗ್ರಾಮದಲ್ಲಿ ೦.೬೮% ರಷ್ಟು, ಇದರಲ್ಲಿ ಸ್ತ್ರೀಯರು ಯಾರು ನೌಕರಿಯಲ್ಲಿ ಇಲ್ಲ. ಕೆಲ ಪದವೀದರರೂ ಕಟ್ಟಡ ಕೆಲಸ ಮಾಡುತ್ತಿದ್ದಾರೆ. ಸ್ವಾತಂತ್ರ್ಯ ಬಂದು ೬೮ ವರ್ಷಕಳೆದರು, ವಿಜ್ಞಾನದ ಬೆಳವಣಿಗೆಯಾಗಿದ್ದರೂ ಈ ಭೋವಿ ಸಮುದಾಯ ಅಭಿವೃದ್ಧಿ ಇಲ್ಲದೆ ಬಡತನದಿಂದ ಮೂಲಸೌಲಭ್ಯಗಳ ಕೊರತೆಯಿಂದ ಜೀವನ ನಡೆಸುತ್ತಿದ್ದಾರೆ.

೩.೨.೭ ಶಿಕ್ಷಣ ಪ್ರಮಾಣ

ಅಧ್ಯಯನ ವ್ಯಾಪ್ತಿಯಲ್ಲಿ ಕ್ಷೇತ್ರ ಕಾರ್ಯದಿಂದ ದೊರೆತ ಮಾಹಿತಿ ಪ್ರಕಾರ ಭೋವಿ ಸಮುದಾಯದಲ್ಲಿ ಶಿಕ್ಷಣ ಪಡೆದವರ ಪ್ರಮಾಣವನ್ನು ಈ ಕೆಳಗಿನ ಕೋಷ್ಟಕದಲ್ಲಿ ೩.೨.೭ ರಲ್ಲಿ ವಿಶ್ಲೇಷಿಸಲಾಗಿದೆ.

ಗ್ರಾಮವಾರು ಭೋವಿ ಸಮುದಾಯದ ಶೈಕ್ಷಣಿಕ ಸ್ಥಿತಿಗತಿ

ಕ್ರ ಸಂ.	ಗ್ರಾಮದ ಹೆಸರು	ಅಕ್ಷರಸ್ಥರು		ಅನಕ್ಷರಸ್ಥರು		ಪ್ರಾಥಮಿಕ		ಮಾದ್ಯಮಿಕ		ಪದವಿ ಪೂರ್ವ		ಪದವಿ		ಸ್ನಾತಕೋತ್ತರ		ವೃತ್ತಿ ಶಿಕ್ಷಣ		ನೌಕರರು		ಒಟ್ಟು	
		ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
೧	ಕೆ.ಸೂಗೂರು	೩೦ ೧೧.೩೬	೨೨ ೮.೩೩	೧೦೦ ೩೭.೮೭	೧೧೨ ೪೨%	೬ ೨.೨೭	೮ ೩.೦೩	೧೦ ೩.೭೮	೧೦ ೩.೭೮	೫ ೧.೮೯	೨ ೦.೭೫	೨ ೦.೭೫	೦	೩ ೧.೧೩	೦	೨ ೦.೭೫	೨ ೦.೭೫	೨ ೦.೭೫	–	೧೩೦	೧೩೪
೨	ಬೆಂಚಿಕ್ಯಾಂಪ್	೬ ೨೦%	೪ ೧೩.೩೩	೮ ೨೬.೬	೧೨ ೪೦%	೧ ೩%	೨ ೬.೬೬	೨ ೬.೬೬	೨ ೬.೬೬	೨ ೬.೬೬	–	೧ ೩%	–	–	–	–	–	–	–	೧೪	೧೬
೩	ಮುದೆನೂರು	೧೧ ೮.೦೮	೯ ೬.೬೧	೫೧ ೩೭.೫	೬೫ ೪೭%	೩ ೨.೨೦	೩ ೨.೨೦	೪ ೨.೯೪	೫ ೩.೬೭	೨ ೧.೪೭	೨ ೧.೪೭	೧ ೦.೭೩	–	–	–	–	–	೧	–	೬೨	೭೪
	ಒಟ್ಟು	೮೨ ೧೯.೦೬		೩೪೮ ೮.೯೩		೨೩ ೫.೩೪		೩೩ ೭.೬೭		೧೩ ೩.೦೨		೦.೯೩		೩ ೦.೬೯		೪ ೦.೯೩		೩ ೦.೬೯		೪೩೦ (೧೦೦)	

ಕೋಷ್ಟಕ ೩.೨.೭ ರಲ್ಲಿ ಭೋವಿ ಸಮುದಾಯದ ಶೈಕ್ಷಣಿಕ ಪ್ರಮಾಣವು ಕ್ಷೇತ್ರ ಅಧ್ಯಯನದ ಮಾಹಿತಿ ಪ್ರಕಾರ ಕೆ.ಸೂಗೂರು ಗ್ರಾಮದಲ್ಲಿ ೫೦ ಕುಟುಂಬಗಳಿದ್ದು ೨೬೪ ಜನರು ವಾಸಿಸುತ್ತಿದ್ದು ಅದರಲ್ಲಿ ಅಕ್ಷರಸ್ಥರು ಪುರುಷರು ೩೦ ಜನ ಶೇ. ೧೧.೩೬ ರಷ್ಟು, ಸ್ತ್ರೀಯರು ೨೨ ಜನ ಶೇ. ೮.೩೩ ರಷ್ಟು ಒಟ್ಟು ೫೨ ಜನರಲ್ಲಿ ಶೇ ೧೯.೬೯ ರಷ್ಟು ಶಿಕ್ಷಣ ಪ್ರಮಾಣವಿದ್ದು ಶಿಕ್ಷಣವನ್ನು ಕಲಿಯದೆ ಅನಕ್ಷರಸ್ಥರ ಸಂಖ್ಯೆ ಪುರುಷರು ೧೦೦ ಜನ ಶೇ. ೩೭.೮೭%, ಸ್ತ್ರೀಯರು ಶೇ. ೪೨%, ಒಟ್ಟು ೨೧೨ ಜನರಲ್ಲಿ ಶೇ. ೮೦.೩೦% ರಷ್ಟು ಜನ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇವರಲ್ಲಿ ಸರ್ಕಾರಿ ನೌಕರಿ ಪಡೆದವರು ಇಬ್ಬರು ಶೇ. ೦.೭೫ ರಷ್ಟು ಇವರು ಪುರುಷರು ಸ್ತ್ರೀಯರು ಯಾರು ಸರ್ಕಾರಿ ನೌಕರಿಯಲ್ಲಿ ಇಲ್ಲ ಮತ್ತು ಖಾಸಗಿ ಸಂಸ್ಥೆಗಳಲ್ಲಿ ನೌಕರಿಯನ್ನು ಯಾರು ಮಾಡುತ್ತಿಲ್ಲ, ಕೃಷಿ, ದಿನಗೂಲಿ, ಕಟ್ಟಡ ಕೆಲಸಗಳಲ್ಲಿ ನಿರತರಾಗಿದ್ದಾರೆ. ಪ್ರಾಥಮಿಕ ಶಿಕ್ಷಣ ಪಡೆಯುವವರು ಪುರುಷರು ೬ ಜನ ಶೇ ೨.೨೭, ಸ್ತ್ರೀಯರು, ೮ ಜನ ಶೇ ೩.೦೩, ಮಾಧ್ಯಮಿಕ ಶಿಕ್ಷಣ ಪುರುಷರು ೧೦ ಜನ ಶೇ. ೩.೭೮, ಸ್ತ್ರೀಯರು ೧೦ ಜನ ಶೇ. ೩.೭೮, ಪದವಿಪೂರ್ವ ಪುರುಷರು ೨ ಜನ ಶೇ. ೦.೭೫, ಸ್ತ್ರೀಯರು ೨ ಜನ ಶೇ ೦.೭೫, ಪದವಿ ಶಿಕ್ಷಣ ಪುರುಷ ೨ ಜನ ಶೇ ೦.೭೫, ಸ್ತ್ರೀಯರು ಯಾರು ಇಲ್ಲ. ಸ್ನಾತಕೋತ್ತರ ಶಿಕ್ಷಣ ಪುರುಷ ೩ ಜನ ಶೇ ೧.೧೩, ಸ್ತ್ರೀಯರು ಇಲ್ಲ, ವೃತ್ತಿಶಿಕ್ಷಣ ಪುರುಷ, ಸ್ತ್ರೀಯರು ತಲಾ ೨ ಜನ ಶೇ ೦.೭೫, ಪುರುಷರು ಸ್ತ್ರೀಯರಿಗಿಂತ ಹೆಚ್ಚು ಶಿಕ್ಷಣ ಪಡೆದಿದ್ದು ಸ್ತ್ರೀಯರ ಶಿಕ್ಷಣ ಮಟ್ಟ ಕುಸಿದಿದೆ.

ಬೆಂಚೆಕ್ಯಾಂಪ್ ಗ್ರಾಮದಲ್ಲಿ ೬ ಕುಟುಂಬ ೩೦ ಜನರಲ್ಲಿ ಒಟ್ಟು ಶಿಕ್ಷಣ ಪಡೆದವರು ೧೦ ಜನ. ಶೇ ೩೩.೩೩ ರಷ್ಟು, ಅನಕ್ಷರಸ್ಥರು ೨೦ ಜನ ಶೇ ೬೬.೬೭ ರಷ್ಟು, ಅತಿಹೆಚ್ಚು ಅನಕ್ಷರತೆ ಕಂಡುಬಂದಿದೆ. ಪ್ರಾಥಮಿಕ ಶಿಕ್ಷಣ ಪಡೆದವರಲ್ಲಿ ಪುರುಷರು ೧ ಶೇ ೩%, ಸ್ತ್ರೀಯರು ೨ ಜನ ಶೇ ೬.೬೬%, ಮಾಧ್ಯಮಿಕ ಶಿಕ್ಷಣ ಪುರುಷ ೨ ಜನ, ಶೇ. ೬.೬೬%, ಸ್ತ್ರೀಯರು ೨ ಜನ, ಶೇ. ೬.೬೬% ಪದವಿಪೂರ್ವ ಶಿಕ್ಷಣ ಪುರುಷರು ೨ ಜನ, ಶೇ. ೬.೬೬%, ಪದವಿ ಶಿಕ್ಷಣ ಪುರುಷರು ೧ ಶೇ. ೩%, ಸ್ನಾತಕ, ವೃತ್ತಿ ಶಿಕ್ಷಣ ನೌಕರರು ಇಲ್ಲ.

ಮದೆನೂರು ಗ್ರಾಮದಲ್ಲಿ ೩೪ ಕುಟುಂಬಗಳಿದ್ದು ೧೩೬ ಜನರು ಇದ್ದಾರೆ ಅದರಲ್ಲಿ ಶಿಕ್ಷಣ ಪಡೆದವರು ೨೦ ಜನ ಶೇ ೧೪.೭೦%, ಅನಕ್ಷರಸ್ಥರು ೧೬೬ ಜನ ಶೇ ೮೫.೨೯ ರಷ್ಟು, ಇದರಲ್ಲಿ ಅಕ್ಷರಸ್ಥ ಪುರುಷರು ೧೧ ಜನ ಶೇ. ೮.೮%, ಸ್ತ್ರೀಯರು ೬.೯ ಜನ ಶೇ

೬.೬೧% ರಷ್ಟು, ಅನಕ್ಷರಸ್ಥರು ಪುರುಷರು ೫೧ ಜನ ಶೇ ೩೭.೫%, ಸ್ತ್ರೀಯರು ೬೫ ಜನ ಶೇ ೪೭% ರಷ್ಟು, ಗ್ರುಪ್ ನೌಕಕರು ೧ ಇದ್ದು ಈ ಮೇಲಿನ ಅಂಕೆ ಸಂಖ್ಯೆಗಳನ್ನು ಗಮನಿಸಿದರೆ ಕೆ.ಸೂಗೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅಕ್ಷರಸ್ಥರು ೮೨ ಜನ ಶೇ. ೧೯.೦೬%, ಅನಕ್ಷರಸ್ಥರು ೩೪೮ ಜನ ಶೇ. ೮೦.೯೩% ರಷ್ಟು ಈ ಅಂಶಗಳನ್ನು ಗಮನಿಸಿದರೆ. ಅತಿಹೆಚ್ಚು ಜನರು ಅನಕ್ಷರಸ್ಥರು ಇದ್ದು ಅದರಲ್ಲಿ ಸ್ತ್ರೀಯರ ಶಿಕ್ಷಣ ಅತೀ ಕಡಿಮೆ ಇದೆ. ಸ್ತ್ರೀಯರ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡದೆ ಮನೆಯಲ್ಲಿ ಕೆಲಸದ ಯಂತ್ರದಂತೆ ಕಾಣುತ್ತಿದ್ದಾರೆ. ಈ ಸಮುದಾಯದಲ್ಲಿ ಹೆಣ್ಣು ಅಡುಗೆ ಮನೆಗೆ ಮಾತ್ರ ಸೀಮಿತ ಎನ್ನುವಂತೆ ನೋಡಿಕೊಂಡು, ಪುರುಷರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದು ಕಂಡು ಬರುತ್ತದೆ.

ಕೆ.ಸೂಗೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಾಸಿಸುವ ಭೋವಿ ಕುಟುಂಬಗಳು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಹಿಂದೆ ಉಳಿಯಲು ಮೂಲ ಕಾರಣ ಅನಕ್ಷರತೆ, ವೈಜ್ಞಾನಿಕ ತಿಳುವಳಿಕೆಯ ಕೊರತೆ ಹಾಗೂ ಕುಟುಂಬಗಳು ಆರ್ಥಿಕವಾಗಿ ದುರ್ಭಲರಾಗಿರುವುದು. ಬಡತನ, ನಿರುದ್ಯೋಗ ವಲಸಗಾರಿಕೆಯಂತಹ ಸಮಸ್ಯೆಗಳಿಂದ ಈ ಸಮುದಾಯದ ಜನರು ಶಿಕ್ಷಣದಿಂದ ವಂಚಿತರಾಗಲು ಮೂಲ ಕಾರಣವಾಗಿದೆ ಎಂದು ಹೇಳಬಹುದ

ಅಡಿಟಿಪ್ಪಣಿ (ಈ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಮಾಹಿತಿ ನೀಡಿದವರು.)

೧. ದಾಸಪ್ಪ, ಗುತ್ತಿಗೆದಾರ, ವಯಸ್ಸು–೩೧, ಕೆ.ಸೂಗೂರು
೨. ಹಲಿಗೆಪ್ಪ, ಕಲ್ಲುಸೀಳುವ ವೃತ್ತಿ, ವಯಸ್ಸು–೪೦, ಕೆ.ಸೂಗೂರು
೩. ಪದ್ಮಮ್ಮ, ಬಿಂಚೆವಡಿಯುವವರು, ವಯಸ್ಸು–೪೧, ಕೆ.ಸೂಗೂರು
೪. ವರಳುಕಲ್ಲು ಕೆತ್ತುವವ, ವಯಸ್ಸು–೪೫, ಕೆ.ಸೂಗೂರು
೫. ಯಂಕಪ್ಪ, ಗುತ್ತಿಗೆದಾರ, ವಯಸ್ಸು–೫೨, ಕೆ.ಸೂಗೂರು
೬. ಕಾಳಿಂಗಪ್ಪ, ಗುತ್ತಿಗೆದಾರ ಮತ್ತು ಬೇಲ್ದಾರ, ವಯಸ್ಸು–೪೩, ಕೆ.ಸೂಗೂರು
೭ ಯಬ್ಬುಟದ ಯಂಕಪ್ಪ, ಮೂರ್ತಿಶಿಲ್ಪಿ, ವಯಸ್ಸು–೫೦, ಕೆ.ಸೂಗೂರು
೮. ಸವರೆಪ್ಪ, ಗುತ್ತಿಗೆದಾರ, ವಯಸ್ಸು–೩೮, ಕೆ.ಸೂಗೂರು
೯. ಹನುಮಂತಪ್ಪ, ಸಣ್ಣರೈತ, ವಯಸ್ಸು–೫೨, ಕೆ.ಸೂಗೂರು
೧೦ ವಡ್ರು ಮೂಕಮ್ಮ, ವ್ಯಾಪಾರ, ವಯಸ್ಸು–೪೮, ಕೆ.ಸೂಗೂರು
೧೧ ಲಕ್ಷ್ಮಮ್ಮ, ಪಶುಪಾಲಕಿ, ವಯಸ್ಸು–೪೫, ಬೆಂಚೆಕ್ಯಾಂಪ್
೧೨ ರಮೇಶ, ಕುರಿಸಾಕುವವ, ವಯಸ್ಸು–೨೬, ಕೆ.ಸೂಗೂರು
೧೩ ವಡ್ರು ಲಕ್ಷ್ಮಮ್ಮ, ದಿನಗೂಲಿ, ವಯಸ್ಸು–೬೮, ಕೆ.ಸೂಗೂರು

ಅಧ್ಯಾಯ ನಾಲ್ಕು

ಸರ್ಕಾರದ ಅಭಿವೃದ್ಧಿ ಯೋಜನೆಗಳು ಮತ್ತು ಭೋವಿ ಸಮುದಾಯ

ಕೃಷಿ, ಪಶುಪಾಲನೆ, ತೋಟಗಾರಿಕೆ, ಗ್ರಾಮೀಣ ಮತ್ತು ಸಣ್ಣಕೈಗಾರಿಕೆ,
ವಸತಿ ಇಲಾಖಾ ಯೋಜನೆಗಳು, ಶೈಕ್ಷಣಿಕ ಪ್ರಗತಿಯೋಜನೆಗಳು,
ಸಹಕಾರ ಇಲಾಖಾ ಯೋಜನೆಗಳು, ಪರಿಶಿಷ್ಟ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳು,
ಸ್ವಯಂ ಉದ್ಯೋಗ ಯೋಜನೆ, ಗಂಗಾಕಲ್ಯಾಣ ಯೋಜನೆ

ಅಧ್ಯಾಯ ನಾಲ್ಕು

ಸರ್ಕಾರದ ಅಭಿವೃದ್ಧಿ ಯೋಜನೆಗಳು ಮತ್ತು ಭೋವಿ ಸಮುದಾಯ

'ಭಾರತ ದೇಶವು ಹಲವಾರು ಜಾತಿ ಸಮುದಾಯಗಳನ್ನೊಳಗೊಂಡು ವಿವಿಧ ಸಂಸ್ಕೃತಿಯನ್ನೊಳಗೊಂಡ ದೇಶವಾಗಿದೆ. ಬ್ರಿಟೀಷರ ಆಡಳಿತದ ಕಾಲದಲ್ಲಿ ಭಾರತೀಯರು ಆಳಿಸಿಕೊಳ್ಳುವವರಾಗಿ ಹಾಗೂ ಗುಲಾಮರಾಗಿ ಪ್ರಾಣಿಗಳಂತೆ ಜೀವನ ನಡೆಸಬೇಕಾದ ಅನಿವಾರ್ಯತೆಯಿತ್ತು.' ಭಾರತದಲ್ಲಿ ಹಲವಾರು ಕೆಳಸಮುದಾಯಗಳು ಕತ್ತಲೆಯಲ್ಲಿ ನಡೆದಂತೆ ಕೆಲ ಸಮುದಾಯಗಳ ಆಳ್ವಿಕೆಯಲ್ಲಿ ಜೀವನ ನಡೆಸುತ್ತಿದ್ದವು. ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸ್ವಾತಂತ್ರ್ಯವಿಲ್ಲದೆ ಜೀವನ ನಡೆಸುತ್ತಿದ್ದವು. ಈ ಕೆಳಸಮುದಾಯಗಳು ಅನುಭವಿಸುತ್ತಿರುವ ಸಮಸ್ಯೆಗಳನ್ನು ಕಂಡು ಈ ಸಮಸ್ಯೆಗಳ ಪರಿಹಾರಕ್ಕೆ ಡಾ.ಬಿ.ಆರ್ ಅಂಬೇಡ್ಕರ್‌ರವರು ಸಂವಿದಾನವನ್ನು ಬರೆದು ಕಾನೂನಿನ ವ್ಯವಸ್ಥೆಯನ್ನು ಮಾಡಿಕೊಟ್ಟರು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ದಿಗಾಗಿ, ೧೯೯೦ ರಲ್ಲಿ ಜಾರಿಗೆ ಬಂದ ೬೫ನೇ ತಿದ್ದುಪಡಿ ಕಾಯ್ದೆಯನ್ವಯ ೩೩೮ನೇ ವಿಧಿಯನ್ನು ತಿದ್ದುಪಡಿಮಾಡಿ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಸಂಬಂಧಿಸಿದ ವಿಶೇಷ ಅಧಿಕಾರಿಯ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ರಾಷ್ಟ್ರೀಯ ಆಯೋಗವನ್ನು ರಚಿಸಲು ಅವಕಾಶ ಕಲ್ಪಿಸಲಾಯಿತು. ಈ ಕಾಯ್ದೆಯು ೨೦೦೩ ರಲ್ಲಿ ಜಾರಿಗೆ ಬಂದ ೮೯ನೇ ಸಂವಿಧಾನ ತಿದ್ದುಪಡಿ ಕಾಯ್ದೆಯನ್ವಯ ೩೩೮ನೇ ವಿಧಿಯನ್ನು ತಿದ್ದುಪಡಿ ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗವನ್ನು ೧) ಪರಿಶಿಷ್ಟ ಜಾತಿ ರಾಷ್ಟ್ರೀಯ ಆಯೋಗ ೨) ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ ಎಂದು ಇಬ್ಬಾಗ ಮಾಡಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಪ್ರತ್ಯೇಕ ಆಯೋಗಗಳನ್ನು ಅಸ್ತಿತ್ವಕ್ಕೆ ತಂದು ಈ ಸಮುದಾಯಗಳ ಅಭಿವೃದ್ದಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಆಯೋಜನೆಗಳು ಈ ಕೆಳಗಿನಂತಿವೆ.

ಭಾರತ ಸಂವಿಧಾನವು ನೀಡುವ ಸೌಲಭ್ಯಗಳು ಕಲಂ ೩೪೧ ಹಾಗೂ ೩೪೨ ರನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಲಭ್ಯವಾಗಿರುತ್ತದೆ. ಕೇಂದ್ರ

ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ಸರ್ಕಾರದ ಸೌಲತ್ತುಗಳನ್ನು ಪ್ರಮುಖವಾಗಿ ಮೂರು ಹಂತಗಳಲ್ಲಿ ನೀಡುತ್ತದೆ.

೧) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಶೇ. ೧೫ ಮತ್ತು ೩% ರಷ್ಟು ಮೀಸಲಾಗಿದೆ.

೨) ಶೇ. ೩೧ ರಷ್ಟು ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರರಿಗೆ ಮೀಸಲಿಡಲಾಗಿದೆ.

೩) ಶೇ. ೫೦ ಕ್ಕಿಂತ ಹೆಚ್ಚು ಸಾಮಾನ್ಯ ವರ್ಗಕ್ಕೆ ಮೀಸಲಿಡಲಾಗಿದೆ"[೧]

ಪರಿಶಿಷ್ಟ ಜಾತಿ ಸಮುದಾಯದಲ್ಲಿ ಗುರುತಿಸಲ್ಪಡುವ ಭೋವಿ ಸಮುದಾಯವು ತನ್ನ ಅಸ್ತಿತ್ವಕ್ಕಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆಂಬುದನ್ನು ಕಂಡುಕೊಳ್ಳಲಾಗಿದೆ. ಇಂತಹ ಸಮಸ್ಯೆಗಳಿಗೆ ಪರಿಹಾರವಾಗಿ ಹಾಗೂ ಸಂಪೂರ್ಣ ಅಭಿವೃದ್ಧಿಗಾಗಿ ಸರ್ಕಾರಿ ಸೌಲಭ್ಯಗಳನ್ನು ಪಡೆಯುವುದು ಅನಿವಾರ್ಯ ಹಾಗೂ ಅವಶ್ಯಕವಾಗಿದೆ.

"ಕರ್ನಾಟಕದಲ್ಲಿ ಅಧಿಕೃತವಾಗಿ ಗುರುತಿಸಲ್ಪಟ್ಟ ಪರಿಶಿಷ್ಟ ಜಾತಿ (SC) Sheduld Cast Community ಗಳ ಸಂಖ್ಯೆ ೧೦೧ ಇದ್ದು, ಪರಿಶಿಷ್ಟ ಜಾತಿಗೆ ಸರ್ಕಾರ ನೀಡುವ ಮೀಸಲಾತಿಯ ಪ್ರಮಾಣ ಶೇ. ೧೫ ಇದೆ. ಹೀಗಾಗಿ ಸರ್ಕಾರ ಕೊಡುವ ಸೌಲಭ್ಯಗಳು ಕಡಿಮೆ ಎನಿಸುತ್ತದೆ"[೨]

ಪರಿಶಿಷ್ಟ ಜಾತಿಯ ವ್ಯಾಪ್ತಿಯಲ್ಲಿ ಬರುವ ಭೋವಿ ಸಮುದಾಯವು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಿಂದುಳಿದಿದ್ದು. ಪ್ರಗತಿಯನ್ನು ಹೊಂದಲು ಸಮುದಾಯದ ಸಂಘಟನೆಗಳ ಮೂಲಕ ಸಕ್ರೀಯವಾಗಿ ಪ್ರಯತ್ನಿಸುತ್ತಾ ಸಂವಿಧಾನಾತ್ಮಕ ಶಾಸನೀಯ ಸೌಲಭ್ಯಗಳನ್ನು ಪಡೆಯುತ್ತಿದೆ. ಭೋವಿ ಸಮುದಾಯವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳಾದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆ, ಕಂದಾಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಡಾ. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ ಹಾಗೂ ಅಂಗವಿಕಲರ ಹಿರಿಯ ನಾಗರೀಕರ ಕಲ್ಯಾಣ

ಇಲಾಖೆಗಳ ನೆರವಿನ ಅಡಿಯಲ್ಲಿ ಈ ಕೆಳಗಿನ ಹಲವಾರು ಸರ್ಕಾರಿ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದೆ.

"ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕಾರ್ಯಕ್ರಮಗಳ ವಿವರಗಳು

ಉದ್ದೇಶ :

- 'ಸಮಗ್ರ SC ಅಭಿವೃದ್ಧಿ ಯೋಜನೆ ವತಿಯಿಂದ ಇತರೆ ಪ್ರದೇಶಗಳಲ್ಲಿರುವ ಪರಿಶಿಷ್ಟ ಜಾತಿ ಕುಟುಂಬಗಳನ್ನು ಬಡತನ ರೇಖೆಗಿಂತ ಮೇಲೆ ತರಲು ಮೂಲ ಸೌಲಭ್ಯಗಳನ್ನು ಒದಗಿಸುವುದು.
- ಪರಿಶಿಷ್ಟ ವರ್ಗದವರ ಆಚಾರ ವಿಚಾರ ಸಂಸ್ಕೃತಿಯನ್ನು ಕಾಪಾಡಲು ನೀತಿ ನಿಯಮಗಳನ್ನು ಜಾರಿಗೊಳಿಸುವುದು.
- ಪರಿಶಿಷ್ಟ ಜಾತಿ ಕುಟುಂಬಗಳು ವಾಸಿಸುತ್ತಿರುವ ಓಣಿಗಳು, ಹಟ್ಟಿಗಳಿಗೆ ಗರಿಷ್ಠ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.
- ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವನ್ನು ತೀವ್ರಗೊಳಿಸುವುದು ಮತ್ತು ಎದುರಾಗುವ ತೊಂದರೆಗಳನ್ನು ಪರಿಹರಿಸುವುದು.
- ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಆರ್ಥಿಕ ಸೌಲಭ್ಯಗಳು, ಶೈಕ್ಷಣಿಕ ಕಾರ್ಯಕ್ರಮಗಳು, ವಸತಿ, ಕುಡಿಯುವ ಶುದ್ಧ ನೀರು, ಓಣಿಗಳು, ಹಟ್ಟಿಗಳಿಗೆ ವಿದ್ಯುತ್ ಸಂಪರ್ಕ, ರಸ್ತೆ, ಚರಂಡಿ ಕಾಮಗಾರಿಗಳು, ಆರೋಗ್ಯ ಕೇಂದ್ರದ ಸ್ಥಾಪನೆ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದು
- ಪರಿಶಿಷ್ಟ ಜಾತಿ ಸಮುದಾಯಗಳ ಹಿತಾಸಕ್ತಿಯನ್ನು ರಕ್ಷಿಸಲು ಕಾನೂನು ಕಾಯ್ದೆಯ ಬೆಂಬಲ ಮಾಡುವುದು"[೩]

ಕೃಷಿ :

ಇಂದು ಅನೇಕ ಭೋವಿ ಕುಟುಂಬಗಳು ಕೃಷಿ ಹಾಗೂ ಕೃಷಿ ಕೂಲಿಯಲ್ಲಿ ತೊಡಗಿಸಿಕೊಳ್ಳುತ್ತಿರುವುದು ಕಂಡು ಬಂದಿದೆ. ಇವರು ಮಾಡುತ್ತಿದ್ದ ಕೃಷಿ ಪಾರಂಪರಿಕವಾಗಿರುವುದರಿಂದ ಉತ್ಪಾದನೆಯಲ್ಲಿ ಹಿಂದೆ ಬಿದಿದ್ದಾರೆ. ಇದರಿಂದಾಗಿ ಅವರು ಆರ್ಥಿಕವಾಗಿ ಬಹಳ ಹಿಂದೆ ಉಳಿಯುವಂತಾಗಿದೆ. ಈ ಸಮುದಾಯವು ಇಂದು ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಪ್ರಬಲರಾಗಬೇಕಾಗಿದ್ದು ಅನಿವಾರ್ಯ. ಆದ್ದರಿಂದ ಸರ್ಕಾರ ಕೃಷಿ ಇಲಾಖೆ ಮುಖಾಂತರ ಅವರ ಕೈಗೊಳ್ಳುವ ಕೃಷಿಯಲ್ಲಿ ಹಳೆಯ ಉಪಕರಣಗಳ ಬಳಕೆಯ ಬದಲಾಗಿ ವೈಜ್ಞಾನಿಕತೆಯ ಉಪಕರಣಗಳ ಬಳಕೆ ಮಾಡಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಲು ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಆಯೋಜನೆಗಳು ಈ ಕೆಳಗಿನಂತಿವೆ.

- "ಆಧುನಿಕ ಕೃಷಿ ಉಪಕರಣಗಳನ್ನು ಖರೀದಿಸಲು ಹಾಗೂ ದವಸ ಧಾನ್ಯ ಸಂಗ್ರಹಣೆ ಮಾಡಲು ಕಣಜಗಳನ್ನು ನಿರ್ವಹಿಸಲು ಶೇ.೭೫ ರಷ್ಟು ಸಹಾಯಧನ ನೀಡಲಾಗುತ್ತಿದೆ.
- ಕೃಷಿ ಮಾಡಲು ನೀರಾವರಿ ಸೌಲಭ್ಯಗಳನ್ನು ಒದಗಿಸಲು ಡೀಸೆಲ್ ಅಥವಾ ಪೆಟ್ರೋಲ್ ಪಂಪ್‌ಸೆಟ್‌ಗಳಿಗಾಗಿ ರೂ. ೨೦,೦೦೦/- ವರೆಗೆ ಹಾಗೂ ಜಲಾಂತರ್ಗತ ಪಂಪ್‌ಸೆಟ್‌ಗಳಿಗಾಗಿ ರೂ. ೨೫,೦೦೦/- ವರೆಗೆ ಶೇ.೭೫ ರಷ್ಟು ಸಹಾಯಧನ ಮಂಜೂರು ಮಾಡಲಾಗುತ್ತದೆ.
- ಹನಿ ನೀರಾವರಿ ಘಟಕ, ತುಂತೂರು ನೀರಾವರಿ ಘಟಕಗಗಳ ನಿರ್ಮಾಣ, ಹೊಲಗಳಲ್ಲಿ ನೀರು ಸಂಗ್ರಹಣೆ ಮಾಡಲು ಚೆಕ್ ಡ್ಯಾಂಗಳ ರಚನೆ ಮುಂತಾದ ಯೋಜನೆಗಳಿಗೂ ಸಹಾಯ ಧನ ನೀಡಲಾಗುತ್ತಿದೆ.
- ಕೈಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳನ್ನು ಕೊಳ್ಳಲು ೧೦,೦೦೦ ರೂ. ಗಳನ್ನು ಶೇ. ೭೫ ಸಹಾಯಧನದ ಮೂಲಕ ನೀಡಲಾಗುವುದು.
- ಬೆಳವಣಿಗೆಗೆ ಔಷದಿ ಸಿಂಪಡಿಸಲು ಪೆಟ್ರೋಲ್ ಪಂಪ್‌ಗಳನ್ನು ೨೦,೦೦೦/- ವರೆಗೆ ೫ HP ಶೇ. ೭೫ ರ ರಿಯಾಯ್ತಿಯಲ್ಲಿ ಕೊಡಿಸಿಕೊಡುವುದು.

○ ನಬಾರ್ಡ್ ದರಗಳಲ್ಲಿ ಎತ್ತಿನ ಬಂಡಿ ಮತ್ತು ಉಳುಮೆ ಮಾಡಲು ಎತ್ತುಗಳನ್ನು ಕೊಡಿಸಿಕೊಡಲಾಗುವುದು”[೪]

“ಕೃಷಿ ಇಲಾಖೆಯಿಂದ ಸೌಲಭ್ಯ ಪಡೆದ ಫಲಾನುಭವಿಗಳ ಗ್ರಾಮವಾರು ಕುಟುಂಬವಾರು ಪ್ರಮಾಣ

ಕ್ರ. ಸಂ.	ಗ್ರಾಮದ ಹೆಸರು	ಒಟ್ಟು ಕುಟುಂಬ	ಕೃಷಿಯಲ್ಲಿ ತೊಡಗಿಕೊಂಡ ಕುಟುಂಬ	ಫಲಾನುಭವಿಗಳ ಸಂಖ್ಯೆ
೧	ಕೆ. ಸೂಗೂರು	೫೦	೯	೨ ೨೨%
೨	ಬೆಂಚೆಕ್ಯಾಂಪ್	೬	೩	೧ ೩೩%
೩	ಮುದೆನೂರು	೩೪	೯	೧ ೧೧%

ಈ ಅಂಶಗಳನ್ನು ನೋಡಿದರೆ ಕೆ. ಸೂಗೂರಲ್ಲಿ ೭ ಕುಟುಂಬ ಶೇ.೮೦, ಬೆಂಚೆಕ್ಯಾಂಪ್‌ನಲ್ಲಿ ೨ ಕುಟುಂಬ ಶೇ.೭೦, ಮುದೆನೂರಲ್ಲಿ ೮ ಕುಟುಂಬ ಶೇ.೯೦ ರಷ್ಟು ಕೃಷಿ ಇಲಾಖೆಯಿಂದ ವಂಚಿತವಾಗಿರುವುದು ಕಂಡು ಬಂದಿವೆ”[೫]

ಪಶು ಸಂಗೋಪನೆ:

“ಪರಿಶಿಷ್ಟ ಜಾತಿ ಸಮುದಾಯಗಳು ಪಶು ಸಂಗೋಪನೆ ಮಾಡಲು ಪ್ರೋತ್ಸಾಹಿಸುವುದಕ್ಕೆ ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ನಬಾರ್ಡ್ ಯೋಜನೆಯಲ್ಲಿ ರಿಯಾಯಿತಿ ದರಗಳಲ್ಲಿ ಹಾಲಿನ ಉತ್ಪಾದನೆಗೆ ಘಟಕ ಸ್ಥಾಪನೆಗೆ ಶೇ. ೭೫ ರಷ್ಟು ಸಹಾಯ ಧನದಲ್ಲಿ ಸಾಲವನ್ನು ನೀಡಲಾಗುತ್ತದೆ. ಮತ್ತು ಪಶು ಸಂಗೋಪನೆಯಿಂದ ಹಾಲಿನ ಉತ್ಪಾದನೆ ಮಾಡಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಪ್ರತಿ ಲೀಟರ್‌ಗೆ ೮. ರೂಪಾಯಿಯನ್ನು ಹೆಚ್ಚುವರಿಯಾಗಿ ಹಣ ಕೊಡಲಾಗುತ್ತದೆ. ಹಾಗೂ ಪಶು ಸಂಗೋಪನೆಯಿಂದ ಕೃಷಿಯಲ್ಲಿ ಸಾವಯವ ಗೊಬ್ಬರದ ಸಂಗ್ರಹಣೆಯಿಂದ ಕೃಷಿಯ ಬೆಳವಣಿಗೆ ಹೆಚ್ಚಿಸುವುದು ಮತ್ತು ಸ್ವ ಉದ್ಯೋಗವನ್ನು ಕೈಗೊಂಡು ಆರ್ಥಿವಾಗಿ ಪ್ರಬಲರಾಗುತ್ತಾ ಸ್ವಾವಲಂಬಿಯಾಗಿ ಜೀವನ ನಡೆಸಲು ಸರ್ಕಾರವು ಇಂತಹ ಯೋಜನೆಗಳನ್ನು ಜಾರಿಗೆ ತಂದಿದೆ.

ಕೆ.ಸೂಗೂರು, ಬೆಂಚೆಕ್ಯಾಂಪ್, ಮುದೆನೂರು ಗ್ರಾಮಗಳಲ್ಲಿ ಪಶುಸಂಗೋಪನೆಯಲ್ಲಿ ತೊಡಗಿದ ಕುಟುಂಬಗಳು ಪಶುಸಂಗೋಪನಾ ಯೋಜನೆಗಳಿಂದ ಉಪಯೋಗ ಪಡೆಯದೆ ವಂಚಿತವಾಗಿದೆ. ಮತ್ತು ಇಂತಹ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವವರು ಇಲ್ಲವಾಗಿದೆ. ಹಾಗೂ ಇತ್ತೀಚೆಗೆ ಪಶುಸಂಗೋಪನೆ ಮಾಡುವ ಭೋವಿ ಕುಂಟುಬಗಳು ಈ ವೃತ್ತಿಗೆ ಒಲವು ತೋರಿಸುವುದು ಕಡಿಮೆಯಾಗಿದೆ.

ಪಶುಸಂಗೋಪನೆ ಮಾಡಲು ಅಧಿಕವಾಗಿ ಖರ್ಚುಮಾಡಲಾಗುತ್ತದೆ. ಪಶುಗಳಿಗೆ ಮೇವು ಖರೀದಿಸಲು (ಕೊಳ್ಳಲು) ಅಧಿಕಬೆಲೆ ಮತ್ತು ನೀರಾವರಿಯ ಸೌಲಭ್ಯ ಇಲ್ಲ, ಮತ್ತು ಆಧುನಿಕ ಯಂತ್ರಗಳ ಬಳಕೆಯಿಂದ ಇದ್ದ ಬೀಳು ಜಮೀನುಗಳನ್ನು ಬಳಕೆಮಾಡುವುದರಿಂದ ಪಶುಗಳನ್ನು ಮೇಯಿಸಲು ತೊಂದರೆಯಾಗಿ ಪಶುಸಂಗೋಪನೆ ಮಾಡುವವರು ಕಡಿಮೆಯಾಗಿದೆ.

ಸರ್ಕಾರವು ಪಶುಸಂಗೋಪನೆ ಮಾಡುವ ಇಚ್ಛೆವುಳ್ಳ ಕುಟುಂಬಗಳಿಗೆ ಶೇ. ೭೫ರಷ್ಟು ರಿಯಾಯ್ತಿ ಸಾಲದಲ್ಲಿ ಪಶುಗಳನ್ನು ಕೊಡಿಸಿಕೊಡುತ್ತದೆ. ಮತ್ತು ಪಶುಗಳನ್ನು ಕೊಳ್ಳುವವರಿಗೆ ತಮ್ಮ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಹಾಕುತ್ತದೆ".[೬] ಆದರೂ ಈ ಪಶು ಸಂಗೋಪನೆಯನ್ನು ಮಾಡಲು ಭೋವಿ ಸಮುದಾಯ ಹಿಂಜರಿಯುತ್ತಿದೆ. ಏಕೆಂದರೆ ಪಾರಂಪರಿಕ ಕಸುಬುಗಳಿಗೆ ಜಾಸ್ತಿ ಒಲವು ತೋರಿಸುತ್ತಿದೆ ಪಶುಸಂಗೋಪನೆಯ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದಿರುವುದು ಮತ್ತು ಜೀವನ ನಿರ್ವಹಣೆಗೆ ನಗರ ಪ್ರದೇಶಗಳಿಗೆ ವಲಸೆ ಹೋಗುವುದರಿಂದ ಪಶುಗಳಿಗೆ ಆಹಾರಕ್ಕಾಗಿ ಮೇವು ಒದಗಿಸಲು ಸ್ವಂತ ಜಮೀನು ಇಲ್ಲದಿರುವುದರಿಂದ ಪಶುಸಂಗೋಪನೆಯನ್ನು ಮಾಡಲು ಹಿಂಜರಿಯುತ್ತಿರುವುದು ಕಂಡುಬಂದಿದೆ.

ತೋಟಗಾರಿಕೆ :

ಪರಿಶಿಷ್ಟ ಜಾತಿ ಸಮುದಾಯಗಳ ಆದಾಯವನ್ನು ಹೆಚ್ಚಿಸುವ ಸಲುವಾಗಿ ವಾಣಿಜ್ಯ ಹಾಗೂ ತೋಟಗಾರಿಕಾ ಬೆಳೆಗಳನ್ನು ಬೆಳೆಯಲು ಅತಿ ಹೆಚ್ಚಿನ ಆದ್ಯತೆಯನ್ನು ನೀಡಿ ಪ್ರೋತ್ಸಾಹಿಸಲಾಗುತ್ತದೆ. ಒಂದು ಪರಿಶಿಷ್ಟ ಜಾತಿ ಸಮುದಾಯಕ್ಕೆ ಅರ್ಧ ಎಕರೆ ೧/೨ ತೆಂಗು

ಅಥವಾ ಕಾಲು ಎಕರೆ ೧/೪ ಗುಲಾಬಿ ಹಾಗೂ ಒಂದು ಎಕರೆ ಮಾವು, ಸಪೋಟ ಬೆಳೆಯಲು ನಿರ್ಮಾಣ ಮಾಡಿಕೊಡಲಾಗುತ್ತದೆ. ಈ ತೋಟವು ಎರಡು ವರ್ಷಗಳವರೆಗೆ ತೋಟಗಾರಿಕಾ ಇಲಾಖೆಯ ಪಾಲನೆಯಲ್ಲಿಯೇ ಇರುತ್ತದೆ. ಎರಡು ವರ್ಷಗಳವರೆಗೆ ವಾರ್ಷಿಕ ೧೦,೦೦೦/- ಪ್ರೋತ್ಸಾಹಧನ ಹಾಗೂ ತರಬೇತಿಯನ್ನು ಕೊಡಲಾಗುತ್ತದೆ. ಒಬ್ಬರಿಗೆ ೨೫೦/- ರೂ. ಶಿಷ್ಯ ವೇತನವನ್ನು ನೀಡಲಾಗುತ್ತದೆ".[೭]

ಈ ತೋಟಾಗಾರಿಕೆಯ ಸೌಲಭ್ಯವನ್ನು ಕೆ. ಸೂಗೂರು ಗ್ರಾಮದಲ್ಲಿ ಒಂದು ಕುಟುಂಬ ಮಾತ್ರ ಸೌಲಭ್ಯ ಪಡೆದಿದೆ. ಫಲಾನುಭವಿ ಹೆಸರು ವಡ್ರು ಯಂಕೋಬಣ್ಣ ಇವರು ೨ ಎಕರೆ ಜಮೀನಿನಲ್ಲಿ ಅರ್ಧ ಎಕರೆ ಜಮೀನನ್ನು ಬಳಸಿಕೊಂಡು ಪ್ಲಾಮ್ ಆಯಿಲ್ ಗಿಡ, ಸಪೋಟ, ಮತ್ತು ತೆಂಗಿನ ತೋಟ ಮಾಡುತ್ತಿದ್ದಾರೆ. ಉಳಿದ ಬೆಂಚೆಕ್ಯಾಂಪ್, ಮುದೆನೂರು ಗ್ರಾಮದಲ್ಲಿ ವಾಸಿಸುವ ಕುಟುಂಬಗಳು ಈ ಯಾವ ಸೌಲಭ್ಯ ಪಡೆದಿಲ್ಲ.

ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆ :

ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳ ಇಲಾಖೆಯ ಮೂಲಕ ಆಸಕ್ತ ಪರಿಶಿಷ್ಟ ಜಾತಿ ಕುಟುಂಬಗಳಿಗೆ ಹೊಲಿಗೆ ಯಂತ್ರ, ಬಡಗಿತನ, ಬಿದಿರು ಮತ್ತು ಚಿತ್ತದ ಕರಕುಶಲ ವಸ್ತುಗಳ ತಯಾರಿಕೆ, ಸೈಕಲ್ ರಿಪೇರಿ, ಕಮ್ಮಾರಿಕೆ, ಗಾರೆ ಕೆಲಸಗಳಲ್ಲಿ ಉಚಿತ ತರಬೇತಿ ಮತ್ತು ಉಚಿತ ಉಪಕರಣಗಳನ್ನು ವಿತರಿಸಲಾಗುತ್ತದೆ.

"ಗೃಹ ಮತ್ತು ಗುಡಿ ಕೈಗಾರಿಕೆಗಳ ಘಟಕಗಳ ಸ್ಥಾಪನೆಗೆ ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳ ಇಲಾಖೆಯಿಂದ ೨೫,೦೦೦/- ರೂಗಳ ಸಹಾಯಧನವನ್ನು ನೀಡಲಾಗುತ್ತದೆ. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಾಸಿಸುವ ಭೋವಿ ಕುಟುಂಬಗಳು ಈ ಯೋಜನೆಯಿಂದ ಯಾವುದೇ ಸೌಲಭ್ಯ ಪಡೆದಿಲ್ಲದಿರುವುದು ಕಂಡುಬಂದಿದೆ.

ಕಟ್ಟಡ ಕಾರ್ಮಿಕ ಇಲಾಖೆ :

ಕಟ್ಟಡ ಕೆಲಸ ಮಾಡುವ ಸಮುದಾಯಗಳ ರಕ್ಷಣೆಗಾಗಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ನೊಂದಾಯಿತ

ಫಲಾನುಭವಿಗಳಿಗೆ ನೋಂದಣಿಯಾಗಿ ಒಂದು ವರ್ಷದ ನಂತರ ದೊರೆಯುವ ಸೌಲಭ್ಯಗಳು.

- **ಅಪಘಾತ ಪರಿಹಾರ:** ಕೆಲಸದಿಂದುಂಟಾದ ಮರಣ ಅಥವಾ ಸಂಪೂರ್ಣ ಶಾಶ್ವತ ಅಂಗವಿಕಲರಾದಲ್ಲಿ ರೂ.೨,೦೦,೦೦೦/- ಭಾಗಶಃ ಶಾಶ್ವತ ಅಂಗವಿಕಲರಾದಲ್ಲಿ ಅಂಗವಿಕಲತೆಯ ಶೇ.ವಾರು ಆಧಾರದ ಮೇಲೆ ಪರಿಹಾರ.
- ಆರೋಗ್ಯ ಕೆಟ್ಟಾಗ ಆಸ್ಪತ್ರೆಯ ವೆಚ್ಚವಾಗಿ ಒಳರೋಗಿ ಧನಸಹಾಯ ರೂ.೪೦೦/- ರಿಂದ ೬,೦೦೦/- ವರೆಗೆ ಉಚಿತವಾಗಿ ಕೊಡುತ್ತದೆ.
- **ಪ್ರಮುಖ ವೈದ್ಯಕೀಯ ಧನಸಹಾಯ:** ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆಯಂತಹ ದೊಡ್ಡ ರೋಗಗಳಿಗೆ ೨ ಲಕ್ಷದವರೆಗೆ ಧನಸಹಾಯ ಪಡಿತರ ಚೀಟಿ ಹೊಂದಿದ ಕುಟುಂಬಗಳಿಗೆ ಹೈಸ್ಪೇಷಾಲಿಟಿ ಆಸ್ಪತ್ರೆಗಳಾದ ವೈದೇಹಿ, ಜೈದೇವದಂತಹ ಸಂಸ್ಥೆಗಳಲ್ಲಿ ರಿಯಾಯಿತಿ ದರದಲ್ಲಿ ಚಿಕಿತ್ಸೆ ವ್ಯವಸ್ಥೆ ಮಾಡುತ್ತದೆ. ಈ ಆಸ್ಪತ್ರೆಯಲ್ಲಿ ಕಾಮಾಕ್ಷಮ್ಮ ಎನ್ನುವ ಮಹಿಳೆ ಸೌಲಭ್ಯ ಪಡೆದಿದ್ದಾರೆ ಉಳಿದವರಿಗೆ ಈ ಯೋಜನೆಯ ಉಪಯೋಗ ಸಿಕ್ಕಿಲ್ಲದಿರುವುದು ಕಂಡುಬಂದಿದೆ.
- **ಅಂಗವಿಕಲತೆ ಪಿಂಚಣಿ:** ರೋಗಗಳಿಗೆ ತುತ್ತಾದ ಜನರಿಗೆ ಮಾಸಿಕ ೫೦೦ ರೂ. ಯಿಂದ ೫೦೦೦ ರೂ. ವರೆಗೆ ಎಕ್ಸ್‌ಗ್ರೇಷಿಯಾ ಧನಸಹಾಯ.
- ಹೆರಿಗೆ ಸೌಲಭ್ಯ : ಮಹಿಳಾ ಫಲಾನುಭವಿಗೆ ಮೊದಲ ಎರಡು ಹೆರಿಗೆಗಳಿಗೆ ತಲಾ ೧೫,೦೦೦/- ಧನಸಹಾಯ.
- ಶೈಕ್ಷಣಿಕ ಧನಸಹಾಯ : ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ

೧) ೫-೬ ಹಾಗೂ ೭ ನೇ ತರಗತಿ ಓದುತ್ತಿರುವವರಿಗೆ ಪ್ರತಿವರ್ಷಕ್ಕೆ ೨,೦೦೦/-

೨) ೮-೧೦ ನೇ ತರಗತಿ ಓದುತ್ತಿರುವವರಿಗೆ ಪ್ರತಿವರ್ಷಕ್ಕೆ ೩,೦೦೦/-

೩) ಎಸ್.ಎಸ್.ಎಲ್.ಸಿ ಯಿಂದ ಪದವಿ ಓದುತ್ತಿರುವವರಿಗೆ ೫,೦೦೦/- ರೂ.

೪) ಸ್ನಾತಕೋತ್ತರ ಪದವಿ ಓದುತ್ತಿರುವವರಿಗೆ ೧೫,೦೦೦/-

೫) ವೈದ್ಯಕೀಯ/ ಇಂಜಿನಿಯರಿಂಗ್ ಪದವಿ ಓದುತ್ತಿರುವವರಿಗೆ ಅರ್ಹತೆಯ ಸ್ಥಾನಕ್ಕೆ ನಿಗದಿಪಡಿಸಿದ ಶುಲ್ಕ ಪಾವತಿ ಮತ್ತು ಪ್ರತಿ ತಿಂಗಳು ೧,೦೦೦/- ಹಾಜರಾತಿ ಭತ್ಯೆ

೬) ವೈವಾಹಿಕ ಧನಸಹಾಯ : ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳಿಗೆ ೫೦,೦೦೦/- ರೂ.

೭) ಉಪಕರಣಗಳ ಖರೀದಿಗೆ ೫,೦೦೦/-"[೮]

ಈ ಇಲಾಖೆಯಲ್ಲಿ ನೊಂದಾಯಿಸಿದ ಕುಟುಂಬಗಳು ಕೆ. ಸೂಗೂರು ಗ್ರಾಮದಲ್ಲಿ ೩ ಕುಟುಂಬ ಬೆಂಚೆಕ್ಯಾಂಪ್‌ನಲ್ಲಿ ೧ ಕುಟುಂಬ ಮುದೆನೂರು ಗ್ರಾಮದಲ್ಲಿ ಯಾರೂ ನೊಂದಾಯಿಸಿಲ್ಲ. ಇಂತಹ ಯೋಜನೆಗಳ ಬಗ್ಗೆ ಮಾಹಿತಿ ನೀಡುವವರ ಕೊರತೆಯಿಂದ, ಅನಕ್ಷರತೆಯಿಂದ, ಸೌಲಭ್ಯಗಳಿಂದ ವಂಚಿತರಾಗಿರುವುದು ಕಂಡು ಬಂದಿದೆ.

"ಕರ್ನಾಟಕ ವಿದ್ಯುತ್ ಸರಬರಾಜು ನಿಗಮ :

ಪರಿಶಿಷ್ಟ ಜಾತಿ ಸಮುದಾಯಗಳು ವಾಸಿಸುತ್ತಿರುವ ಪ್ರದೇಶವನ್ನು ವಿದ್ಯುತ್ತೀಕರಣಗೊಳಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಮೂಲಕ ಈ ಕೆಳಗಿನ ಯೋಜನೆಗಳನ್ನು ಕೈಗೆತ್ತಿಕೊಂಡಿದೆ.

- "ಪರಿಶಿಷ್ಟ ಜಾತಿ ಸಮುದಾಯಗಳು ವಾಸಿಸುವ ಕಾಲೋನಿಗಳಿಗೆ ಸಂಪೂರ್ಣ ಬೆಳಕಿನ ವ್ಯವಸ್ಥೆ ಮಾಡುವುದು.
- ಪರಿಶಿಷ್ಟ ವರ್ಗದ ಜನರ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಯೋಜನೆಯನ್ನು ಹಮ್ಮಿಕೊಳ್ಳುವುದು"[೯]
- ಈ ಯೋಜನೆಯಿಂದ ಸೌಲಭ್ಯ ಪಡೆದ ಕುಟುಂಬಗಳು ಕೆ. ಸೂಗೂರು ಗ್ರಾಮದಲ್ಲಿ ೨ ಕುಟುಂಬ ಕೊಳವೆ ಬಾವಿ ಕೊರೆ ಅದಕ್ಕೆ ಈ ಯೋಜನೆಯಿಂದ ಉಚಿತ ವಿದ್ಯುತ್ ಸೌಲಭ್ಯ ಪಡೆದಿದ್ದಾರೆ. ಉಳಿದ ಕುಟುಂಬಗಳು ಸೌಲಭ್ಯ ಪಡೆದಿಲ್ಲ. ಬಹಳಷ್ಟು ಕುಟುಂಬಗಳು ಕೈಕೆಲಸದ ಮೇಲೆಯೇ ಅವಲಂಬನೆಯಾಗಿದ್ದು ಭೂಮಿಯನ್ನು ಹೊಂದಿಲ್ಲ. ಮತ್ತು ೨ಎಕರೆ ಜಮೀನು ಸಹ ಹೊಂದಿಲ್ಲದಿರುವುದರಿಂದ ಸರ್ಕಾರವು ಈ ಎರಡು ಎಕರೆ ಒಳಗೆ ಜಮೀನು ಇರುವವರಿಗೆ ಕೊಳವೆ ಬಾವಿಯನ್ನು ಕೊರೆಸುವುದಿಲ್ಲದಿರುವುದರಿಂದ ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ.

ವಸತಿ ಇಲಾಖಾ ಯೋಜನೆಗಳು:

ಗಿರಿಜನರ ಉಪಯೋಜನೆಯಡಿಯಲ್ಲಿ ವಸತಿ ಇಲಾಖೆಯ ವತಿಯಿಂದ ವಸತಿ ರಹಿತ ಬುಡಕಟ್ಟು ಕುಟುಂಬಗಳಿಗೆ ಆಶ್ರಯ ಮನೆ ವಿತರಣೆ ಮಾಡಲಾಗುತ್ತದೆ. ಆಶ್ರಯ ಯೋಜನೆ, ನೆರಳಿನ ಭಾಗ್ಯ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ, ಇಂದಿರ ಆವಾಸ ಯೋಜನೆ, ಬಸವ ವಸತಿ ಯೋಜನೆ, ಮುಂತಾದ ಯೋಜನೆಗಳ ಮೂಲಕ ಬುಡಕಟ್ಟುಗಳಿಗೆ ವಸತಿ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಈ ಇಲಾಖೆಯ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಗಳ ವರ ಅಭಿವೃದ್ದಿಗೆ ಮತ್ತು ಆರ್ಥಿಕ ಬೆಳವಣಿಗೆಗೆ ಈ ಕೆಳಕಂಡ ಯೋಜನೆಗಳಡಿಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ..

- "ಸ್ವರ್ಣ ಜಯಂತಿ ಶಹರಿ ರೋಜಗಾರ ಯೋಜನೆ
- ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತಗಳ ಅಭಿವೃದ್ಧಿ ಅನುದಾನ
- ರಸ್ತೆ ಮತ್ತು ಸೇತುವೆಗಳ ನಿರ್ಮಾಣ
- ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯ

ಡಾ. ಅಂಬೇಡ್ಕರ್ ವಸತಿ ಯೋಜನೆ :

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮನೆಗಳಿಲ್ಲದ ಕುಟುಂಬಗಳಿಗೆ ೧,೭೫,೦೦೦ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಮನೆಯನ್ನು ನಿರ್ಮಾಣ ಮಾಡಿಕೊಡುತ್ತದೆ. ಈ ಯೋಜನೆಯಿಂದ ವಸತಿ ಸೌಲಭ್ಯ ಪಡೆದ ಕುಟುಂಬಗಳು ಪಂಚಾಯತಿ ವ್ಯಾಪ್ತಿಯಲ್ಲಿ ೫ ಕುಟುಂಬ ಮಾತ್ರ.

ಇಂದಿರಾ ಆವಾಸ ಯೋಜನೆ :

ಗ್ರಾಮೀಣ ಪ್ರದೇಶಗಳಲ್ಲಿ ಗುಡಿಸಲು ಮನೆಗಳಲ್ಲಿ ವಾಸಿಸುವ ಕುಟುಂಬಗಳಿಗೆ ೧,೫೦,೦೦೦/– ರೂ ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸಿ ಕೊಡುವುದು. ಈ ಯೋಜನೆಯಿಂದ ಸೌಲಭ್ಯ ಪಡೆದ ಕುಟುಂಬಗಳ ಸಂಖ್ಯೆ ಪಂಚಾಸಯತಿ ವ್ಯಾಪ್ತಿಯಲ್ಲಿ ೩.

ಬಸವ ವಸತಿ ಯೋಜನೆ :

ಗ್ರಾಮೀಣ ಪ್ರದೇಶಗಳಲ್ಲಿ ಗುಡಿಸಲು ಮುಕ್ತ ಗ್ರಾಮಗಳನ್ನಾಗಿ ಮಾಡಲು ೧,೨೫,೦೦೦/- ಸಾವಿರ ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸಿಕೊಡುವ ಯೋಜನೆ ಇದಾಗಿದೆ"[೧೦]

ಇಷ್ಟೆಲ್ಲಾ ಯೋಜನೆಗಳನ್ನು ಜಾರಿಗೆ ತಂದಿದ್ದರೂ ಸಹ ಕೆ. ಸೂಗೂರು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಮನೆಗಳಿಲ್ಲದೇ ಗುಡಿಸಲುಗಳಲ್ಲಿ ವಾಸಿಸುವ ಕುಟುಂಬಗಳ ಸಂಖ್ಯೆ ಈ ಕೆಳಗಿನ ಕೊಷ್ಟಕದಲ್ಲಿ ವಿವರಿಸಲಾಗಿದೆ.

ಕ್ರ. ಸಂ.	ಗ್ರಾಮದ ಹೆಸರು	ಗುಡಿಸಿಲಿನಲ್ಲಿ ವಾಸಿಸುವ ಕುಟುಂಬ	ಹಂಚಿನ ಮನೆಯಲ್ಲಿ ವಾಸಿಸುವ ಕುಟುಂಬ	ಆರ್.ಸಿ.ಸಿ ಮತ್ತು ಮಾಳಿಗೆ ಮನೆ ಇರುವ ಕುಟುಂಬ
೧.	ಕೆ. ಸೂಗುರು	೧೦ ೨೦%	೧೫ ೩೦%	೨೫ ೫೦%
೨.	ಬೆಂಚೆ ಕ್ಯಾಂಪ್	೩ ೫೦%	೧ ೧೬%	೨ ೩೩%
೩.	ಮುದೆನೂರು	೮ ೨೩%	೧೬ ೪೭%	೧೦ ೨೯%
ಒಟ್ಟು ಶೇ.		೨೧ ೨೩.೩೩%	೩೨ ೩೫%	೩೭ ೪೧.೧೧% ೯೦ (೧೦೦)

ಈ ಮೇಲಿನ ಅಂಶಗಳನ್ನು ಗಮನಿಸಿದರೆ ಭೋವಿ ಸಮುದಾಯದಲ್ಲಿ ಇನ್ನೂ ಸಹ ಗುಡಿಸಲು ಮನೆಗಳಲ್ಲಿ ವಾಸಿಸುತ್ತಿದ್ದು ಈ ಕುಟುಂಬಗಳು ಶೇ. ೧೦ ಶೇ. ೨೦ ರಷ್ಟು, ಹಂಚಿನ ಮನೆಯಲ್ಲಿ ವಾಸಿಸುತ್ತಿದ್ದ ಕುಟುಂಬ ೧೫ ಶೇ. ೩೦, ಆರ್‌ಸಿಸಿ ಮತ್ತು ಮಾಳಿಗೆ ಮನೆಯಲ್ಲಿ ವಾಸಿಸುವವರು ೨೫ ಕುಟುಂಬ ಶೇ.೫೦ ರಷ್ಟು ಇದ್ದಾರೆ.

ಬೆಂಚೆಕ್ಯಾಂಪ್ ಗ್ರಾಮದಲ್ಲಿ ೩ ಕುಟುಂಬಗಳು ಶೇ. ೫೦ ರಷ್ಟು ಗುಡಿಸಿಲಿನಲ್ಲಿ ವಾಸಿಸುತ್ತಿದ್ದಾರೆ. ಒಂದು ಕುಟುಂಬ ಹಂಚಿನ ಮನೆ, ೨ ಕುಟುಂಬ ಆರ್‌ಸಿಸಿ ಮತ್ತು ಮಾಳಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ.

ಮುದೆನೂರು ಗ್ರಾಮದಲ್ಲಿ ೮ ಕುಟುಂಬಗಳಲ್ಲಿ ಶೇ. ೨೩ ರಷ್ಟು ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ೧೬ ಜನ ಹಂಚಿನ ಮನೆಯಲ್ಲಿ ವಾಸಿಸುತ್ತಿದ್ದಾರೆ ಶೇ. ೪೭ ರಷ್ಟು. ಆರ್‌ಸಿಸಿ ಮನೆಯಲ್ಲಿ ವಾಸಿಸುವವರು ೧೦ ಜನ ಶೇ. ೨೯ ರಷ್ಟು.

ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಇಡೀ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ೨೩% ರಷ್ಟು ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಸ್ವಾತಂತ್ರ್ಯ ಬಂದು ೬೮ ವರ್ಷ ಕಳೆದರೂ ಹಲವರು ಗುಡಿಸಲುಗಳಲ್ಲಿ ವಾಸಿಸುತ್ತಿರುವುದು ಕಂಡು ಬರುತ್ತದೆ.

"ಶೈಕ್ಷಣಿಕ ಪ್ರಗತಿ ಯೋಜನೆಗಳು :

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬದವರ ಮಕ್ಕಳಿಗೆ ವಿದ್ಯಾಭ್ಯಾಸವನ್ನು ನೀಡುವ ಸಲುವಾಗಿ ಜನಗಣತಿಯ ಆಧಾರದ ಮೇಲೆ ಜನಸಂಖ್ಯೆ ಪ್ರಮಾಣಕ್ಕೆ ಅನುಗುಣವಾಗಿ ಪರಿಶಿಷ್ಟ ಜಾತಿಗೆ ಶೇ. ೧೭.೧೫ ಪರಿಶಿಷ್ಟ ಪಂಗಡದ ಶೇ. ೬.೯೫ ಸೇರಿದಂತೆ ಒಟ್ಟು ಶೇ. ೨೪.೧೦ ರಷ್ಟು ಯೋಜನಾ ವೆಚ್ಚದ ಪಾಲು ಈ ಸಮುದಾಯಗಳಿಗೆ ಮೀಸಲಿಡಲಾಗಿದೆ. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಬುಡಕಟ್ಟು ಉಪ ಯೋಜನೆಗಳ ವಿಧೇಯದ ೨೦೧೩ ವಿಧೇಯಕವನ್ನು ಜಾರಿಗೆ ತಂದು ಶೋಷಿತ ವರ್ಗಗಳ ಚರಿತ್ರೆಯಲ್ಲಿ ಹೊಸ ದಾಖಲೆಯನ್ನು ನಿರ್ಮಿಸಿದೆ. ಸ್ವಾತಂತ್ರ್ಯ ಬಂದ ೬ ದಶಕಗಳ ನಂತರ ಶೋಷಿತ ಜನರ ಅಭ್ಯುದಯದ ಆಶಾಕಿರಣವಾಗಿ ಈ ವಿಧೇಯಕ ಮೂಡಿ ಬಂದಿದೆ.

ಸಮಾಜ ಕಲ್ಯಾಣ ಇಲಾಖೆ ೨೩೪೩ ಆಶ್ರಯ/ ವಸತಿ ಶಾಲೆ– ವಿದ್ಯಾರ್ಥಿ ನಿಲಯಗಳನ್ನು ತೆರೆದಿದ್ದು ೨,೪೭, ೯೬೭ ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ವಸತಿ ಸೌಕರ್ಯ ಕಲ್ಪಿಸಿದೆ. ೨೦೧೫–೧೬ ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ೧೨,೮೪,೦೭೭ ವಿದ್ಯಾರ್ಥಿಗಳಿಗೆ ೪೪೧.೫೪ ಕೋಟಿ ವಿದ್ಯಾರ್ಥಿ ವೇತನ ನೀಡಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದವರಿಗೆ ನೀಡಿದ ಯೋಜನಾ ಗಾತ್ರದಲ್ಲಿಯ ಅನುದಾನದ ಕೋಷ್ಟಕವನ್ನು ಈ ಕೆಳಗಿನಂತೆ ಕ್ರೋಢೀಕರಿಸಿ, ಸರ್ಕಾರದ ಯೋಜನಾ ಗಾತ್ರದಲ್ಲಿ ಹಂಚಿಕೆ ಯಾಗಿರುವುದನ್ನು ವಿವರಿಸಲಾಗಿದೆ".[೧೧]

ವರ್ಷ	ಯೋಜನಾ ಗಾತ್ರ	ಹಂಚಿಕೆ (ರೂ.ಕೋಟಿಗಳಲ್ಲಿ)			ಷರಾ
		SCSP	TSP	ಒಟ್ಟು	
೨೦೧೨-೧೩	೪೨೦೩೦.೦೦	೫೧೨೫.೦೦	೨೦೭೫.೬೦	೭೨೦೦.೦೦	ಕಾಯ್ದೆ ಜಾರಿ ಮುನ್ನ
೨೦೧೩-೧೪	೪೮೬೮೫.೦೦	೬೧೩೫.೫೭	೨೪೮೦.೭೪	೮೬೧೬.೩೧	ಹಂಚಿಕೆ ಮಾಡಿದ ಅನುದಾನ
೨೦೧೪-೧೫	೬೫೬೦೦.೦೦	೧೧೫೧೮.೯೯	೪೩೧೫.೧೮	೧೫೮೩೪.೧೭	ಕಾಯ್ದೆ ಜಾರಿ ನಂತರ
೨೦೧೫-೧೬	೭೨೯೬.೮೧	೧೧೭೭೩.೫೪	೪೫೮೨.೭೨	೧೬೩೫೬.೨೬	ಹಂಚಿಕೆ ಮಾಡಿದ ಅನುದಾನ
೨೦೧೬-೧೭	೮೫೩೭೫.೦೦	೧೩೯೭೬.೬೦	೫೫೬೬.೩೬	೧೯೫೪೨.೯೬	

೧) ಅಂಗನವಾಡಿ ಕೇಂದ್ರಗಳು :

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಇತರೆ ಸಮುದಾಯಗಳ ಮಕ್ಕಳಿಗೆ ಶಿಕ್ಷಣ ಪಡೆಯಲು ಪ್ರೇರೇಪಿಸುವ ಸಲುವಾಗಿ ಪ್ರಾರಂಭದಲ್ಲಿಯೇ ಶಾಲೆಗೆ ಹೋಗುವ ಮತ್ತು ಅಭ್ಯಾಸ ರೂಢಿಸಲು ಈ ಯೋಜನೆಯನ್ನು ಜಾರಿಗೆ ತಂದಿದೆ. ೩ ರಿಂದ ೫ ವರ್ಷ ವಯಸ್ಸಿನ ಮಕ್ಕಳು ಇಂತಹ ಕೇಂದ್ರಗಳಲ್ಲಿ ಪ್ರವೇಶ ಪಡೆಯುತ್ತಿದ್ದಾರೆ. ಪ್ರತಿಯೊಂದು ಮಗುವಿಗೆ ಕೇಂದ್ರದಲ್ಲಿ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳಲು ಇಬ್ಬರು ನೌಕರರು

ಇರುತ್ತಾರೆ. ಮಕ್ಕಳಿಗೆ ಮದ್ಯಾಹ್ನದ ಉಪಹಾರವನ್ನು ಅಂಗನವಾಡಿ ಕೇಂದ್ರದಲ್ಲಿಯೇ ನೀಡಲಾಗುತ್ತದೆ.

ಕೆ.ಸೂಗೂರು ಗ್ರಾಮದಲ್ಲಿ ಅಂಗನವಾಡಿಗಳ ಸಂಖ್ಯೆ ೨ ಇದ್ದು, ಅದರಲ್ಲಿ ಭೋವಿ ಸಮುದಾಯದ ಮಕ್ಕಳು ಯಾರೂ ಇಲ್ಲ. ಬೆಂಚೆಕ್ಯಾಂಪ್‌ನಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ಅಲ್ಲಿಯೂ ಒಬ್ಬರಿಲ್ಲ. ಮತ್ತು ಮುದೆನೂರು ಗ್ರಾಮದಲ್ಲಿ ೨ ಅಂಗನವಾಡಿ ಅಲ್ಲಿಯೂ ಯಾವ ಮಕ್ಕಳು ಇಲ್ಲವಾಗಿದೆ. ಸರ್ಕಾರ ಎಷ್ಟೆಲ್ಲ ವ್ಯವಸ್ಥೆ ಮಾಡಿದರೂ ಈ ಸಮುದಾಯದ ಮಕ್ಕಳು ಸೌಲಭ್ಯದಿಂದ ವಂಚಿತವಾಗಿವೆ".[೧೨]

ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು :

ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಬುಡಕಟ್ಟು ಸಮುದಾಯದ ಮಕ್ಕಳಿಗೆ ವಿದ್ಯಾಭ್ಯಾಸವನ್ನು ನೀಡುವ ಸಲುವಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲಾಗಿದೆ. ೫ ರಿಂದ ೧೦ ನೇ ತರಗತಿಯವರೆಗೆ ವ್ಯಾಸಾಂಗ ಮಾಡುವ ಬುಡಕಟ್ಟು ಸಮುದಾಯದ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕವಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲಾಗಿದೆ. ಪ್ರತಿಯೊಂದು ವಿದ್ಯಾರ್ಥಿ ನಿಲಯದಲ್ಲಿ ಮೇಲ್ವಿಚಾರಕರು, ಅಡುಗೆ ಮಾಡುವವರು, ಕಾವಲುಗಾರರು ಇರುತ್ತಾರೆ. ಪ್ರತಿ ವಿದ್ಯಾರ್ಥಿಗೆ ವಸತಿ, ಊಟ, ಪುಸ್ತಕ, ಸೋಪ್ ಕೊಡುತ್ತಾರೆ. ಇದರ ವೆಚ್ಚ ಸರ್ಕಾರವೇ ಭರಿಸುತ್ತದೆ.

ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ :

ಪ್ರೌಢ ಶಿಕ್ಷಣದ ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ನಗರಗಳಿಗೆ ತೆರಳುವ ಪ್ರತಿಭಾವಂತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮಾಸಿಕ ೮೫೦ ರೂ. ವೆಚ್ಚದಲ್ಲಿ ಊಟ ವ್ಯವಸ್ಥೆಯನ್ನು ಮಾಡಲಾಗಿದೆ. ವೆಚ್ಚವನ್ನು ಸರ್ಕಾರವು ನೀಡುತ್ತದೆ. ಪಂಚಾಯತಿ ವ್ಯಾಪ್ತಿಯಲ್ಲಿ ವಾಸಿಸುವ ಭೋವಿ ಕುಟುಂಬದ ಮಕ್ಕಳು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಶಿಕ್ಷಣ ಪಡೆಯುತ್ತಿರುವವರು ೧೦ ಜನ ಮಾತ್ರ. ಉಳಿದಂತೆ ಬಾಲಕಾರ್ಮಿಕರಾಗಿ ದುಡಿಯುತ್ತಿರುವುದು ಕಂಡುಬಂದಿದೆ.

ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು :

ರಾಜ್ಯ ಸರ್ಕಾರವು ಈ ಯೋಜನೆಯನ್ನು ೧೯೯೬-೯೭ ನೇ ಸಾಲಿನಲ್ಲಿ ಜಾರಿಗೆ ತಂದಿದೆ. ಇಲ್ಲಿ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಶೈಕ್ಷಣಿಕ ಪ್ರಗತಿಗಾಗಿ ವಸತಿ ಮತ್ತು ಶಿಕ್ಷಣದ ವ್ಯವಸ್ಥೆ ಎರಡು ಇದ್ದು ಪ್ರವೇಶಾನುಪಾತ ೫೦:೫೦ ಆಗಿರುತ್ತದೆ. ಪ್ರವೇಶ ಪರಿಕ್ಷೆಯನ್ನು ಪೂರೈಸಿದ ಮಕ್ಕಳಿಗೆ ಇಲ್ಲಿ ಪ್ರವೇಶ ನೀಡಲಾಗುತ್ತದೆ. ೧೦ನೇ ತರಗತಿಯವರೆಗೆ ಉಚಿತ ವಸತಿ ಜೊತೆ ಆಹಾರಕ್ಕಾಗಿ ೫೦೦ ರೂ ಮಾಸಿಕ ಹಣ ಸರ್ಕಾರವೇ ಭರಿಸುತ್ತದೆ. ಈ ಶಾಲೆಗಳಲ್ಲಿ ಶಿಕ್ಷಣ ಪಡೆಯುವ ಭೋವಿ ಕುಟುಂಬಗಳು ಕೆ.ಸೂಗೂರು ಗ್ರಾಮದಲ್ಲಿ ಇಬ್ಬರು ಮಾತ್ರ ಈ ಸೌಲಭ್ಯ ಪಡೆದಿದ್ದಾರೆ.

ನವೋದಯ ಶಾಲೆಗಳು :

ಪರಿಶಿಷ್ಟ ಜಾತಿ ಸಮುದಾಯದ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡಲು ನವೋದಯ ಶಾಲೆಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದು ಕೇಂದ್ರ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮವಾಗಿದ್ದು ಇಲ್ಲಿ ೬ ರಿಂದ ೧೦ನೇ ತರಗತಿಯವರೆಗೆ ಶಿಕ್ಷಣ ನೀಡಲಾಗುತ್ತದೆ. ಪೂರ್ವಭಾವಿಯಾಗಿ ಪರಿಕ್ಷೆ ನಡೆಸಿ ಅದರಲ್ಲಿ ಗಳಿಸಿದ ಅಂಕಗಳ ಅನುಸಾರ ಮೀಸಲಾತಿಗೆ ಅನುಗುಣವಾಗಿ ಪ್ರವೇಶವನ್ನು ೫೦ ಜನ ಗಂಡು, ೫೦ ಜನ ಹೆಣ್ಣು ಈ ಅನುಪಾತದಲ್ಲಿ ನೀಡಲಾಗುತ್ತಿದೆ. ಈ ಶಾಲೆಗಳಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯ ಇರುತ್ತದೆ. ಮೊರಾರ್ಜಿ ಮತ್ತು ನವೋದಯ ಸಂಸ್ಥೆಗಳಲ್ಲಿ ಭೋವಿ ಸಮುದಾಯದ ಯಾವ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿಲ್ಲದಕ್ಕೆ ಕಾರಣ ಪೂರ್ವ ಪರೀಕ್ಷೆ ಪಾಸು ಮಾಡದಿರುವುದು ಕಾರಣವಾಗಿದೆ. ಇದಕ್ಕೆ ತಂದೆ – ತಾಯಿಗಳು ಶಿಕ್ಷಣ ಕಲಿಯದಿರುವುದು".[೧೩]

ಗ್ರಾಮ ಪಂಚಾಯ್ತಿ ವತಿಯಿಂದ : "ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ೨೨.೭೫% ರಷ್ಟು ಅನುದಾನದಲ್ಲಿ ಬಡಕುಟುಂಬದ ವಿದ್ಯಾರ್ಥಿಗಳಿಗೆ ಪುಸ್ತಕಗಳು ಖರೀದಿಸಲು ಮತ್ತು ಸ್ಪರ್ದಾತ್ಮಕ ಪರೀಕ್ಷೆ ಬರರೆಯಲು ಸಹಾಯ ಧನವನ್ನು ನೀಡುತ್ತದೆ".[೧೪]

ಪ್ರತಿಭಾ ಪುರಸ್ಕಾರ ಯೋಜನೆ :

"ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಮತ್ತು ಪರಿಶಿಷ್ಟ ಜಾತಿ ಪಂಗಡದ ಶಿಕ್ಷಣದ ಮಟ್ಟ ಹೆಚ್ಚಿಸುವ ಉದ್ದೇಶದಿಂದ ಸರ್ಕಾರ ಪ್ರೋತ್ಸಾಹಧನ ಯೋಜನೆಯನ್ನು ಅನುಷ್ಠಾನಗೊಳಿಸುತ್ತಾ ಬಂದಿದೆ. ಆದರೆ ಮಾನ್ಯ ಶ್ರೀ ಸಿದ್ದರಾಮಯ್ಯ ಮುಖ್ಯಮಂತ್ರಿಗಳು ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಈ ದಿಕ್ಕಿನಲ್ಲಿ ಗಣನೀಯ ಹೆಚ್ಚಳ ಮಾಡಿದೆ. ಈ ಮಾಹಿತಿಯನ್ನು ಕೆಳಗಿನ ಕೊಷ್ಟಕದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಎಸ್.ಎಸ್.ಎಲ್.ಸಿ	ರೂ. ೭,೦೦೦/- (ಶೇ. ೬೦ ಕ್ಕಿಂತ ಹೆಚ್ಚು) ರೂ. ೧೫,೦೦೦/- (ಶೇ. ೭೫ ಕ್ಕಿಂತ ಹೆಚ್ಚು)
ಪಿ.ಯು.ಸಿ	ರೂ. ೨೦,೦೦೦/-
ಪದವಿ	ರೂ. ೨೫,೦೦೦/-
ಸ್ನಾತಕೊತ್ತರ ಪದವಿ	ರೂ. ೩೦,೦೦೦/-
ವೈದ್ಯಕೀಯ, ಇಂಜಿನಿಯರಿಂಗ್ ಇತ್ಯಾದಿ ವೃತ್ತಿಪರ ಕೋರ್ಸ್ ಪದವಿ	ರೂ. ೩೫,೦೦೦/-

೨೦೧೫-೧೬ ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ೧೨,೮೪,೦೭೭ ವಿದ್ಯಾರ್ಥಿಗಳಿಗೆ ೪೪೮೧.೫೪ ಕೋಟಿ ವಿದ್ಯಾರ್ಥಿ ವೇತನ ನೀಡಲಾಗಿದೆಂದು ತಿಳಿಯ ಪಡಿಸಿದರು".[೧೫]

ಭೋವಿ ಸಮುದಾಯದ ಕುಟುಂಬಗಳು ಆರ್ಥಿಕವಾಗಿ ಹಿಂದುಳಿದಿರುವುದರಿಂದ ಮತ್ತು ಮನೆಯ ಹಿರಿಯರಿಗೆ ಶಿಕ್ಷಣ ಜ್ಞಾನ ಇಲ್ಲದಿರುವುದರಿಂದ ತಮ್ಮ ಮಕ್ಕಳಿಗೆ ಮೆಟ್ರಿಕ್

ಮತ್ತು ಉನ್ನತ ಶಿಕ್ಷಣ ಕಲಿಸಲು ಸಾಧ್ಯವಾಗದ ಕಾರಣ ಇಷ್ಟು ಮೊತ್ತದ ಪ್ರತಿಭಾಪುರಸ್ಕಾರ ಸೌಲಭ್ಯದಿಂದ ವಂಚಿತರಾಗಿರುವುದು ಕಂಡು ಬಂದಿದೆ.

ಉನ್ನತ ಮಟ್ಟ ಶಿಕ್ಷಣ ಮಾಡುವವರಿಗೆ ಫೆಲೋಷಿಪ್ :

"ವಿವಿಧ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಯಲ್ಲಿ ತೊಡಗಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸಂಶೋಧನೆ ಮಾಹಿತಿ ಸಂಗ್ರಹಣೆಗಳ ವೆಚ್ಚ ಭರಿಸಲು ಎಂ.ಟೆಕ್. ವಿದ್ಯಾರ್ಥಿಗಳಿಗೆ ೮,೦೦೦/-, ಪಿ.ಎಚ್.ಡಿ ವಿದ್ಯಾರ್ಥಿಗಳಿಗೆ ರೂ. ೭,೦೦೦/- ಎಂ.ಫಿಲ್ ವಿದ್ಯಾರ್ಥಿಗಳಿಗೆ ೩,೦೦೦/- ಮತ್ತು ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (JRF) ಪಾಸ್ ಆಗಿ ಪಿ.ಎಚ್.ಡಿ ಮಾಡುವ ಸಂಶೋಧನಾರ್ಥಿಗಳಿಗೆ ತಿಂಗಳಿಗೆ ೨೮,೦೦೦/- ರೂ ಗಳಂತೆ ೪ ವರ್ಷ ಫೆಲೋಷಿಪ್ ಮತ್ತು RJNF ರಾಜೀವ್ ಗಾಂಧಿ ರಾಷ್ಟ್ರೀಯ ಫೆಲೋಷಿಪ್‌ನಿಂದ ಆಯ್ಕೆಯಾದ ವಿದ್ಯಾರ್ಥಿಗಳಿಗೆ ತಿಂಗಳಿಗೆ ೨೫,೦೦೦/- ದಂತೆ ಐದುವರ್ಷ ಹಣವನ್ನು ಕೊಡುತ್ತದೆ".[೧೬]

ಪಂಚಾಯತಿ ವ್ಯಾಪ್ತಿಯಲ್ಲಿ ವಾಸಿಸುವ ೯೦ ಭೋವಿ ಕುಟುಂಬಗಳಲ್ಲಿ ೪೩೦ ಜನಗಳಿದ್ದು ಅದರಲ್ಲಿ ಉನ್ನತ ಶಿಕ್ಷಣ ಪಡೆದು ಶಿಶ್ಯವೇತನ ಪಡೆಯುವವರು ಸಂಖ್ಯೆ ಒಬ್ಬರು ಮಾತ್ರ ಕಂಡುಬರುತ್ತದೆ.

ಉನ್ನತ ವ್ಯಾಸಾಂಗಕ್ಕೆ ಧನಸಹಾಯ :

"ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಾಂಗಕ್ಕೆ ಆಯ್ದ ಕೋರ್ಸ್‌ಗಳಲ್ಲಿ ಪ್ರವೇಶ ಪಡೆಯುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಧನಸಹಾಯ ನೀಡಲಾಗುವುದು. ಗರಿಷ್ಠ ೧೦ ಲಕ್ಷ ೩ ವರ್ಷಗಳ ಅವಧಿಗೆ ಈ ಯೋಜನೆಯಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ಮೂಲ ನಿವಾಸಿಯಾಗಿದ್ದು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು. ಪದವಿ ಮತ್ತು ಸ್ನಾತಕೊತ್ತರ ಪದವಿಗಳಲ್ಲಿ ಕನಿಷ್ಠ ಶೇ. ೬೦ ರಷ್ಟು ಅಂಕಗಳನ್ನು ಗಳಿಸಿರಬೇಕು ವಿದೇಶದ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಾಂಗಕ್ಕೆ ಅಭ್ಯಾರ್ಥಿಯು ಆಯ್ಕೆಯಾಗಿರಬೇಕು".[೧೭]

ಸಹಕಾರ ಇಲಾಖಾ ಯೋಜನೆಗಳು :

ಬಡತನದಿಂದ ಜೀವನ ನಡೆಸುವ ಪರಿಶಿಷ್ಟ ಜಾತಿ ಸಮುದಾಯದ ಕುಟುಂಬಗಳನ್ನು ಆರ್ಥಿಕವಾಗಿ ಅಭಿವೃದ್ಧಿಪಡಿಸಲು ಮತ್ತು ಸಮಾಜದಲ್ಲಿ ಹಲವಾರು ಸಮುದಾಯಗಳಂತೆ ಸ್ವಾವಲಂಬಿ ಜೀವನ ನಡೆಸಲು ಹಾಗೂ ಸಮಾನತೆಯ ಜೀವನ ನಡೆಸಲು ಸರ್ಕಾರವು ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಆ ಯೋಜನೆಗಳಲ್ಲಿ,

ಮೈಕ್ರೋಕ್ರೆಡಿಟ್ ಯೋಜನೆ/ ಮಹಿಳಾ ಸಮೃದ್ಧಿ ಯೋಜನೆ (NSCFDC) :

"ಈ ಯೋಜನೆಯನ್ನು ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಹಾಗೂ ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಘಟಕದ ವೆಚ್ಚ ಗರಿಷ್ಠ ಮೊತ್ತ ರೂ. ೨೫,೦೦೦/- ವಾಗಿದ್ದು ಇದರಲ್ಲಿ ರೂ. ೧೫,೦೦೦/- NSCFDC ಯವರ ಅವಧಿ ಸಾಲವಾಗಿರುತ್ತದೆ. ಅವಧಿ ಸಾಲಕ್ಕೆ ಶೇ. ೫ ರಷ್ಟು ಬಡ್ಡಿಯನ್ನು ವಿಧಿಸಲಾಗುವುದು. ಉಳಿದ ರೂ. ೧೦,೦೦೦/- ಜಿಲ್ಲಾ ಪಂಚಾಯತ್, ನಗರಾಭಿವೃಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ವಿಶೇಷ ಕೇಂದ್ರೀಯ ನೆರವು ಯೋಜನೆಯಡಿ ಇತರೆ ಇಲಾಖೆಗಳಲ್ಲಿ ಲಭ್ಯವಿರುವ ಸಹಾಯಧನವನ್ನು ಪಡೆದು ಅನುಷ್ಠಾನಗೊಳಿಸಲಾಗುವುದು.

ಸ್ವಸಹಾಯ ಸಂಘದ ಸದಸ್ಯರುಗಳು ಹಾಗೂ ವೈಯಕ್ತಿಕ ಫಲಾಪೇಕ್ಷಿಗಳಿಗೆ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಆರ್ಥಿಕ ಸೌಲಭ್ಯಗಳನ್ನು ಒದಗಿಸಲಾಗುವುದು.

ಪರಿಶಿಷ್ಟ ಜಾತಿ ಸಮುದಾಯಗಳು ಉತ್ಪಾದನೆ ಮಾಡಿದ ಉತ್ಪನ್ನಗಳಿಗೆ ನಿಗದಿತ ಬೆಲೆ ದೊರೆಯಲು, ಉತ್ಪನ್ನಗಳ ಮಾರಾಟದಲ್ಲಿ ಮಧ್ಯವರ್ತಿಗಳ ಕಾಟವನ್ನು ತಪ್ಪಿಸಲು ಹಾಗೂ ಬುಡಕಟ್ಟು ಜನರಿಗೆ ಆರ್ಥಿಕ ಸಬಲತೆಯನ್ನು ನೀಡಲು ಸಹಕಾರ ಇಲಾಖೆಯ ಮೂಲಕ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಈ ಸಂಘಗಳಲ್ಲಿ ತಾವು ಉತ್ಪಾದನೆ ಮಾಡಿದ ಉತ್ಪನ್ನಗಳನ್ನು ಮಾರಾಟ ಮಾಡಬಹುದು ಮತ್ತು ತಮಗೆ ಬೇಕಾದ ಜೀವನಾವಶ್ಯಕ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಪಡೆದುಕೊಳ್ಳಬಹುದಾಗಿದೆ. ಸರ್ಕಾರವು ಪ್ರತಿವರ್ಷ ಭೋವಿ ಸಮುದಾಯಗಳ ಆರ್ಥಿಕ

ಅಭಿವೃದ್ಧಿ ಹೊಂದಲು ಇಂತಹ ಯೋಜನೆಗಳನ್ನು ಜಾರಿಗೆ ತಂದಿದ್ದರು ಪರಿಪೂರ್ಣ ಮಾಹಿತಿ ಕೊರತೆಯಿಂದ ಈ ಸೌಲಭ್ಯದಿಂದ ವಂಚಿತರಾಗಿರುವುದು ಕಂಡುಬಂದಿದೆ.

ಪರಿಶಿಷ್ಟರ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳು :

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದ ಜಮೀನು ಇರುವ SC: Sheduld Cast Community ಜನರಿಗೆ Land Development ಜಮೀನುಗಳ ಅಭಿವೃದ್ಧಿ ಮಾಡಿಕೊಳ್ಳಲು ವೈಯಕ್ತಿಕ ಕಾಮಗಾರಿಗಳನ್ನು ಜಾರಿಗೆ ತಂದು ೧೦,೦೦೦ ದಿಂದ ೫೦,೦೦೦ ದ ವರೆಗೆ ಖಾತ್ರಿ ಕೆಲಸ ಮಾಡಿಕೊಳ್ಳಬಹುದು ಮತ್ತು ಕೃಷಿ ಇಲಾಖೆಯಿಂದ ಸಣ್ಣ ಜಮೀನುಗಳಿರುವ ರೈತರಿಗೆ ಕೃಷಿ ಹೊಂಡ ವ್ಯವಸ್ಥೆಯನ್ನು ಕಲ್ಪಿಸಿದೆ. ಇದು ೧,೨೦,೦೦೦ ರೂ. ಗಳನ್ನು ವೆಚ್ಚ ಮಾಡಿ ಸರ್ಕಾರವೇ ಇದರ ವೆಚ್ಚವನ್ನು ಮಾಡಿಕೊಡುತ್ತದೆ.

ಕೈಕೆಲಸ ಮಾಡುವ ಕುಶಲ ಕರ್ಮಿಗಳಿಗೆ ಸಾಮಾಗ್ರಿಗಳನ್ನು ಕೊಂಡುಕೊಳ್ಳಲು ೫,೦೦೦ ದಿಂದ ೧೦,೦೦೦/- ದವರೆಗೆ ಸಹಾಯಧನವನ್ನು ಕೊಡುತ್ತದೆ.

ನಿರುದ್ಯೋಗಿ ವಿದ್ಯಾವಂತರಿಗೆ ಅಂಗಡಿ ವ್ಯಾಪಾರ ಮಾಡಲು ಅಂಬೇಡ್ಕರ್ ನಿಗಮದ ವತಿಯಿಂದ ೫೦,೦೦೦/- ದಿಂದ ೨,೦೦,೦೦೦ ದವರೆಗೆ ಶೇ. ೩೫ ರಿಯಾಯ್ತಿಯಲ್ಲಿ ಕಿರು ಸಾಲವನ್ನು ಕೊಡುತ್ತದೆ.

ಸಮಾಜ ಕಲ್ಯಾಣ ಇಲಾಖೆಯಿಂದ ನಿರುದ್ಯೋಗಿ ಬಡ ಕುಟುಂಬದ ಮೆಟ್ರಿಕ್ಯೂಲೇಷನ್ ಮುಗಿಸಿದ ವಿದ್ಯಾವಂತರಿಗೆ ಟಿಂಪೊ, ಟ್ಯಾಕ್ಸಿ, ಜೀಪುಗಳನ್ನು ಖರೀದಿಸಲು ಸಾಲನೀಡಿ ಶೇ. ೫೦ ರಷ್ಟು ರಿಯಾಯ್ತಿ ಕೊಡುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ೨ ರಿಂದ ೪ ಲಕ್ಷದವರೆಗೆ ಬ್ಯಾಂಕ್‌ಗಳಲ್ಲಿ ಸಾಲಸೌಲಭ್ಯದ ವ್ಯವಸ್ಥೆಗಳನ್ನು ಮಾಡಿದೆ. ಸಹಕಾರಿ ಬ್ಯಾಂಕ್‌ಗಳಿಂದ ಕೃಷಿಗಳಲ್ಲಿ ತೊಡಗಿಕೊಂಡ ರೈತರಿಗೆ ೨ ಲಕ್ಷದವರೆಗೆ ೧ ವರ್ಷದವರೆಗೆ ಬಡ್ಡಿ ರಹಿತ ಸಾಲವನ್ನು ಕೊಡುತ್ತದೆ.

ಪರಿಶಿಷ್ಟ ಜಾತಿ ಸಮುದಾಯಗಳು ತಮ್ಮ ಮನೆಗಳನ್ನು ನಿರ್ಮಿಸಿಕೊಳ್ಳಲು MGNREGA : Mahatma Gandhi National Rural Employment Garanty act ೨೦೦೫ ರ ಯೋಜನೆಯಡಿಯಿಂದ ದಿನದ ಕೂಲಿಯಾಗಿ ೧೦೦ ದಿನಗಳವರೆಗೆ ವೆಚ್ಚವನ್ನು ಕೊಡುತ್ತದೆ.

ದುರ್ಬಲ ವರ್ಗದವರು, ವಿಶೇಷವಾಗಿ ವಯಸ್ಸಾದವರು ಮತ್ತು ವಿಕಲಚೇತನರಿಗೆ ಸರಿಹೊಂದುವಂತಹ ಕನಿಷ್ಠ ಒಂದು ಕಾಮಗಾರಿಯಿಂದ ಕೂಲಿ ಕಾಯದ ಕೆಲಸವನ್ನು ಕೊಡುವುದು".[೧೮]

ಸ್ವಯಂ ಉದ್ಯೋಗ ಯೋಜನೆ :

"ಸ್ವಯಂ ಉದ್ಯೋಗ ಯೋಜನೆ (ರೂ. ೧ ಲಕ್ಷ ದೊಳಗಿನ ಘಟಕಗಳು) ನಿರುದ್ಯೋಗಿ ಪರಿಶಿಷ್ಟ ಜಾತಿಯವರು ಸ್ವಯಂ ಉದ್ಯೋಗ, ಹೈನುಗಾರಿಕೆ, ಸಣ್ಣ ವ್ಯಾಪಾರ, ದಿನಸಿ ಅಂಗಡಿ, ಸೈಕಲ್ ಶಾಪ್, ಸಣ್ಣ ಕೈಗಾರಿಕೆ ಸೇವೆ ಮತ್ತು ವ್ಯಾಪಾರ ಇತ್ಯಾದಿಗಳನ್ನು ಕೈಗೊಳ್ಳಲು ಬ್ಯಾಂಕ್‌ಗಳ ಸಹಯೋಗದೊಂದಿಗೆ ರೂ. ೧ ಲಕ್ಷದವರೆಗಿನ ಘಟಕಗಳಿಗೆ ಸೌಲಭ್ಯ ಒದಗಿಸಲಾಗುವುದು. ಇದರಲ್ಲಿ ಘಟಕ ವೆಚ್ಚದ ೫೦ ರಷ್ಟು ಅಥವಾ ಗರಿಷ್ಠ ರೂ. ೩೫,೦೦೦/- ಸಹಾಯಧನವಿದ್ದು ಉಳಿದ ಮೊತ್ತ ಬ್ಯಾಂಕುಗಳ ಸಾಲವಾಗಿರುತ್ತದೆ.

ಘಟಕ ವೆಚ್ಚ	ಸಹಾಯಧನ	ಷರಾ
ರೂ. ೧.೦೦ ಲಕ್ಷದಿಂದ ರೂ.೫.೦೦ ಲಕ್ಷಗಳ ವರೆಗೆ	ಘಟಕ ವೆಚ್ಚದ ೭೦% ಭಾಗ ಗರಿಷ್ಠ ರೂ. ೩.೫೦ ಲಕ್ಷ	ಉಳಿದ ಮೊತ್ತ ಬ್ಯಾಂಕ್ ಸಾಲ
ರೂ. ೫.೦೦ ಲಕ್ಷಗಳಿಂದ ರೂ ೧೦.೦೦ ಲಕ್ಷಗಳ ವರೆಗೆ	ಘಟಕ ವೆಚ್ಚದ ೬೦% ಭಾಗ ಗರಿಷ್ಠ ರೂ. ೫.೦೦ ಲಕ್ಷ	-
ರೂ. ೧೦.೦೦ ಲಕ್ಷಗಳಿಂದ ರೂ. ೨೦.೦೦ ಲಕ್ಷಗಳ ವರೆಗೆ	ಅಧಿಕ ವೆಚ್ಚದ ೫೦% ಭಾಗ ಗರಿಷ್ಠ ರೂ. ೫.೦೦ ಲಕ್ಷ.	-

ಈ ಯೋಜನೆಯಡಿ ಸೌಲಭ್ಯ ಪಡೆಯಲು ಗ್ರಾಮಾಂತರ ಪ್ರದೇಶದ ವಾರ್ಷಿಕ ಆದಾಯ ೧,೫೦,೦೦೦/- ಮತ್ತು ನಗರ ಪ್ರದೇಶದಲ್ಲಿ ರೂ. ೨,೦೦,೦೦೦/- ಮೀರಬಾರದು ಈ ಯೋಜನೆಯಿಂದ ಸೌಲಭ್ಯ ಪಡೆದ ಕುಟುಂಬಗಳು ಪಂಚಾಯತಿ ವ್ಯಾಪ್ತಿಯಲ್ಲಿ ಮೂರು ಕುಟುಂಬ ಮಾತ್ರ ಒಂದು ಲಕ್ಷ ಆದಾಯವಿರುವ ಹೈನುಗಾರಿಕೆಯಿಂದ ಸೌಲಭ್ಯ ಪಡೆದಿವೆ".[೧೯]

ಭೂ ಒಡೆತನ ಯೋಜನೆ :

"ರಾಜ್ಯದಲ್ಲಿನ ಪರಿಶಿಷ್ಟ ಜಾತಿಯ ಭೂ ರಹಿತ ಕೃಷಿ ಕಾರ್ಮಿಕರ ಕುಟುಂಬದವರ ಮಹಿಳೆಯರಿಗೆ ಮಾತ್ರ ಈ ಯೋಜನೆಯಡಿ ಸೌಲಭ್ಯ ನೀಡಲಾಗುತ್ತದೆ. ಯೋಜನೆಯಡಿ ಘಟಕ ವೆಚ್ಚ ರೂ. ೧೦.೦೦ ಲಕ್ಷವಿದ್ದು, ಪ್ರತಿ ಘಟಕದಲ್ಲಿ ೨.೦೦ ಎಕರೆ ಖುಷ್ಕಿ ಜಮೀನು ಅಥವಾ ೧ ಎಕರೆ ತರಿ ಜಮೀನು ಅಥವಾ ೧/೨ ಎಕರೆ (೨೦ ಗಂಟೆ) ಭಾಗಾಯ್ತು ಜಮೀನನ್ನು ಖರೀದಿಸಿ ನೋಂದಣಿ ಮಾಡಿಸಿ ಕೊಡಲಾಗುವುದು. ಘಟಕ ವೆಚ್ಚದಲ್ಲಿ ಶೇ. ೫೦ ಭಾಗ ಸಹಾಯಧನ ಹಾಗೂ ಶೇ. ೫೦ ಭಾಗ ಅವಧಿಸಾಲದ ರೂಪದಲ್ಲಿ ಇರುತ್ತದೆ. ಅವಧಿ ಸಾಲವನ್ನು .ಶೇ. ೬ ರ ಬಡ್ಡಿದರದಲ್ಲಿ ನಿಗಮದಿಂದಲೇ ನೀಡಲಾಗುವುದು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯು ಜಮೀನಿನ ಖರೀದಿ ದರವನ್ನು ನಿಗದಿಪಡಿಸುತ್ತದೆ. ಫಲಾನುಭವಿಗಳು ಸಾಲದ ಹಣವನ್ನು ಬಡ್ಡಿ ಸಮೇತವಾಗಿ ೧೦ ವರ್ಷಗಳಲ್ಲಿ ಪ್ರತಿ ೬ ತಿಂಗಳಿಗೊಮ್ಮೆ ೨೦ ಸಮಕಂತುಗಳಲ್ಲಿ ನಿಗಮಕ್ಕೆ ಮರು ಪಾವತಿ ಮಾಡಬೇಕು. ಭೂ ಒಡೆತನ ಯೋಜನೆಯಿಂದ ಭೋವಿ ಸಮುದಾಯದ ಯಾವ ಕುಟುಂಬಗಳು ಸೌಲಭ್ಯ ಪಡೆದಿಲ್ಲದಿರುವುದು ಕಂಡುಬಂದಿದೆ.

ಮೈಕ್ರೋಕ್ರೆಡಿಟ್ (ಕಿರುಸಾಲ) ಯೋಜನೆ :

ಈ ಯೋಜನೆಯಡಿ ಅರೆ ನಗರ ಮತ್ತು ನಗರ ಪ್ರದೇಶಗಳಲ್ಲಿನ ಸ್ವಸಹಾಯ ಗುಂಪುಗಳಲ್ಲಿ ಸದಸ್ಯರಾಗಿರುವ ಪರಿಶಿಷ್ಟ ಜಾತಿಯ ಫಲಾಪೇಕ್ಷಿಗಳಿಗೆ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರತಿಯೊಬ್ಬ ಫಲಾಪೇಕ್ಷಿಗೆ ಗರಿಷ್ಠ ಮೊತ್ತ ರೂ. ೧೫,೦೦೦/- ಗಳನ್ನು ಮಂಜೂರು ಮಾಡಲಾಗುವುದು ಇದರಲ್ಲಿ ಸಹಾಯಧನ ರೂ.

೧೦,೦೦೦/-ಗಳಾಗಿದ್ದು, ಉಳಿದ ರೂ. ೫,೦೦೦/- ಗಳ ಸಾಲವಾಗಿರುತ್ತದೆ. ಸಹಾಯಧನ ಮತ್ತು ಸಾಲವನ್ನು ನಿಗಮದಿಂದ ನೇರವಾಗಿ ನೀಡಲಾಗುವುದು, ಸಾಲದ ಹಣಕ್ಕೆ ವಾರ್ಷಿಕ ಶೇ. ೪ ರಂತೆ ಬಡ್ಡಿ ವಿಧಿಸಲಾಗುವುದು ಫಲಾನುಭವಿಗಳು ಸಾಲದ ಹಣವನ್ನು ಬಡ್ಡಿ ಸಮೇತವಾಗಿ ಮೂರು ವರ್ಷಗಳಲ್ಲಿ ೩೬ ಮಾಸಿಕ ಸಮಕಂತುಗಳಲ್ಲಿ ನಿಗಮಕ್ಕೆ ಮರು ಪಾವತಿ ಮಾಡಬೇಕು (ಸಂಘದಲ್ಲಿ ಭಾಗಹಿಸಿದ ಕೃತಿ ಸದಸ್ಯರು ಬ್ಯಾಂಕ್ ಖಾತೆ ಹೊಂದಿರುವುದು ಕಡ್ಡಾಯವಾಗಿರುತ್ತದೆ)"[೨೦] ಕಿರುಸಾಲ ಯೋಜನೆಯ ಬಗ್ಗೆ ಮಾಹಿತಿ ಇಲ್ಲದಿರುವುದರಿಂದ ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ.

ಗಂಗಾ ಕಲ್ಯಾಣ ಯೋಜನೆ :

"ಪರಿಶಿಷ್ಟ ಜಾತಿಯ ಸಣ್ಣ ಮತ್ತು ಅತಿ ಸಣ್ಣ ರೈತರ ಖುಷ್ಕಿ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲು ನಿಗಮದಿಂದ ವೈಯಕ್ತಿಕ ನೀರಾವರಿ ಕೊಳವೆ ಬಾವಿ, ತೆರೆದ ಬಾವಿ, ಮತ್ತು ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ವೈಯಕ್ತಿಕ ನೀರಾವರಿ ಕೊಳವೆಬಾವಿ/ತೆರೆದ ಬಾವಿ ಯೋಜನೆ :

ಪರಿಶಿಷ್ಟ ಜಾತಿಯ ಸಣ್ಣ ಮತ್ತು ಅತಿ ಸಣ್ಣ ರೈತರುಗಳು ಹೊಂದಿರುವ ಕನಿಷ್ಟ ೧ ೧/೨ ಎಕರೆಯಿಂದ ಗರಿಷ್ಠ ೫ ಎಕರೆಯವರೆಗಿನ ಖುಷ್ಕಿ ಜಮೀನಿನಲ್ಲಿ ಕೊಳವೆಬಾವಿ ಕೊರೆದು/ ತೆರೆದ ಬಾವಿ ನಿರ್ಮಿಸಿ, ಪಂಪು ಮೋಟರ್ ಅಳವಡಿಸಿ, ವಿದ್ಯುದ್ದೀಕರಣಗೊಳಿಸಿ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು ಈ ಯೋಜನೆ ಅನುಷ್ಟಾನದ ಉದ್ದೇಶವಾಗಿರುತ್ತದೆ. ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಾದ ಉಡುಪಿ, ದಕ್ಷಿಣಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಉತ್ತರಕನ್ನಡ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಮಾತ್ರ ಕನಿಷ್ಟ ಮಿತಿ ೧.೦೦ ಎಕರೆ ಇರುತ್ತದೆ. ಗಂಗಾಕಲ್ಯಾಣ ಯೋಜನೆಯಡಿಯಲ್ಲಿನ ಘಟಕ ವೆಚ್ಚವನ್ನು ರೂ. ೨.೦೦ ಲಕ್ಷವಿದ್ದು, ಇದರಲ್ಲಿ ೧.೫೦ ಲಕ್ಷ ಸಹಾಯಧನವಾಗಿರುತ್ತದೆ. ಮತ್ತು ಉಳಿದ ರೂ ೫೦,೦೦೦/- ದವರೆಗಿನ ಹಣವು ಅವಧಿ ಸಾಲವಾಗಿರುತ್ತದೆ. ಹಾಗೂ ಅವಧಿ ಸಾಲಕ್ಕೆ ವಾರ್ಷಿಕ ಶೇ. ೬ ರ ದರದಲ್ಲಿ ಬಡ್ಡಿ ವಿಧಿಸಲಾಗುತ್ತದೆ. ಫಲಾನುಭವಿಗಳು ಸಾಲದ ಹಣವನ್ನು ಬಡ್ಡಿ ಸಮೇತವಾಗಿ ೬

ವರ್ಷಗಳಲ್ಲಿ ಪ್ರತಿ ೬ ತಿಂಗಳಿಗೊಮ್ಮೆ ೧೨ ಸಮಕಂತುಗಳಲ್ಲಿ ನಿಗಮಕ್ಕೆ ಮರು ಪಾವತಿ ಮಾಡಬೇಕು".[೨೧]

ಏತ ನೀರಾವರಿ ಯೋಜನೆ :

ಏತ ನೀರಾವರಿ ಯೋಜನೆಯಡಿ ನೈಸರ್ಗಿಕವಾದ ನದಿ, ತೊರೆ, ಹಳ್ಳ, ನಾಲೆಗಳ ಅಕ್ಕ ಪಕ್ಕದಲ್ಲಿರುವ ಪರಿಶಿಷ್ಟ ಜಾತಿಯ ಸಣ್ಣ ಮತ್ತು ಅತಿಸಣ್ಣ ರೈತರ ಜಮೀನುಗಳಿಗೆ ಪಂಪ್ ಸೆಟ್ ಮತ್ತು ಪಂಪ್ ಲೈನ್ ಅಳವಡಿಸಿ ನೀರಾವರಿ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಈ ಯೋಜನೆಯಡಿ ಘಟಕ ವೆಚ್ಚವು ಕನಿಷ್ಟ ೮.೦೦ ಎಕರೆ ಖುಷ್ಕಿ ಜಮೀನಿನ ಘಟಕಕ್ಕೆ ರೂ. ೪.೦೦ ಲಕ್ಷ ಮತ್ತು ೧೫.೦೦ ಎಕರೆ ಜಮೀನಿನ ಘಟಕಕ್ಕೆ ರೂ. ೬.೦೦ ಲಕ್ಷ ಇರುತ್ತದೆ.

ಮೇಲ್ಕಂಡ ಸೌಲಭ್ಯಗಳನ್ನು ಪಡೆಯಲು ಇಚ್ಚಿಸುವ ಪರಿಶಿಷ್ಟ ಜಾತಿಯ ಜನರು ಆಯಾ ಜಿಲ್ಲೆಯ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ನಿಗದಿಪಡಿಸಿದ ಉಚಿತ ಅರ್ಜಿಗಳನ್ನು ಪಡೆಯಬಹುದು ಹಾಗೂ ನಿಗಮದ ವೆಬ್‌ಸೈಟ್ www.adcl.Karnataka.gov.in ನಲ್ಲಿ ಮಾಹಿತಿ ಪಡೆಯಬಹುದು.

ಗಂಗಾ ಕಲ್ಯಾಣ ಯೋಜನೆ, ಏತ ನೀರಾವರಿ ಯೋಜನೆ ವತಿಯಿಂದ ಖುಷ್ಕಿ ಮತ್ತು ಒಣ ಭೂಮಿಗಳಿಗೆ ನೀರಿನ ಸೌಲಭ್ಯ ಪಡೆದ ಕುಟುಂಬಗಳು ಮತ್ತು ಗ್ರಾಮಾವಾರು ಅಂಕಿಸಂಖ್ಯೆಗಳ ಪ್ರಮಾಣವನ್ನು ಈ ಕೆಳಗಿನ ಕೋಷ್ಟಕದಿಂದ ಪಡೆಯಲಾಗಿದೆ.

ಕ್ರ ಸಂ.	ಗ್ರಾಮದ ಹೆಸರು	ವೈಯಕ್ತಿಕ	ನೀರಾವರಿ		ಗಂಗಾ ಕಲ್ಯಾಣ ಯೋಜನೆ (ಕೊಳವೆಬಾವಿ)	ಏತ ನೀರಾವರಿ ಯೋಜನೆ (ಪಂಪ್‌ಸೆಟ್)	ಕಾಲುವೆ ನೀರಾವರಿ	ಶೇ.
		ಕೊ	ಕೆರೆ	ನದಿ				
೧.	ಕೆ.ಸೂಗೂರು	–	–	–	೧ ೦.೧೧%	೧ ೦೧೧%	೧ ೦೧೧%	೦.೩೩%
೨.	ಬೆಂಚಿಕ್ಯಾಂಪ್	–	–	–	೧ ೦.೧೬%	–	–	೦.೧೬%
೩.	ಮುದೆನೂರು	–	–	–	–	೧ ೦.೧೧	೨ ೦.೨೨	೦.೩೩%

ಈ ಮೇಲಿನ ಅಂಶಗಳನ್ನು ನೋಡಿದರೆ ಸರ್ಕಾರಿ ಸೌಲಭ್ಯಗಳನ್ನು ಬಳಸಿಕೊಂಡು ಅಭಿವೃದ್ಧಿ ಹೊಂದಿದವರು ಕೆ. ಸೂಗೂರು ಗ್ರಾಮದಲ್ಲಿ ವೈಯಕ್ತಿಕವಾಗಿ ನೀರಾವರಿ ಮಾಡಿಕೊಂಡವರು ಯಾರು ಇಲ್ಲ, ಗಂಗಾ ಕಲ್ಯಾಣ ಯೋಜನೆಯಿಂದ ಕೊಳವೆಬಾವಿ ನೀರಾವರಿ ಶೇ. ೦.೧೧%. ಏತ ನೀರಾವರಿ ಯೋಜನೆಯಿಂದ ಶೇ. ೦.೧೧%. ಕಾಲುವೆ ನೀರಾವರಿ ಶೇ.೦.೧೧%. ತುಂಗಾಭದ್ರ ಕಾಲುವೆ ನೀರಾವರಿ ಶೇ.೦.೧೧% ಒಟ್ಟು ೦.೩೩%. ಸರ್ಕಾರದಿಂದ ದೊರೆತ ನೀರಾವರಿಯ ಸೌಲಭ್ಯವಾಗಿದ್ದು ಉಳಿದ ೮೦% ರಷ್ಟು ಬಯಲು ಜಮೀನನ್ನು ಹೊಂದಿದವರೆಂದು ಕಂಡು ಬರುತ್ತದೆ.

ಬೆಂಚೆಕ್ಯಾಂಪ್‌ನಲ್ಲಿ ಒಂದು ಕುಟುಂಬ ಶೇ. ೦.೧೬% ರಷ್ಟು ಗಂಗಾ ಕಲ್ಯಾಣ ಯೋಜನೆಯಿಂದ ಕೊಳವೆ ಬಾವಿಯ ಸೌಲಭ್ಯವನ್ನು ಹೊಂದಿರುವುದು ಕಂಡು ಬರುತ್ತದೆ. ಇಲ್ಲಿಯೂ ಸಹ ನೀರಾವರಿ ಸೌಲಭ್ಯ ಹೊಂದಿದವರು ಕಡಿಮೆಯಾಗಿದ್ದಾರೆ.

ಮುದೆನೂರು ಗ್ರಾಮದಲ್ಲಿ ಭೂಮಿ ಹೊಂದಿದ ಒಟ್ಟು ೯ ಕುಟುಂಬಗಳಲ್ಲಿ ಒಂದು ಕುಟುಂಬ ಶೇ. ೦.೧೧ ರಷ್ಟು ಏತ ನೀರಾವರಿಯಿಂದ ಪಂಪ್‌ಸೆಟ್, ೨ ಕುಟುಂಬ ಶೇ. ೦.೨೨ ರಷ್ಟು ಕಾಲುವೆ ನೀರಾವರಿ ಉಳಿದ ೫ ಕುಟುಂಬ ನೀರಾವರಿಯ ಸೌಲಭ್ಯ ಇಲ್ಲದ ಭೂಮಿಯನ್ನು ಹೊಂದಿದ್ದಾರೆ.

ಈ ಅಂಶಗಳನ್ನು ನೋಡಿದರೆ ಕೆ.ಸೂಗೂರು ಗ್ರಾಮಪಂಚಾಯ್ತಿಯ ವ್ಯಾಪ್ತಿಯಲ್ಲಿ ವಾಸಿಸುವ ಭೋವಿ ಸಮುದಾಯದ ಕುಟುಂಬಗಳು ಗಂಗಾ ಕಲ್ಯಾಣ ಯೋಜನೆಯಿಂದ ದೂರ ಉಳಿದಿರುವುದು ಕಂಡು ಬರುತ್ತದೆ ಇದಕ್ಕೆ ಮೂಲ ಕಾರಣ ಅನಕ್ಷರತೆ ಮತ್ತು ಪಾರಂಪರೀಕ ಕಸುಬುಗಳಿಗೆ ಒಲವು ತೋರಿಸಿರುವುದು ಕಂಡು ಬರುತ್ತದೆ.

ಅಡಿಟಿಪ್ಪಣೆ

೧. ಗಂಗಾಧರ .ಪಿ.ಎಸ್. ಭಾರತ ಸಂವಿಧಾನ ಮತ್ತು ರಾಜಕೀಯ ಪು.–೪
೨. ಅದೇ ಪು.–೫
೩. ಪಂಚಾಯತ್ ರಾಜ್ ಇಲಾಖೆ, ಲೇಖನ ಕರ್ನಾಟಕ ವಿಕಾಸ ಪು.–೬
೪. ಪ್ರಜಾವಾಣಿ ದಿನ ಪತ್ರಿಕೆ ದಿನಾಂಕ ಮಾರ್ಚ್.೪.೨೦೧೬ ಪು.–೫
೫. ಮಾಹಿತಿದಾರರು : ವಡ್ರು ಯಂಕೋಬಣ್ಣ ಕೆ. ಸೂಗೂರು ವಯಸ್ಸು .೪೮
೬. ಮಾಹಿತಿದಾರರು : ಬಾವಿಕಟ್ಟಿ ಈರಣ್ಣ ಪಶು ಸಂಗೋಪನೆ ಸಂಘದ ಕಾರ್ಯದರ್ಶಿ. ಕೆ.ಸೂಗೂರು
೭. ಮಾಹಿತಿದಾರರು : ತೋಟಗಾರಿಕಾ ಇಲಾಖೆಯ ಅಧಿಕಾರಿಗಳು. ಸಿರುಗುಪ್ಪ.
೮. ಮಾಹಿತಿದಾರರು : ಕಟ್ಟಡ ಕಾರ್ಮಿಕ ಇಲಾಖೆಯ ಅಧಿಕಾರಿಗಳು. ಸಿರುಗುಪ್ಪ.
೯. ಪಂಚಾಯತ್ ರಾಜ್ ಇಲಾಖೆ ಲೇಖನ ಕರ್ನಾಟಕ ವಿಕಾಸ, ಪು.–೮
೧೦. ಪಂಚಾಯತ್ ರಾಜ್ ಇಲಾಖೆ ಲೇಖನ ಕರ್ನಾಟಕ ವಿಕಾಸ, ಪು.–೧೫
೧೧. ಪ್ರಜಾವಾಣಿ ದಿನಪತ್ರಿಕೆ ದಿನಾಂಕ ಏಪ್ರಿಲ್. ೧೪.೨೦೧೬. ಪು.–೧೫
೧೨. ಮಾಹಿತಿದಾರರು : ಅಂಗನವಾಡಿ ಕಾರ್ಯಕರ್ತೆ ಮಂಜಮ್ಮ ಕೆ. ಸೂಗೂರು
೧೩. ಅಂತರಜಾಲ
೧೪. ಮಾಹಿತಿದಾರರು ಗ್ರಾಮ ಪಂಚಾಯ್ತಿ ಪಿಡಿಓ ಬಸವರಾಜ ಕೆ. ಸೂಗೂರು
೧೫. ಪ್ರಜಾವಾಣಿ ದಿನ ಪತ್ರಿಕೆ ದಿನಾಂಕ ಏಪ್ರಿಲ್.೧೪.೨೦೧೬. ಪು.–೧೫
೧೬. ಅಂತರಜಾಲ
೧೭. ಮಾಹಿತಿದಾರರು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಪಿ.ಕೆ.ಜಿ.ಪಿ. ರಾರಾವಿ.
೧೮. MGNREGA ಕೈಪಿಡಿ ಪು.೧೧೮
೧೯. ಪ್ರಜಾವಾಣಿ ದಿನಪತ್ರಿಕೆ ೧/೪/೨೦೧೬ ಪು.೧೮
೨೦. ಅದೇ ಪು. ೧/೪/೨೦೧೬
೨೧. ಅದೇ ಪು.೨೦

ಅಧ್ಯಾಯ ಐದು

ಸಮಾರೋಪ

ಅಧ್ಯಯನದ ಫಲಿತಗಳು

ಸಲಹೆಗಳು

ಸಮಾರೋಪ

ಭೋವಿ ಸಮುದಾಯದ ಆರ್ಥಿಕ ಅಧ್ಯಯನ ಎಂಬ ಪ್ರಬಂಧದಲ್ಲಿ ಭೋವಿ ಸಮಾಜವನ್ನು ಪರಿಶೀಲಿಸಿ ಸಂಶೋಧನೆ ನಡೆಸಿದಾಗ ಅದರ ಹುಟ್ಟು ಮತ್ತು ಬೆಳವಣಿಗೆಯಲ್ಲಿ ಅನೇಕ ವಿಚಾರಗಳು ಕಂಡು ಬಂದಿವೆ. ಪ್ರೌಢ ಪ್ರಬಂಧವನ್ನು ೫ ಅಧ್ಯಾಯಗಳಲ್ಲಿ ವಿಂಗಡಿಸಿ ಧಾರ್ಮಿಕ ವಿಚಾರ ಧಾರೆಗಳು, ಕಥೆಗಳು ಮೇಲೆ ಚರ್ಚಿಸಿ ಅಧ್ಯಯನ ಪ್ರಬಂಧಕ್ಕೆ ಸಂಬಂಧಪಟ್ಟ ಗ್ರಂಥಗಳು, ಅಧ್ಯಯನಗಳು ಸಂಘಸಂಸ್ಥೆಗಳನ್ನು ಅವಲೋಕಿಸಿ ಹೊಸ ವಿಚಾರಗಳನ್ನು ಕ್ರೂಢೀಕರಿಸಿ ಸಂಶೋಧನೆ ಮಾಡಲಾಗಿದೆ.

ಭೋವಿ ಸಮುದಾಯವನ್ನು ಕುರಿತು ಅಧ್ಯಯನ ಮಾಡಿದಾಗ ಭೋವಿ ಜನಾಂಗದ ಮೂಲ, ಹುಟ್ಟು, ಭಾಷೆ, ಅರ್ಥವಿವರಣೆ ಹಾಗೂ ರೂಢಿ ಸಂಪ್ರದಾಯಗಳು ಕಲೆವಾಸ್ತು ಶಿಲ್ಪಕ್ಕೆ ನೀಡಿರುವ ಕುಲಕಸುಬುಗಳು ಮತ್ತು ಮಹತ್ವವಾದ ಭಾರತೀಯ ಇತಿಹಾಸ ಪರಂಪರೆಯ ಸಂಸ್ಕೃತಿ ನಿರ್ಮಾಣಕ್ಕೆ ನೀಡಿರುವ ಕೊಡುಗೆಗಳು ಹಾಗೂ ಅವರ ಕಠಿಣವಾದ ಜೀವನ ಪರಿಸ್ಥಿತಿಯ ಬಗ್ಗೆ ತಿಳಿದುಕೊಳ್ಳಲಾಗಿದೆ.

ಈ ಸಮುದಾಯದ ಜನರು ಕಠಿಣವಾದ ಕೆಲಸಗಳಲ್ಲಿ ನಿರಂತರವಾಗಿ ಅದ್ಭುತ ಶಕ್ತಿಯನ್ನು ವೃತ್ತಿಗಳಲ್ಲಿ ಪ್ರದರ್ಶಿಸಿ ಭಾರತದ ಇತಿಹಾಸವನ್ನು ನಿರ್ಮಿಸಿದ ಸಮುದಾಯ ಎನಿಸಿದೆ. ಅವರ ವೃತ್ತಿಯಿಂದ ನಿರ್ಮಿತವಾದ ಕಟ್ಟಡಗಳಲ್ಲಿ ಕೋಟೆಗಳು,ಅರಮನೆಗಳು, ದೇವಾಲಯಗಳು, ಆಣೆಕಟ್ಟುಗಳು ದೊಡ್ಡ ದೊಡ್ಡ ಸ್ಮಾರಕಗಳು, ಕೆರೆ ಬಾವಿಗಳು, ಮಸೀದಿಗಳು, ಚರ್ಚ್‌ಗಳು, ಸಾರ್ವಜನಿಕ ಆಸ್ಪತ್ರೆಗಳು, ವಿಶ್ವವಿದ್ಯಾಲಯದ ಕಟ್ಟಡಗಳು, ದೇವಾಲಯಗಳ ಗೋಪುರಗಳು ಕೆಲವಾರು ಐತಿಹಾಸಿಕ ವಿಶ್ವವಿಖ್ಯಾತಿಯನ್ನು ಪಡೆದಿವೆ.

ಪ್ರಕೃತಿಯಲ್ಲಿರುವ ಕಾಡುಕಲ್ಲುಗಳನ್ನು ಕಡಿದು ಮೂರ್ತಿಗಳಾಗಿ, ವಾಸ್ತು ಶಿಲ್ಪವನ್ನಾಗಿ ರೂಪಕೊಟ್ಟಿರುವ ಭೋವಿ ಸಮುದಾಯದ ಕೊಡುಗೆ ಇತಿಹಾಸದ ಉಳಿವಿಗೆ ಕೊಡುಗೆಯಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಹಲವಾರು ಸಮುದಾಯಗಳು

ಗೃಹೋಪಯೋಗಿ ಸಲಕರಣೆಗಳಾದ ಒರಳುಕಲ್ಲು, ಬೀಸುವ ಕಲ್ಲು, ರುಬ್ಬುವ ಗುಂಡುಗಳಂತಹ ವಿದ್ಯುತ್ ಇಲ್ಲದ ಸೌಲಭ್ಯಗಳನ್ನೊದಗಿಸಿ ಹಲವಾರು ಸಮುದಾಯಗಳು ನವಣೆ, ಜೋಳ, ರಾಗಿಯನ್ನು ಕುಟ್ಟಿ ಇಟ್ಟು ಮಾಡಿ ಆಹಾರ ಮಾಡಲು ಅತ್ಯಂತ ಮುಖ್ಯ ಪರಿಕರಗಳನ್ನೊದಗಿಸಿದ ಸಮುದಾಯವಾಗಿದೆ. ನಗರಗಳ ಬೆಳವಣಿಗೆಗೆ ವ್ಯಾಪಾರ ವಹಿವಾಟುಗಳು ಸುಗಮವಾಗಿ ನಡೆಯಲು ರಸ್ತೆಯು ಅತ್ಯಂತ ಅವಶ್ಯಕ, ಭೋವಿ ಸಮುದಾಯವು ರಸ್ತೆಗೆ ಬಿಂಚೆಕಲ್ಲು, ನದಿಗಳಿಗೆ ಸೇತುವೆಗಳು ಅಡ್ಡವಾಗಿರುವ ಬೃಹತ್ ಬೆಟ್ಟಗಳನ್ನು ಕಡಿದು ಸಮಾಜ ಸೇವೆಗೆ ಶ್ರಮಿಸಿದ ಸಮುದಾಯವಾಗಿದೆ.

ಮಾನವನಿಗೆ ಅತ್ಯಂತ ಅವಶ್ಯಕವಾಗಿರುವುದು ಜಲ, ಈ ಜಲ ಸಂರಕ್ಷಣೆ ಕೆರೆ, ಕಾಲುವೆ, ಬಾವಿಗಳನ್ನು ತೆಗೆದರು. ಕೃಷಿಗೆ ಸಹಕಾರಿಯಾಗಿ ದೊಡ್ಡ ದೊಡ್ಡ ಆಣೆಕಟ್ಟುಗಳನ್ನು ನಿರ್ಮಿಸಿ ನೀರಿನ ಸಂಗ್ರಹಣೆಯಿಂದ ಅಭಿವೃದ್ಧಿಗೆ ಶ್ರಮವಹಿಸಿದ ಸಮುದಾಯ ಭೋವಿ(ವಡ್ಡರು) ಸಮುದಾಯವಾಗಿದ್ದು ಯಾವ ತಾಂತ್ರಿಕತೆಗೆ ಕಡಿಮೆ ಇಲ್ಲ ಎನ್ನುವಂತೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ.

ಭೋವಿ ಸಮುದಾಯದ ಜನರು ಸ್ವಾಭಿಮಾನಿಗಳು, ಶೌರ್ಯವಂತರು ಮತ್ತು ನಿಷ್ಠಾವಂತರು 'ಕಾಯಕವೇ ಕೈಲಾಸ' ಎನ್ನುವ ಗಾದೆಯಂತೆ ಸ್ವವೃತ್ತಿಯನ್ನು ನಂಬಿ ದುಡಿಮೆಗೆ ಒತ್ತುಕೊಟ್ಟವರು, ಹಲವು ಸಂದರ್ಭಗಳಲ್ಲಿ ಅವರ ವೃತ್ತಿಯಲ್ಲಿ ನಷ್ಟವಾಗಿ ತಮ್ಮ ಕುಟುಂಬಗಳು ಕಷ್ಟದ ಸನ್ನಿವೇಶದಲ್ಲಿದ್ದರೂ ಧೈರ್ಯದಿಂದ ಮುನ್ನಡೆದು ಕೊಟ್ಟ ಮಾತಿಗೆ ತಪ್ಪದೆ ಯಜಮಾನನ ನಂಬಿಕೆಗೆ ಮೋಸ ಮಾಡದ ಸ್ವಾಭಿಮಾನಿಗಳು. ಎಷ್ಟೇ ಕಷ್ಟಕರವಾದ ಕೆಲಸವಿರಲಿ ಬಿಸಿಲು ಮಳೆಯನ್ನು ಲೆಕ್ಕಿಸದೇ ಮುನ್ನುಗ್ಗಿ ಮಾಡುವ ದೈಹಿಕ, ಮಾನಸಿಕವಾಗಿ ಗಟ್ಟಿ ಇರುವ ಸಾಹಸ ಪ್ರವೃತ್ತಿಯವರು . ಸಮಾಜದ ಸಮುದಾಯಗಳಿಗೆ ಇಷ್ಟೆಲ್ಲ ಕೊಡುಗೆಗಳನ್ನು ನೀಡಿ ಸೇವೆಯನ್ನು ಮಾಡಿದ ಈ ಭೋವಿ (ವಡ್ಡರು) ಸಮುದಾಯದ ಕುಟುಂಬಗಳು ಹಲವಾರು ರೀತಿಯಲ್ಲಿ ಕಷ್ಟ ಅನುಭವಿಸುತ್ತಿವೆ. ತಾವು ವಾಸಿಸಲು ಮನೆಗಳಿಲ್ಲದೆ ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಕುಡಿಯಲು ಶುದ್ದ ನೀರಿಲ್ಲದೇ ಕಚ್ಚಾ ನೀರನ್ನು ಬಳಸುತ್ತಿದ್ದಾರೆ. ಸರ್ಕಾರವು ಪರಿಶಿಷ್ಟ ಜಾತಿ ಸಮುದಾಯಗಳ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದರೂ ದೊರೆಯದೆ ವಂಚನೆಗೆ ಒಳಗಾಗುತ್ತಿದ್ದಾರೆ. ಪ್ರಾಚೀನ ಕಾಲದಲ್ಲಿ ಹಲವಾರು ಸಮುದಾಯಗಳ ಅಭಿವೃದ್ದಿ ಬೆಳವಣಿಗೆಗೆ

ಕಾರಣೀಕರ್ತರಾದ ಭೋವಿ ಸಮುದಾಯವು ಆಧುನಿಕ ಕಾಲದಲ್ಲಿ ಹಲವಾರು ಸಮುದಾಯಗಳ ತುಳಿತಕ್ಕೆ ಒಳಗಾಗಿದೆ ಮತ್ತು ಬಡತನ, ಅನಕ್ಷರತೆಯನ್ನು ಅನುಭವಿಸುತ್ತಿದೆ. ಜಮೀನುಗಳಿಲ್ಲದೇ ದಿನಗೂಲಿ ಮಾಡುತ್ತಾ ಜೀವನ ಮಾಡುತ್ತಿದೆ. ಕ್ಷೇತ್ರಕಾರ್ಯದಲ್ಲಿ ಕಂಡ ದೃಶ್ಯಗಳು ಸಮಸ್ಯೆಗಳಂತೆ ಭೋವಿ ಸಮುದಾಯದ ಕೆಲವು ಕುಟುಂಬಗಳು ಮಕ್ಕಳಿಗೆ ಶಿಕ್ಷಣ ಕೊಡಿಸಲಾಗದೆ ಬಾಲಕಾರ್ಮಿಕರನ್ನಾಗಿ ಮಾಡಿದೆ.

ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ ಭೋವಿ (ವಡ್ಡರು) ಸಮುದಾಯವು ಅಲೆಮಾರಿ, ಅರೆ ಅಲೆಮಾರಿಗಳಂತೆ ವಾಸಮಾಡುತ್ತಾ ಜೀವನ ನಡೆಸುತ್ತಾ ಬಂದಿದ್ದಾರೆ. ವೈಜ್ಞಾನಿಕವಾಗಿ ಮುಂದುವರೆದ ಆಧುನಿಕ ಕಾಲದಲ್ಲಿಯೂ ಸಹ ಸ್ವಾತಂತ್ರ್ಯ ಪೂರ್ವದ ಸ್ಥಿತಿಯಲ್ಲಿ ಭೋವಿ ಸಮುದಾಯದವರು ಹಲವು ಕಠಿಣವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರೆ ಸಂವಿದಾನ ಜಾರಿಯಾದಂದಿನಿಂದ ಭೋವಿ ಸಮುದಾಯವನ್ನು ೧೯೫೦ ರಲ್ಲಿ ೩೪೧ ರ ಕಲಂ ಅನ್ವಯ ಪರಿಶಿಷ್ಟ ಜಾತಿ (SC) ಪಟ್ಟಿಗೆ ಸೇರಿಸಿದಾಗಿನಿಂದ ಸರ್ಕಾರದ ಸೌಲಭ್ಯಗಳನ್ನು ಪಡೆದು ಸಮಸ್ಯೆಯ ತೀವ್ರತೆಯು ಕಡಿಮೆಯಾಗಿದ್ದರೂ ಅಂದಿಗೂ ಇಂದಿಗೂ ಸಮುದಾಯದ ಜನಸಂಖ್ಯೆಯ ಪ್ರಮಾಣ ನೋಡಿದಾಗ ಸಮಸ್ಯೆಯ ತೀವ್ರತೆ ಕಡಿಮೆಯಾಗಿಲ್ಲವೆಂದು ಕಂಡು ಬಂದಿದೆ.

ಆದಿ ಕಾಲದಿಂದಲೂ ಭೋವಿ ಸಮುದಾಯದವರು ತಮ್ಮ ಕೆಲಸ ಕಾರ್ಯಗಳಲ್ಲಿ ನಿಷ್ಠೆ, ಭಕ್ತಿ, ಹಾಗೂ ನಂಬಿಕೆಗಳನ್ನು ಉಳಿಸಿಕೊಂಡು ಸಮಾಜದಲ್ಲಿ ತನ್ನ ಘನತೆ, ಗೌರವಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ತಮಗೆ ದೊರೆತ ಕೆಲಸಗಳನ್ನು ಮಾಡಿಕೊಂಡು ಹೋಗುವ ಸಂಪ್ರದಾಯವನ್ನು ಅಭ್ಯಾಸ ಮಾಡಿಕೊಂಡು ಬಂದಿದ್ದಾರೆ. ಭೋವಿ ಸಮುದಾಯದ ಜನರು ವರ್ತಮಾನಕ್ಕೆ ಸಂಬಂಧಿಸಿದಂತೆ ದಿನನಿತ್ಯದ ಆಹಾರಕ್ಕಾಗಿ ಕಷ್ಟಪಟ್ಟು ಶ್ರಮಿಸುತ್ತಾ ಬಂದಿದ್ದಾರೆ. ಇದರಿಂದಾಗಿ ಭೋವಿ ಸಮುದಾಯದ ಕುಟುಂಬಗಳು ಕಡು ಬಡತನದ ದಾರಿಯಲ್ಲಿಯೇ ಜೀವನ ನಡೆಸುತ್ತಾ ಬಂದಿರುವುದು ಸತ್ಯ ಸಂಗತಿಯಾಗಿದೆ.

ಅನಕ್ಷರತೆ : ಭೋವಿ ಸಮುದಾಯವು ಎದುರಿಸುವ ಅತ್ಯಂತ ದೊಡ್ಡ ಸಮಸ್ಯೆ ಶಿಕ್ಷಣವನ್ನು ಪಡೆಯದಿರುವುದು ಮತ್ತು ಉತ್ಯೇಕಿಸದೆ ಇರುವುದು ಕಂಡುಬರುತ್ತದೆ. ಈ ಅಧ್ಯಯನದ ಕ್ಷೇತ್ರದಲ್ಲಿ ೯೦ ಕುಟುಂಬಗಳಲ್ಲಿ ಶಿಕ್ಷಣ ಪಡೆದವರ ಸಂಖ್ಯೆ ಶೇ. ೧೦೦ ಕ್ಕೆ ೧೦% ಮಾತ್ರ ಇದ್ದು ೯೦% ರಷ್ಟು ಅನಕ್ಷರಸ್ಥರು ಇದ್ದಾರೆ. ಅನೇಕರು ತಮ್ಮ ಸಾಂಪ್ರದಾಯಿಕ ವೃತ್ತಿಯಲ್ಲಿ ಮುಂದುವರೆದಿರುವುದರಿಂದ ಮಕ್ಕಳಿಗೆ ಶಿಕ್ಷಣ ಕೊಡಿಸಲು ಆಗದಿರುವುದು ಕಂಡುಬರುತ್ತದೆ.

ಕುಡಿತ : ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯ ಕೈಗೊಂಡಾಗ ಭೋವಿ ಸಮುದಾಯದ ದೊಡ್ಡ ದುರಂತವೆಂದರೆ ಕುಡಿತದ ಬಲೆಗೆ ಬೀಳುವುದು. ಪ್ರತಿ ಕುಟುಂಬದಲ್ಲಿ ಕೈಕೆಲಸ ಮಾಡುವ, ಕಟ್ಟಡ ಕೆಲಸ ಮಾಡುವ ಪುರುಷರು ಕುಡಿತದ ಬಲೆಗೆ ಬಿದ್ದಿದ್ದಾರೆ. ದಣಿದು ದೈಹಿಕ ನೋವು ಮರೆಯಲು ರಾತ್ರಿ ಕುಡಿಯುವುದು ಸಾಮಾನ್ಯವಾಗಿದೆ. ದುಡಿದ ಹಣ ಕುಡಿತಕ್ಕೆ ಖರ್ಚಾಗಿ ಸಂಸಾರ ನಡೆಸಲು ಕಷ್ಟಕರವಾಗುತ್ತದೆ.

ಬಡತನ : ಬಡತನವು ವ್ಯಕ್ತಿಯ ಪ್ರಗತಿಯನ್ನು ಕುಂಠಿತಗೊಳಿಸುವ ಸಮಸ್ಯೆಯಾಗಿದೆ. ಇದಕ್ಕೆ ಮೂಲ ಕಾರಣ ಜನಸಂಖ್ಯೆಯ ಬೆಳವಣಿಗೆ ಕುಟುಂಬದಲ್ಲಿ ಒಬ್ಬರು, ಇಬ್ಬರು ದುಡಿಯುವವರು ೪,೫ ಜನ ಮಕ್ಕಳು ಮತ್ತು ಖರ್ಚು ಇದರಿಂದ ಬಡತನ ಹೆಚ್ಚಾಗುತ್ತದೆ. ಮತ್ತು ಮಕ್ಕಳಿಗೆ ಶಿಕ್ಷಣ ಕೊಡಿಸಲು ಆರ್ಥಿಕ ಇತರೆ ಹೊರೆಯಾಗುತ್ತಿದೆ.

ಮೂಢನಂಬಿಕೆ : ಪಾರಂಪರಿಕ ಕಸುಬುಗಳನ್ನು ನಂಬಿಕೊಂಡು ಅಲೆಮಾರಿಗಳಾಗಿ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವುದು ಮತ್ತು ತಮ್ಮ ಹಿರಿಯರ ಸಂಪ್ರದಾಯಗಳನ್ನು ಉಳಿಸಿಕೊಳ್ಳಲು ಕಾಡುಕಲ್ಲುಗಳನ್ನು ಕಡಿಯುವುದು ಅದೇ ವೃತ್ತಿಯಲ್ಲಿ ಮುಂದುವರೆದಿರುವುದು ಕಂಡು ಬರುತ್ತದೆ.

ವಲಸೆ ಹೋಗುವುದು : ಜೀವನ ನಿರ್ವಹಣೆಗಾಗಿ ಭೋವಿ ಸಮುದಾಯದ ಅನೇಕ ಕುಟುಂಬಗಳು ಊರಿಂದ ಊರಿಗೆ ಸ್ಥಳಾಂತರವಾಗುವುದು ಮತ್ತು ವಾಸಿಸಲು ನಿರ್ದಿಷ್ಟ ವಸತಿಗಳಿಲ್ಲದಿರುವುದು ಮೂಲ ಸಮಸ್ಯೆಯಾಗಿದೆ. ಸ್ಥಳಾಂತರವಾಗುವುದರಿಂದ ಪರಿಸರದ

ಸಮಸ್ಯೆಯಿಂದ ಹಲವಾರು ರೋಗಗಳಿಗೆ ತುತ್ತಾಗಿ ಸಾವು ಸಂಭವಿಸುವುದು ಮೂಲ ಸಮಸ್ಯೆಯಾಗಿದೆ.

ಬಾಲಕಾರ್ಮಿಕರು : ಭೋವಿ ಸಮುದಾಯದ ಹಿರಿಯರು ಪಾರಂಪರಿಕ ವೃತ್ತಿಯಲ್ಲಿ ಮುಂದುವರಿಯುವದರಿಂದ ಕುಡಿತ, ಧೂಮಪಾನ, ಮಾಧಕ ದ್ರವ್ಯಗಳ ಬಲೆಗೆ ಬಿದ್ದು ದುಡಿದ ಹಣ ಮನೆಯಲ್ಲಿ ಕೊಡದೆ ಹಲವಾರು ರೋಗಗಳಿಗೆ ತುತ್ತಾಗಿದ್ದಾರೆ. ಆರ್ಥಿಕವಾಗಿ ಹಿಂದುಳಿದಿದ್ದು ಬಡತನದಿಂದ ಜೀವನವನ್ನು ಸಾಗಿಸಲಾಗದೇ ಮಕ್ಕಳಿಗೆ ಶಿಕ್ಷಣ ಕೊಡಿಸಲಾಗದೆ, ಪಾರಂಪರಿಕ ವೃತ್ತಿ ಬಗೆಗೆ ತೋರಿಸಿ ತಮ್ಮ ಮಕ್ಕಳನ್ನು ಬಾಲಕಾರ್ಮಿಕರನ್ನಾಗಿ ಮಾಡಿರುವುದು ಕಂಡುಬರುತ್ತದೆ.

ನಿರುದ್ಯೋಗ : ಭೋವಿ ಸಮುದಾಯದಲ್ಲಿ ಅನೇಕರು ಪದವಿ, ಸ್ನಾತಕೊತ್ತರ ಪದವಿ ಪಡೆದವರಿಗೆ ಉದ್ಯೋಗ ಸಿಗದೆ ಕಟ್ಟಡ ಕೆಲಸ, ಕಲ್ಲು ಸೀಳುವ ಕೆಲಸ ಮಾಡುವುದು ಕಂಡುಬರುತ್ತದೆ.

ಸವಾಲುಗಳು

- ತಂತ್ರಜ್ಞಾನದ ಬೆಳವಣಿಗೆಯಿಂದ ಕೈಕೆಲಸ ಮಾಡುವ ಭೋವಿ ಸಮುದಾಯದ ಜನರಿಗೆ ನಿರುದ್ಯೋಗಿಗಳನ್ನಾಗಿ ಮಾಡಿರುವುದು.
- ಕೈಯಿಂದ ತಯಾರಿಸಿದ ಒರಳುಕಲ್ಲು, ಬೀಸುವ ಕಲ್ಲುಗಳನ್ನು ಸಾರ್ವಜನಿಕರು ಕೊಳ್ಳದಿರುವುದರಿಂದ ಉಪಕರಣಗಳಿಗೆ ಬೇಡಿಕೆ ಇಲ್ಲದಂತಾಗಿ ಮಿಕ್ಸರ್, ಜಿನ್ನುಗಳನ್ನು ಬಳಸುವುದರಿಂದ ಭೋವಿ ಸಮುದಾಯದ ಜನರು ವೃತ್ತಿಗೆ ಸವಾಲಿನ ಸಂಗತಿಯಾಗಿದೆ.
- ಮನೆಕಟ್ಟಲು ಸಿಮೆಂಟ್ ಕಲ್ಲು, ಇಟ್ಟಿಗೆ ಬಳಸುವುದರಿಂದ ಕಲ್ಲುಗಳಿಗೆ ಬೇಡಿಕೆ ಇಲ್ಲದಂತಾಗಿ ಬೇರೆ ವೃತ್ತಿಯ ಬಗ್ಗೆ ತಿಳಿಯದ ಕಲ್ಲು ಸೀಳುವ ಜನರು ದೊಡ್ಡ ಸಮಸ್ಯೆಯನ್ನೇ ಎದುರಿಸಬೇಕಾಗಿದೆ.
- ಬಿಂಚೆ ಕುಟ್ಟಿ ಜೀವನ ನಡೆಸುವ ಜನರು ಬಂಡೆ ಪುಡಿಮಾಡುವ ಮಿಷನ್‌ಗಳಿಗೆ ಸವಾಲೊಡ್ಡುವುದು ದೊಡ್ಡ ಸ್ಪರ್ದೆಯಾಗಿದೆ.

- ರಸ್ತೆಗಳು, ದೊಡ್ಡ ದೊಡ್ಡ ಕಟ್ಟಡಗಳು ಟೆಂಡರ್ ಹಾಕುವುದರಿಂದ ಆದಾಯ ಇರುವ ವ್ಯಕ್ತಿಯು ಗುತ್ತಿಗೆ ಹಿಡಿಯುವುದರಿಂದ ಭೋವಿ ಸಮುದಾಯದ ಶ್ರಮಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲ.
- ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ಕುಟುಂಬಗಳು ಮಕ್ಕಳ ಶಿಕ್ಷಣಕ್ಕೆ ಉನ್ನತ ಮಟ್ಟದ ಖಾಸಗಿ ಶಿಕ್ಷಣ ಕೊಡಿಸುವುದು. ಆರ್ಥಿಕವಾಗಿ ಹಿಂದುಳಿದ ಭೋವಿ ಕುಟುಂಬಗಳು ಮಕ್ಕಳಿಗೆ ಸಾಮಾನ್ಯ ಶಿಕ್ಷಣ ರೂಪಿಸುವುದರಿಂದ ಉದ್ಯೋಗದಲ್ಲಿ ಸವಾಲನ್ನು ಎದುರಿಸುವುದು ಕಷ್ಟಸಾಧ್ಯವಾಗಿದೆ.
- ಕುಟುಂಬದಲ್ಲಿ ಚಿಕ್ಕ ಮಕ್ಕಳಿಗೆ ಬಾಲ್ಯವಿವಾಹ ಮಾಡಿ ಸಂಸಾರದ ಬಲೆಗೆ ನೂಕುವುದು ಇದು ಒಂದು ಜ್ವಲಂತ ಸಮಸ್ಯೆಯಾಗಿದೆ. ಕುಟುಂಬದ ಹಿರಿಯರು ಮಕ್ಕಳಿಗೆ ವಿವಾಹ ಮಾಡಿದರೆ ನಮ್ಮ ಜವಾಬ್ದಾರಿ ತಪ್ಪಿತು ಎಂದು ತಿಳಿಯುವುದು ಮತ್ತು ಕುಟುಂಬ ನಿರ್ವಹಣೆಯನ್ನು ಮಗನಿಗೆ ಒಹಿಸುವುದು ಕಂಡುಬರುತ್ತದೆ.
- ಬಹುತೇಕ ಕುಟುಂಬಗಳು ಆಸ್ತಿಯನ್ನು ಹೊಂದದೆ ನಿರಂತರ ಸ್ವಾವಲಂಬಿಗಳಾಗಿ ಕೈಕೆಲಸಕ್ಕೆ ಒತ್ತು ನೀಡಿರುವುದು.
- ಆಹಾರ ಮತ್ತು ಆರೋಗ್ಯದ ಸಮಸ್ಯೆಯಿಂದ ಬಳಲುವುದು.
- ಸಾಲ ಸೌಲಭ್ಯಗಳಿಂದ ವಂಚಿತರಾಗಿರುವುದು.
- ಅಸ್ಪೃಶ್ಯತೆ
- ರಾಜಕೀಯ ಸ್ಥಾನಮಾನಗಳಿಂದ ವಂಚಿತರಾಗಿರುವುದು
- ಉನ್ನತ ಮಟ್ಟದ ಶಿಕ್ಷಣ ಪಡೆಯದಿರುವುದು.

ಅಧ್ಯಯನದ ಫಲಿತಗಳು:

ಜನಸಂಖ್ಯೆ : ಕೆ.ಸೂಗೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಭೋವಿ ಸಮುದಾಯದ ಕುಟುಂಬಗಳು ೯೦ ಇದ್ದು ಅದರಲ್ಲಿ ಬೆಂಚೆ ಕ್ಯಾಂಪ್ ಗ್ರಾಮದಲ್ಲಿ ೬ ಕುಟುಂಬ, ಮುದೆನೂರು ಗ್ರಾಮದಲ್ಲಿ ೩೪ ಕುಟುಂಬಗಳಿವೆ. ಮತ್ತು ಕೆ.ಸೂಗೂರು ಗ್ರಾಮದಲ್ಲಿ ೫೦ ಕುಟುಂಬಗಳಿವೆ. ಒಟ್ಟು ಜನಸಂಖ್ಯೆ ೪೩೦. ಕೆ. ಸೂಗೂರಿನಲ್ಲಿ ೨೬೪.

ಪುರುಷರು ೧೩೦, ಸ್ತ್ರೀಯರು ೧೩೪. ಬೆಂಚೆಕ್ಯಾಂಪ್ ಗ್ರಾಮದಲ್ಲಿ ೩೦ ಜನ ಪುರುಷರು ೧೪, ಸ್ತ್ರೀಯರು ೧೬ ಜನ. ,ಮುದೆನೂರು ಗ್ರಾಮದಲ್ಲಿ ೬೨ ಜನ ಪುರುಷರು, ೭೪ ಜನ ಸ್ತ್ರೀಯರು ಒಟ್ಟು ೧೩೬ ಜನ. ಕಟ್ಟಡ ನಿರ್ಮಾಣ ಮಾಡುವವರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು ೫೫ ಜನ ಅದರಲ್ಲಿ ಪುರುಷರು ೪೦, ಸ್ತ್ರೀಯರು ೧೫ ಜನ ಕಂಡು ಬಂದಿದ್ದು ಬೇಲ್ದಾರ್‌ಗಳು ೨೦ ಜನ ಪುರುಷರು, ಹೆಲ್ಪರ್‌ಗಳು ಪುರುಷರು ೨೦, ಸ್ತ್ರೀಯರು ೧೫ ಜನ ಇರುವುದು ಕಂಡು ಬಂದಿದೆ.

ಕಲ್ಲು ಸೀಳುವವರು ಕೆ.ಸೂಗೂರಿನಲ್ಲಿ ೧೪ ಅದರಲ್ಲಿ ಜನ ವಯಸ್ಕ ವಿವಾಹಿತ ಪುರುಷರು ೫ ಜನ, ಸ್ತ್ರೀಯರು ೪ ಜನ, ಅವಿವಾಹಿತರು ಪುರುಷರು ೨, ಸ್ತ್ರೀಯರು ಒಬ್ಬರು ಇರುವುದು ತಿಳಿದಿದೆ.

ಬೆಂಚೆಕ್ಯಾಂಪ್‌ನಲ್ಲಿ ೨ ಜನ, ಒಬ್ಬರು ಸ್ತ್ರೀಯರು, ಮುದೆನೂರಿನಲ್ಲಿ ೩ ಜನ ಪುರುಷರು, ಇಬ್ಬರು ಸ್ತ್ರೀಯರು ಬೆಂಚೆ ಒಡೆಯುವವರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ೨೩ ಜನ ಪುರುಷರು ಪ್ರಮಾಣ ೨.೫೫% ರಷ್ಟು, ಸ್ತ್ರೀಯರ ಪ್ರಮಾಣ ೩.೦೨% ರಷ್ಟು, ಮಕ್ಕಳ ಪ್ರಮಾಣ ೦.೬೯ % ಪ್ರಮಾಣ ಇರುವುದು ಕಂಡು ಬಂದಿದೆ.

ಗೃಹಬಳಕೆಯ ಸಲಕರಣೆ ಮಾಡುವವರು ಅಧ್ಯಯನ ಕ್ಷೇತ್ರದಲ್ಲಿ ಯಾರು ಸ್ತ್ರೀಯರು ಕಂಡು ಬಂದಿಲ್ಲ. ಪುರುಷರ ಪ್ರಮಾಣ ೧೦ ಜನ ಶೇ. ೨.೩೨ % ಇದ್ದಾರೆ.

ಕೆರೆ ಕಾಲುವೆಗಳನ್ನು ಕಟ್ಟುವವರು ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು ೯೭ ಜನರಿದ್ದು ಶೇ. ೨೩ ರಷ್ಟು ಪುರುಷರು ೧೫ ಜನ ಶೇ.೧೦% ಸ್ತ್ರೀಯರು ೧೮ ಜನ ಶೇ. ೧೨% ರಷ್ಟು ಸ್ತ್ರೀಯರಿಗಿಂತ ಪುರುಷರು ಜಾಸ್ತಿ ಈ ವೃತ್ತಿಯಲ್ಲಿ ತೊಡಗಿಕೊಂಡಿರುವುದು ಕಂಡು ಬಂದಿದೆ.

ಪಾರಂಪರೀಕವಾಗಿ ಬಂದ ವೃತ್ತಿಯನ್ನು ಉಳಿಸಿಕೊಳ್ಳಲು ಇಂದಿಗೂ ಸಹ ದೇವರ ಮೂರ್ತಿಗಳನ್ನು ಮಾಡುತ್ತಾ ಬಂದಿದ್ದಾರೆ. ವೃತ್ತಿ ಮಾಡುವವರು ಕೆ.ಸೂಗೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು ೪ ಕುಟುಂಬಗಳಿವೆ. ಅವು ಕೆ. ಸೂಗೂರಿನಲ್ಲಿ ಇವೆ ಎಂಬುದನ್ನು ತಿಳಿದು ಬಂದಿದೆ.

ಕೆರೆಗಳು, ಕಾಲುವೆಗಳು, ಮನೆಗಳನ್ನು ಗುತ್ತಿಗೆ ಹಿಡಿದು ಕೆಲಸ ಮಾಡಿಸುವವರು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಒಟ್ಟು ೨೩ ಜನರಿದ್ದು, ಕೆ. ಸೂಗೂರು ಗ್ರಾಮದಲ್ಲಿ ೧೫ ಜನ, ಬೆಂಚೆಕ್ಯಾಂಪ್‌ನಲ್ಲಿ ೩ ಜನ , ಮುದೆನೂರು ಗ್ರಾಮದಲ್ಲಿ ೫ ಜನ ಕಂಡು ಬಂದಿರುವುದನ್ನು ವಿವರಿಸಲಾಗಿದೆ.

ಪಾರಂಪರೀಕ ಕಸುಬುಗಳಾದ ಕಟ್ಟಡ ಕೆಲಸ ಮಾಡುವುದನ್ನು ಬಿಟ್ಟು ಇತರೆ ಕಸುಬುಗಳನ್ನು ಮಾಡಿಕೊಂಡು ಜೀವನ ಮಾಡುವವರು ಇದ್ದಾರೆ. ಅದರಲ್ಲಿ ಕೃಷಿಯನ್ನು ಮಾಡುತ್ತಿದ್ದು ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು ೧೮ ಜನ ಇದ್ದಾರೆ. ಕೆ. ಸೂಗೂರಿನಲ್ಲಿ ೯ ಜನ ಶೇ. ೩.೪೦ ರಷ್ಟು, ಬೆಂಚೆಕ್ಯಾಂಪ್‌ನಲ್ಲಿ ೩ ಕುಟುಂಬ ಶೇ. ೧೦. ಮುದೆನೂರಿನಲ್ಲಿ ೯ ಕುಟುಂಬ ಶೇ. ೬.೬ ರಷ್ಟು ಮತ್ತು ವ್ಯಾಪಾರ ಮಾಡುವವರು ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ೩ ಶೇ. ೮ ಜನ, ಶೇ. ೧.೮೬% ರಷ್ಟು ಪಶು ಪಾಲನೆ ಮಾಡುವವರು ಕೆ.ಸೂಗೂರಿನಲ್ಲಿ ೫ ಕುಟುಂಬಗಳಿವೆ. ಬೆಂಚೆಕ್ಯಾಂಪ್‌ನಲ್ಲಿ ೨ ಕುಟುಂಬಗಳು, ಮುದೆನೂರಿನಲ್ಲಿ ೮ ಕುಟುಂಬ ಪಶು ಪಾಲನೆಗೆ ಹೆಚ್ಚು ಆಧ್ಯತೆ ನೀಡಿಲ್ಲದಿರುವುದು ತಿಳಿದು ಬರುತ್ತದೆ. ಭೋವಿ ಸಮುದಾಯದ ಕುಟುಂಬಗಳು ಕಟ್ಟಡ ನಿರ್ಮಾಣ ಮಾಡುವ ಜೊತೆಯಲ್ಲಿ ಉಪಕಸುಬಾಗಿ ಕುರಿ, ಮೇಕೆಗಳನ್ನು ಸಾಕುವುದು ಕಂಡು ಬಂದಿದ್ದು ೯೦ ಕುಟುಂಬಗಳಲ್ಲಿ ೧೨ ಕುಟುಂಬಗಳು ಮಾತ್ರ ಈ ವೃತ್ತಿಯನ್ನು ಮಾಡುವುದು ಕಂಡು ಬರುತ್ತದೆ. ಭೂಮಿ ಇಲ್ಲದವರು ಕೃಷಿ ಕೂಲಿ, ದಿನಗೂಲಿ ಮಾಡುತ್ತವೆ. ಪಂಚಾಯ್ತಿ ವ್ಯಾಪ್ತಿಯಲ್ಲಿ ೯೦ ಕುಟುಂಬಗಳಲ್ಲಿ ೩೮ ಕುಟುಂಬ ಶೇ. ೪೨ ರಷ್ಟು ಇರುವುದು ತಿಳಿದು ಬಂದಿದೆ.

ಕೆ.ಸೂಗೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ವಾಸಿಸುವ ಭೋವಿ ಕುಟುಂಬಗಳಲ್ಲಿ ವಯಸ್ಸಿಗೆ ಮೀರಿ ಬಾಲ್ಯವ್ಯವಸ್ಥೆಯಲ್ಲಿಯೇ ಕೆಲಸಕ್ಕೆ ಹೋಗುವ ದುರದುಷ್ಟಕರ ಸಂಗತಿಗಳು ಕಂಡುಬಂದಿವೆ. ಕಟ್ಟಡ ನಿರ್ಮಾಣ, ಗೃಹಬಳಕೆ, ಸಾಮಾಗ್ರಿ ನಿರ್ಮಾಣ, ದಿನಗೂಲಿ ಮಾಡುತ್ತಿದ್ದು ಅದರಲ್ಲಿ ೪೩೦ ಜನರಲ್ಲಿ ದುಡಿಮೆ ಮಾಡುವವರು ಕೆ.ಸೂಗೂರು ಗ್ರಾಮದಲ್ಲಿ ವಯಸ್ಕರು ಪುರುಷರು ೫೦ ಜನ ಶೇ.೧೮, ಸ್ತ್ರೀಯರು ೪೫ ಜನ ೧೭%, ವೃದ್ದರು ಪುರುಷರು ೩೫ ಜನ ಶೇ.೧೩, ಸ್ತ್ರೀಯರು ೩೦ ಜನ ಶೇ.೧೧,

ಬಾಲಕಾರ್ಮಿಕರು ಪುರುಷರು ೮ ಜನ ಶೇ.೩, ಸ್ತ್ರೀಯರು ೫ ಜನ ಶೇ. ೧.೮, ಒಟ್ಟು ೧೭೩ ಜನ ಶೇ. ೬೫ ರಷ್ಟು, ಮುದೆನೂರಿನಲ್ಲಿ ೮೮ ಜನ ಶೇ.೬೧ ರಷ್ಟು, ಬೆಂಚ್‌ಕ್ಯಾಂಪ್‌ನಲ್ಲಿ ೨೬ ಜನ ಶೇ. ೮೬ ರಷ್ಟು ದುಡಿಮೆ ಮಾಡುವವರು ಕಂಡು ಬಂದಿದೆ.

ಭೋವಿ ಸಮುದಾಯದ ಕುಟುಂಬಗಳು ತಮ್ಮ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಬದಲು ಪಾರಂಪರಿಕ ಮತ್ತು ಉಪಕಸುಬುಗಳಿಗೆ ಒಲವು ತೋರಿಸಿ ವೃತ್ತಿ ಬದುಕಿಗೆ ಕಳಿಸುವವರ ಸಂಖ್ಯೆ ಹೆಚ್ಚಿದೆ. ಇಡಿ ಪಂಚಾಯತಿ ವ್ಯಾಪ್ತಿಯಲ್ಲಿ ಭೋವಿ ಸಮುದಾಯದ ಕುಟುಂಬದ ಜನರ ಶಿಕ್ಷಣ ಪ್ರಮಾಣ ಶೇ ೧೯ ರಷ್ಟು ಮತ್ತು ಅನಕ್ಷರಸ್ಥರ ಪ್ರಮಾಣ ಶೇ. ೮೦.೯೩ ರಷ್ಟು ಇದನ್ನೇ ನೋಡಿದರೆ ಶಿಕ್ಷಣ ಪಡೆದವರು ಬಹಳ ಬಹಳ ಕಡಿಮೆ. ಅದರಲ್ಲಿ ಸೂಗೂರು ಗ್ರಾಮದಲ್ಲಿ ಅನಕ್ಷರಸ್ಥರು ಪುರುಷರು ೩೦ ಜನ ಶೇ. ೮.೧೧, ಸ್ತ್ರೀಯರು ೨೨ ಜನ ಶೇ. ೮.೩೩, ಬೆಂಚೆಕ್ಯಾಂಪ್‌ನಲ್ಲಿ ಪುರುಷರು ೬ ಜನ ಶೇ. ೨೦, ಸ್ತ್ರೀಯರು ೯ ಜನ ಶೇ. ೬.೬೬%, ಮುದೆನೂರು ಗ್ರಾಮದಲ್ಲಿ ಪುರುಷರು ೧೧ ಜನ ಶೇ.೮.೦೮, ಸ್ತ್ರೀಯರು೯ ಜನ ಶೇ. ೬.೬೧ ರಷ್ಟು ಕಂಡು ಬರುತ್ತದೆ.

ಸಲಹೆಗಳು

ಭೋವಿ ಸಮುದಾಯದ ಆರ್ಥಿಕ ಅಧ್ಯಯನದ ಹಿನ್ನೆಲೆಯಲ್ಲಿ ಈ ಸಮುದಾಯವು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಗುರುತಿಸಲಾಗಿದೆ. ಅಂತಹ ಸಮಸ್ಯೆಗಳ ಪರಿಹಾರಕ್ಕೆ ಈ ಕೆಳಗಿನ ಸೂಕ್ತ ಸಲಹೆಗಳನ್ನು ನೀಡಲಾಗಿದೆ.

- ಭೋವಿ ಸಮುದಾಯದ ಕುಟುಂಬಗಳು ಬಹುತೇಕವಾಗಿ ಗುಡಿಸಲುಗಳಲ್ಲಿ, ಶೆಡ್‌ಗಳಲ್ಲಿ, ತಗಡಿನ ಮನೆಗಳಲ್ಲಿ, ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದಾರೆ ಅಂತಹ ಕುಟುಂಬಗಳಿಗೆ ಸರ್ಕಾರದ ವತಿಯಿಂದ ಅಂಬೇಡ್ಕರ್ ವಸತಿ ನಿಗಮ, ಇಂದಿರಾ ಆವಾಸ್ ಯೋಜನೆ, ಮನೆಗಳನ್ನು ಕಲ್ಪಿಸುವುದು ಜೊತೆಯಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು.
- ಬಡತನದ ರೇಖೆಗಿಂತ ಕೆಳಗಿರುವ ಭೋವಿ ಸಮುದಾಯದ ಕುಟುಂಬಗಳಿಗೆ ಪಡಿತರ ಚೀಟಿಗಳಾದ ಅಂತ್ಯೋದಯ, BPL (Below Powerty Line), ಅಕ್ಷಯದಂತಹ ಚೀಟಿಗಳನ್ನು ಅರ್ಹ ಕುಟುಂಬಗಳಿಗೆ ಸಕಾಲದಲ್ಲಿ ಒದಗಿಸಿಕೊಡುವುದು.

- ವಲಸೆ ಹೋಗುವ ಕುಟುಂಬಗಳನ್ನು ತಡೆಹಿಡಿಯಲು ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ, ಕೂಲಿಕಾಳು ಯೋಜನೆಯಿಂದ ಕಡ್ಡಾಯವಾಗಿ ವಾರ್ಷಿಕ ೩ ತಿಂಗಳು ಕೆಲಸ ಒದಗಿಸುವುದು.
- ಸ್ವಯಂ ಉದ್ಯೋಗ ಮಾಡಲು ಇಚ್ಚಿಸುವ ಭೋವಿ ಸಮುದಾಯದ ನಿರುದ್ಯೋಗಿ ಪುರುಷ ಸ್ತ್ರೀಯರಿಗೆ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ, ಸಮಗ್ರ ಗ್ರಾಮೀಣ ಯೋಜನೆ ಹಾಗೂ ಬ್ಯಾಂಕ್‌ಗಳಿಂದ ಧನಸಹಾಯವನ್ನು ಒದಗಿಸುವುದು
- ಭೋವಿ ಸಮುದಾಯದ ವೃದ್ದರಿಗೆ , ಅಂಗವಿಕಲರಿಗೆ, ವಿಧವೇಯವರಿಗೆ ಮಾಸಿಕ ವೇತನ ನೀಡುವುದು.
- ಭೋವಿ ಸಮುದಾಯದ ಬೇಸಾಯ ಮಾಡುವವರು ಹೆಚ್ಚಾಗಿ ಒಣ ಬೇಸಾಯ ಪದ್ದತಿಯನ್ನು ಅನುಸರಿಸುತ್ತಿದ್ದಾರೆ ಅಂತಹ ಕುಟುಂಬಗಳಿಗೆ ಗಂಗಾ ಕಲ್ಯಾಣ ಯೋಜನೆಯಿಂದ ನೀರಾವರಿ ಸೌಲಭ್ಯ ಒದಗಿಸುವುದು.
- ವೃತ್ತಿಯನ್ನು ಮಾಡುವ ಕುಟುಂಬಗಳಿಗೆ ಕೈಗಾರಿಕಾ ಸಾಮಾಗ್ರಿಗಳನ್ನು ಕೊಡಿಸುವುದು ಹಾಗೂ ಧನಸಹಾಯ ಕಲ್ಪಿಸುವುದು
- ವೃತ್ತಿ ಕೌಶಲಗಳಿಗೆ ಆಧುನಿಕ ವಿನ್ಯಾಸದ ಯಂತ್ರೋಪಕರಣಗಳನ್ನು ನೀಡಬೇಕು.
- ಮೂಢ ನಂಬಿಕೆಯಿಂದ ಹೊರ ಬರುವಂತೆ ಪರಿಜ್ಞಾನ ಮೂಡಿಸುವುದು.
- ಮಧ್ಯಪಾನ ಧೂಮಪಾನದಂತಹ ದ್ರವ್ಯಗಳ ಸೇವನೆಯಿಂದುಂಟಾಗುವ ಪರಿಣಾಮವನ್ನು ಕುರಿತು ಅರಿವು ಮೂಡಿಸುವುದು.
- ಬಾಲ ಕಾರ್ಮಿಕರ ಪ್ರಮಾಣ ಮಾಡಲು ಭೋವಿ ಸಮುದಾಯದ ಕುಟುಂಬಗಳಿಗೆ ಆಧುನಿಕ ಪರಿಜ್ಞಾನ ಮೂಡಿಸುವುದು ಮತ್ತು ಶಿಕ್ಷಣ ವ್ಯವಸ್ಥೆ, ವಸತಿ ವ್ಯವಸ್ಥೆ ಬಗ್ಗೆ ಸರ್ಕಾರ ಸೌಲಭ್ಯ ನೀಡುವುದನ್ನು ತಿಳಿಸುವುದು.
- ವಲಸೆಯಿಂದುಂಟಾಗುವ ಸಮಸ್ಯೆಗಳು ಮತ್ತು ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದು.

* ಸರ್ಕಾರವು ಭೋವಿ ಸಮುದಾಯದ ಅಭಿವೃದ್ಧಿಗಾಗಿ ಜಾರಿಗೆ ತಂದಿರುವ ಯೋಜನೆಗಳು ಸಮರ್ಪಕವಾಗಿ ತಲುಪಿದ್ದಾವೆಯೆಂಬುದನ್ನು ಪರಿಶೀಲಿಸುವುದು.
* ಭೋವಿ ಸಮುದಾಯದವರಿಗೆ ರಾಜಕೀಯವಾಗಿ ಸ್ಥಾನಮಾನಗಳನ್ನು ಕಲ್ಪಿಸುವುದು

ಭೋವಿ ಸಮುದಾಯದ ಆರ್ಥಿಕ ಅಧ್ಯಯನವು ಕೆ.ಸೂಗೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಬೆಂಚೆಕ್ಯಾಂಪ್, ಮುದೆನೂರು, ಕೋಟೆಹಾಳು ಗ್ರಾಮಗಳಲ್ಲಿ ಕಡಿಮೆ ವ್ಯಾಪ್ತಿಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ಮುಂದಿನ ಸಂಶೋಧನೆಯನ್ನು ಕರ್ನಾಟಕದ ಇತರೆ ಜಿಲ್ಲೆಗಳು ಹಾಗೂ ಇತರೆ ರಾಜ್ಯಗಳಲ್ಲಿ ಕೈಗೊಳ್ಳಬಹುದು. ಭೋವಿ ಸಮುದಾಯದ ವಿವಿಧ ಅಂಶಗಳನ್ನು ಕುರಿತು ಮಾಹಿತಿ ಕ್ರೋಢೀಕರಿಸಬಲ್ಲ ಒಂದು ಪ್ರಯತ್ನವಾಗಿದೆ.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಮಾಹಿತಿದಾರರ ವಿವರಗಳು

ಪ್ರಶ್ನಾವಳಿ

ನಕ್ಷೆಗಳು

ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

೧. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯರ್ ರಾಜ್ ಸಂಸ್ಥೆ ಕರ್ನಾಟಕ ಸರ್ಕಾರ, 'ನಮ್ಮ ಗ್ರಾಮ ನಮ್ಮ ಯೋಜನೆ', ೨೦೧೫.

೨. ಅನಂತ ರಂಗಾಚಾರ್ಯ ಎನ್., ಕರ್ನಾಟಕದಲ್ಲಿ ವಾಸ್ತುಶಿಲ್ಪ, ೧೯೭೨.

೩. ಕೊಟ್ರೋಶ ಎಂ., ಬಳ್ಳಾರಿ ಜಿಲ್ಲೆಯ ಕೋಟೆಗಳು, ೨೦೧೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೪. ಕೊಲ್ಲಾಪುರ ಪವಾರ ಸತೀಶ, ವಡ್ಡರ ಸಮಾಜ ಮತ್ತು ಸಂಸ್ಕೃತಿ.

೫. ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ, ೨೦೦೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೬. ಗಂಗಾಧರಯ್ಯ, ಭೋವಿ ಸಮಾಜದ ಸಂಸ್ಕೃತಿ ಮತ್ತು ಕೊಡುಗೆಗಳು, ೨೦೦೭, ಕನ್ನಡ ವಿಶ್ವವಿದ್ಯಾಲಯ ಹಂಪಿ, ಸಿರಿಗನ್ನಡ ಗ್ರಂಥಾಲಯ.

೭. ಗಣೇಶ ಮೊಗಳ್ಳಿ, ದಲಿತರು ಮತ್ತು ಜಾಗತೀಕರಣ, ೧೯೯೯, ಕನ್ನಡ ವಿಶ್ವವಿದ್ಯಾಲಯ ಹಂಪಿ.

೮. ಗುರುಮೂರ್ತಿ ಪೆಂಡಕೂರು, ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು, ೨೦೦೬, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೯. ಗುರುಲಿಂಗಯ್ಯ ಎಂ., ಮತ್ತು ನಾಗಪ್ಪ ವಿ., ಕಾಡುಗೊಲ್ಲ "ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ" ೨೦೦೮ ಕನ್ನಡ ಪುಸ್ತಕ ಪ್ರಧಿಕಾರ ಬೆಂಗಳೂರು.

೧೦. ಚಂದ್ರಪೂಜಾರಿ ಎಂ., ಸಂಶೋಧನಾ ಜವಾಬ್ದಾರಿ, ೨೦೦೮, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೧. ದೇವೇಂದ್ರಕುಮಾರ್ ಹಕಾರಿ, ಸಂದ್ಯಾರೆಡ್ಡಿ ಕೆ.ಆರ್., ಗ್ರಾಮೀಣ ವೃತ್ತಿಗಳು (ಗ್ರಾಮಸಂಸ್ಕೃತಿ ಮಾಲೆ ೧)

೧೨. ನಿರಂಜನ ರಾ.ನಾ., ಕುಕ್ಕಲನಾಡು ದೇವಾಲಯ ಮತ್ತು ಶಿಲ್ಪಗಳು, ೨೦೧೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೩. ಪ್ರಭಾಕರ ಎ.ಎಸ್., ಆದಿವಾಸಿ ಆಖ್ಯಾನ, ೨೦೦೬, ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೪. ಪ್ರಕಾಶ ಗ. ಖಾಡೆ, ಮುನ್ನುಡಿ ತೋರಣ, ೨೦೦೯, ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೫. ಪುಂಡಲೀಕ ಹಲಕುರ್ಕಿ ಸಿ., ಭೋವಿ ಜನಾಂಗ ಸಾಗಿಬಂದ ದಾರಿ ೨೦೦೨, ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೬. ಬೆಟಗೇರಿ ವೈ.ವೈ., "ವಡ್ಡರ ಪರಂಪರೆ, ೧೯೯೯, ಜೆ.ಬಿ. ಪಬ್ಲಿಕೇಶನ್, ಗದಗ.

೧೭. ಬೆಟಗೇರಿ ವೈ.ವೈ., ಒಡ್ಡರ ಗುರು ಶ್ರೀ ಸಿದ್ದರಾಮೇಶ್ವರ ಚರಿತ್ರೆ, ೧೯೯೯, ಅಧ್ಯಯನಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೮. ಮೇತ್ರಿ ಕೆ.ಎಂ. ಬುಡಕಟ್ಟು ಕುಲಕಸುಬುಗಳು, ೨೦೦೨, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರಸಾರಾಂಗ.

೧೯. ಯರ್ರಪ್ಪ ಡಿ., ಅಲೆಮಾರಿ ಕುರುಬರ ಆರ್ಥಿಕ ಅಧ್ಯಯನ, ೨೦೧೧, ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೦. ಯಮನೂರಪ್ಪ ಅಣ್ಣಿಗೇರಿ, ಬಾಲಕಾರ್ಮಿಕರು, ಮಂಟಪ ೨೦೧೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೧. ರಮೇಶ ಸ.ಚಿ.(ಸಂ.), ಅಲೆಮಾರಿಗಳ ಸ್ಥಿತಿಗತಿ, ೨೦೦೫, ಕನ್ನಡ ವಿಶ್ವವಿದ್ಯಾಲಯ ಹಂಪಿ., ಪ್ರಸಾರಾಂಗ.

೨೨. ರಾಜಶೇಖರ ಸಿಂಧಗಿ– ಕರ್ನಾಟಕ ವಾಸ್ತು ಶಿಲ್ಪ ಮತ್ತು ಚಿತ್ರಕಲೆ, ೧೯೮೮, ಸುಜಾತ ಪಬ್ಲಿಕೇಶನ್ ಧಾರವಾಡ.

೨೩. ರಾಮಕೃಷ್ಣ ಆರ್., ಕರ್ನಾಟಕ ಬುಡಕಟ್ಟುಗಳು, ೨೦೦೭, ಪ್ರಚಾರ ಪುಸ್ತಕ ಮಾಲೆ ಮಾನಸ ಗಂಗೋತ್ರಿ.

೨೪. ರಾಮರಾವ ಆರ್.ಎಸ್., ರಾಘವಾಂಕ ವಿರಚಿತ ಸಿದ್ಧರಾಮ ಚರಿತ್ರೆ, ೨೦೧೦, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೨೫. ಲಕ್ಕಪ್ಪಗೌಡ ಎಚ್.ಜೆ., ಕರ್ನಾಟಕದ ಬುಡಕಟ್ಟುಗಳು, ಸಂಪುಟ–೨, ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೬. ವಿಜಯ ಶ್ರೀ ಇಟ್ಟಣ್ಣವರ, ಹದಿನೆಂಟು ಜಾತಿಗಳು, ೨೦೧೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೭. ಶ್ಯಾಮಸುಂದರ್ ಬೆಂದವರು, ೨೦೦೫, ಅಕ್ಷರ ಗ್ರಂಥಾಲಯ ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೮. ಸತೀಶ ಪವಾರ, ವಡ್ಡರ ಸಮಾಜ ಮತ್ತು ಸಂಸ್ಕೃತಿ ಕೊಲ್ಲಾಪುರ, ೨೦೦೮, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೯. ಸಂಗಳದ ಎನ್.ಬಿ., ಭೋವಿ ಸಮುದಾಯದ ಸಾಮಾಜಿಕ ಅಧ್ಯಯನ, ೨೦೧೪, ಶಶಿ ಪ್ರಕಾಶನ, ಕರಿಯಮ್ಮ ಬಡಾವಣೆ, ಗದಗ.

೩೦. ಗೆಝಟಿಯರ ಆಫ್ ಬಾಂಬೆ, ೧೯೫೯, ಧಾರವಾಡ ಜಿಲ್ಲೆ.

೩೧. ಕರ್ನಾಟಕ ಗೆಝಟಿಯರ್ ಹನುಮಂತ ರೆಡ್ಡಿ ವೈ., ಬಳ್ಳಾರಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ, ೨೦೦೭-೦೮, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ ಧಾರವಾಡ.

೩೨. ಅಂತರ್ ಜಾಲ., ಭೋವಿ ಸಮುದಾಯದ ಮೂಲ.

BIBLOGRAPHY

1. Census of India- 2011.
2. Edgar Thurston, ``caste and tribes of south India vol. v (Asian educational services New Delhi- 1975)
3. Gazetteer of Bombay precidency- Dharwad, vol- 22'' 1884, govt, press Bombay.
4. Havavur L.G. back ward class commission report, 1975 government press Bangalore.
5. Krishnamurthy H.R.K- Economic development of India, 2011.
6. Nirmala kumar bose, tribal life of India'' 1971, National book trust in india, New Delhi.
7. Ram Ahuja. Research methodology'' 2007, Rawat publication jaipur.
8. Rural Development and panchayat raj affice Karnataka vikasa' (April, 2016)
9. Sharma S.B & Sharma J.B ``Culture of Indian tribes (concept and identity vol. I&II)'' 1998, Radha publications new Delhi.

ಮಾಹಿತಿದಾರರ ವಿವರಗಳು

ಹೆಸರು	ವಯಸ್ಸು	ವೃತ್ತಿ	ಊರು
೧. ವಡ್ರು ಲಕ್ಷ್ಮಮ್ಮ	೭೫	ಕೂಲಿ	ಕೆ.ಸೂಗೂರು
೨. ವಡ್ರು ಹನುಮಂತಪ್ಪ	೫೦	ಕೃಷಿ	ಕೆ.ಸೂಗೂರು
೩. ಜಯಮ್ಮ	೪೫	ಕೂಲಿ	ಕೆ.ಸೂಗೂರು
೪. ಗುರುಪಾದಪ್ಪ	೪೨	ಕೃಷಿ	ಕೆ.ಸೂಗೂರು
೫. ರಾಮಾಂಜಿನೇಯ	೨೮	ಕೂಲಿ	ಕೆ.ಸೂಗೂರು
೬. ಚಿದಾನಂದಪ್ಪ	೨೭	ಕಟ್ಟಡ ನಿರ್ಮಾಣ	ಕೆ.ಸೂಗೂರು
೭. ಯಂಕೋಬಣ	೫೦	ಕೃಷಿ	ಕೆ.ಸೂಗೂರು
೮. ಯಂಕಪ್ಪ	೫೦	ಕಟ್ಟಡ ಗುತ್ತಿಗೆದಾರ	ಕೆ.ಸೂಗೂರು
೯. ಸವಾರೆಪ್ಪ	೩೮	ಕಟ್ಟಡ ಗುತ್ತಿಗೆದಾರ	ಕೆ.ಸೂಗೂರು
೧೦. ಯಬ್ಬುಟದ ಯಂಕಪ್ಪ	೫೫	ಮೂರ್ತಿ ನಿರ್ಮಾಣ	ಕೆ.ಸೂಗೂರು
೧೧. ಹಲಿಗೆಪ್ಪ	೪೫	ಕಲ್ಲು ಸೀಳುವವೃತ್ತಿ	ಕೆ.ಸೂಗೂರು
೧೨. ಮೂಕಮ್ಮ	೪೮	ಕಾಯಿಗಡ್ಡೆ ವ್ಯಾಪಾರ	ಕೆ.ಸೂಗೂರು

೧೩.	ಗುರುಸ್ವಾಮಿ ಕೆ.ಸೂಗೂರು	೪೨	ಪಂಚಾಯ್ತಿ ಸದಸ್ಯ
೧೪.	ಮಾಕಪ್ಪ ಕೆ.ಸೂಗೂರು	೫೪	ಗೃಹ ಬಳಕೆ ವಸ್ತು ನಿರ್ಮಾಣ
೧೫.	ಸಿದ್ಧರಾಮೇಶ ವಿ. ಕೆ.ಸೂಗೂರು	೩೮	ಅತಿಥಿ ಶಿಕ್ಷಕ
೧೬.	ಹುಸೇನಪ್ಪ ಎಂ. ಕೆ.ಸೂಗೂರು	೨೭	ಎಂ.ಎ. ಪದವಿಧರ
೧೭.	ನೆಟ್ಟಿಕಲ್ಲಪ್ಪ ಕೆ.ಸೂಗೂರು	೧೬	ಕಟ್ಟಡ ಕಾರ್ಮಿಕ
೧೮.	ವೀರೇಶ ಕೆ.ಸೂಗೂರು	೧೫	ಕಟ್ಟಡ ಕಾರ್ಮಿಕ
೧೯.	ವೀರೇಶ ಕೆ.ಸೂಗೂರು	೨೨	ದಿನಗೂಲಿ
೨೦.	ಶ್ರೀನಿವಾಸ ಕೆ.ಸೂಗೂರು	೪೦	CRP ನೌಕರಿ
೨೧.	ಜಯರಾಮ ಕೆ.ಸೂಗೂರು	೪೫	ಗುಡಿಗೆಲಸ
೨೨.	ರಂಗಪ್ಪ ಬೆಂಚೆಕ್ಯಾಂಪ್	೩೦	ಕಟ್ಟಡ ಕಾರ್ಮಿಕ
೨೩.	ಲಕ್ಷ್ಮಮ್ಮ ಬೆಂಚೆಕ್ಯಾಂಪ್	೪೫	ಹೈನುಗಾರಿಕೆ
೨೪.	ವೆಂಕಟೇಶ ವಿ. ಬೆಂಚೆಕ್ಯಾಂಪ್	೪೫	ಬೇಲ್ದಾರ್

೨೫.	ತಿಪ್ಪಮ್ಮ ಬೆಂಚೆಕ್ಯಾಂಪ್	೫೦	ಕಾಯಿಗಡ್ಡೆ ವ್ಯಾಪಾರ
೨೬.	ಬಸವರಾಜ ಮುದೆನೂರು	೩೨	ಪಂಚಾಯ್ತಿ ನೌಕರಿ
೨೭.	ಈರೇಶ ಮುದೆನೂರು	೪೫	ಕಟ್ಟಡ ಕಾರ್ಮಿಕ
೨೮.	ತಿಮ್ಮಪ್ಪ ಮುದೆನೂರು	೩೮	ಕಟ್ಟಡ ಕಾರ್ಮಿಕ
೨೯.	ಸಣ್ಣ ವೀರೇಶ ಮುದೆನೂರು	೩೫	ಬೇಲ್ದಾರ್
೩೦.	ಗಂಗಪ್ಪ ಮುದೆನೂರು	೪೫	ದಿನಗೂಲಿ
೩೧.	ಹುಲಿಗಪ್ಪ ಮುದೆನೂರು	೫೦	ಕೃಷಿ
೩೨.	ಯಲ್ಲಿಪ್ಪ ಮುದೆನೂರು	೪೮	ಕುರಿಸಾಕಾಣಿಕೆ
೩೩.	ಹನುಮಂತಮ್ಮ ಮುದೆನೂರು	೩೫	ಅವ್ಯಾಪಾರ
೩೪.	ಬಸಮ್ಮ ಮುದೆನೂರು	೬೦	ದಿನಗೂಲಿ
೩೫.	ಹುಲುಗಪ್ಪ ಮುದೆನೂರು	೧೯	ಶಿಕ್ಷಣ
೩೬.	ಲೋಕೇಶ ಕೆ.ಸೂಗೂರು	೧೮	ಶಿಕ್ಷಣ PUC

೩೭.	ರಾಮಂಜಿನಿ ಕೆ.ಸೂಗೂರು	೩೦	ಪೋಟೋ ಅಂಗಡಿ
೩೮.	ದಾಸಪ್ಪ ಕೆ.ಸೂಗೂರು	೩೧	ಗುತ್ತಿಗೆದಾರ
೩೯.	ಕಾಂತಪ್ಪ ಕೆ.ಸೂಗೂರು	೨೮	ಕಟ್ಟಡ ನಿರ್ಮಾಣ
೪೦.	ತಿಪ್ಪಮ್ಮ ಕೆ.ಸೂಗೂರು	೨೧	ಪದವಿದರೆ ನಿರುದ್ಯೋಗಿ
೪೧.	ಸಿದ್ದಲಿಂಗಪ್ಪ ಎಚ್. ಕೆ.ಸೂಗೂರು	೩೫	ಮೆಟಿಕ್ಯೂಲೇಷ್ ನಿರುದ್ಯೋಗಿ
೪೨.	ಸಿದ್ದಪ್ಪ ಎ. ಕೆ.ಸೂಗೂರು	೨೧	ಕಟ್ಟಡ ಶಿಲ್ಪಿ
೪೩.	ಶಿವದಾಸ ಜಿ. ಕೆ.ಸೂಗೂರು	೪೫	ಶಿಕ್ಷಕ

ಪ್ರಶ್ನಾವಳಿ

೧. ನಿಮ್ಮ ಹೆಸರು ?
೨. ವಯಸ್ಸು ?
೩. ಬೆಡಗು ?
೪. ವೈವಾಹಿಕ ಸ್ಥಿತಿ ?
೫. ಊರು ?
೬. ಮೂಲ ವೃತ್ತಿ ಯಾವುದು ?
೭. ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತೀರ ?
೮. ನಿಮ್ಮಲ್ಲಿ ಎಷ್ಟು ಜನ ಬೆಲ್ದಾರ್/ಮೇಸ್ತ್ರಿಗಳಿದ್ದಾರೆ ?
೯. ಎಷ್ಟು ಮನೆಗಳು ಗುತ್ತಿಗೆ ಹಿಡಿಯುತ್ತೀರ ?
೧೦. ದಿನಕ್ಕೆ ಎಷ್ಟು ಗಂಟೆ ಕೆಲಸ ಮಾಡುತ್ತಾರೆ ?
೧೧. ದಿನಕ್ಕೆ ಎಷ್ಟು ರೂಪಾಯಿ ಕೂಲಿ ಕೊಡುತ್ತೀರಿ ?
೧೨. ಎಷ್ಟು ಜನ ಹೆಲ್ಪರ್‌ಗಳಿದ್ದಾರೆ ?
೧೩. ಗಂಡು ಹೆಲ್ಪರ್ ಎಷ್ಟು ಜನ ?
೧೪. ಗಂಡು ಹೆಲ್ಪರ್‌ಗೆ ಎಷ್ಟು ರೂಪಾಯಿ ಕೂಲಿ ಕೊಡುತ್ತೀರಿ ?
೧೫. ಎಷ್ಟು ಜನ ಹೆಣ್ಣು ಹೆಲ್ಪರ್ ಇದ್ದಾರೆ ?
೧೬. ಅವರಿಗೆ ದಿನಕ್ಕೆ ಎಷ್ಟು ಕೂಲಿ ಕೊಡುತ್ತೀರಿ ?
೧೭. ಒಂದು ವರ್ಷಕ್ಕೆ ಎಷ್ಟು ಕಟ್ಟಡಗಳನ್ನು ಪೂರ್ಣಗೊಳಿಸುತ್ತೀರಿ ?
೧೮. ಕಟ್ಟಡಗಳನ್ನು ಯಾವ ಅಳತೆಯ ಮಾಪಕದಲ್ಲಿ ಗುತ್ತಿಗೆ ಹಿಡಿಯುತ್ತೀರಿ ?
೧೯. ಕಟ್ಟಡದ ಮಾಲಿಕರು ಎಷ್ಟು ದಿನಗಳಿಗೊಮ್ಮೆ ಹಣ ಕೊಡುತ್ತಾರೆ ?
೨೦. ಕಟ್ಟಡ ಕಟ್ಟಲು ಕಲ್ಲುಗಳು ಸ್ವಂತಿಕವೇ ?
೨೧. ಕಟ್ಟಡ ಕಾರ್ಮಿಕರಿಗೆ ಕೊಡುವ ಆದಾಯದ ಮೂಲ ಯಾವುದು ?
೨೨. ಮಾಲಿಕರು ಹಣ ತಡವಾಗಿ ಕೊಡುವುದಾದರೆ ಕಾರ್ಮಿಕರಿಗೆ ಕೊಡುವ ವೇತನ ಹೇಗೆ ಜೋಡಿಸುತ್ತೀರಿ ?
೨೩. ಬ್ಯಾಂಕ್ ಗಳಿಂದ ಸಾಲ ಪಡೆದಿದ್ದಿರಾ ?
೨೪. ಒಂದು ಕಟ್ಟಡಕ್ಕೆ ಆದಾಯ ಎಷ್ಟು ಉಳಿಯುತ್ತದೆ ?
೨೫. ಉಳಿತಾಯವಾಗದಿದ್ದರೆ ಹೇಗೆ ನಿರ್ವಹಿಸುತ್ತೀರಿ ?
೨೬. ಬೇರೆ ಯಾವುದಾದರು ವೃತ್ತಿ ಮಾಡುತ್ತೀರ ?
೨೭. ಎಷ್ಟು ಎಕರೆ ಜಮೀನು ಇದೆ ?
೨೮. ನೀರಾವರಿ ಜಮೀನು ಎಷ್ಟು ಎಕರೆ ?
೨೯. ಬಯಲು ಜಮೀನು ಎಷ್ಟು ಎಕರೆ ?
೩೦. ನಿಮ್ಮ ಜಮೀನಿನ ಗುಣ ಯಾವುದು ?
೩೧. ಕೆರೆ ಬೋರ್‌ವೆಲ್ ಇದೆಯಾ ?
೩೨. ಎಷ್ಟು ಇಂಚು ನೀರು ಬಿಳುತ್ತದೆ ?
೩೩. ಸರ್ಕಾರದ್ದ, ಸ್ವಂತಿಕೆಯಿಂದ ಹಾಕಿಸಿದ್ದ ?
೩೪. ಯಾವ ಬೆಳೆಗಳನ್ನು ಬೆಳೆಯುತ್ತೀರಿ ?

೩೫. ಒಂದು ವರ್ಷಕ್ಕೆ ಫಲ ತೆಗೆಯಲು ಎಷ್ಟು ಹಣ ಹೂಡಿಕೆ ಮಾಡುತ್ತೀರಿ ?
೩೬. ಎಷ್ಟು ಲಾಭ ತೆಗೆಯುತ್ತೀರಿ ?
೩೭. ಕೃಷಿ ಇಲಾಖೆಯ ಸೌಲಭ್ಯ ದೊರಕಿದೆಯ ?
೩೮. ಕೃಷಿ ಇಲಾಖೆಯಲ್ಲಿ ರಸಗೊಬ್ಬರ ಸೌಲಭ್ಯ ಸಿಕ್ಕಿದೆಯ ?
೩೯. ಕೃಷಿ ಇಲಾಖೆಯಲ್ಲಿ ಬಿತ್ತನೆ ಬೀಜ ದೊರಕಿದೆಯ ?
೪೦. ಕೃಷಿ ಮಾರುಕಟ್ಟೆ ಸೌಲಭ್ಯ ಇದೆಯ ?
೪೧. ನಿಮ್ಮ ಬೆಳೆಗೆ ಉತ್ತಮ ಬೆಲೆ ದೊರೆತಿದೆಯ ?
೪೨. ನಿಮ್ಮ ಕೃಷಿಗೆ ಸಂಬಂಧಿಸಿದಂತೆ ಬ್ಯಾಂಕುಗಳಿಂದ ಸಾಲ ಸೌಲಭ್ಯ ದೊರಕಿದೆಯ ?
೪೩. ಕೃಷಿಯಲ್ಲಿ ಆಧುನಿಕ ಯಂತ್ರಗಳ ಬಳಕೆ ಮಾಡುತ್ತೀರ ?
೪೪. ಕೃಷಿಯಿಂದ ನಿಮ್ಮ ಮನೆಯ ಆರ್ಥಿಕ ಅಭಿವೃದ್ಧಿಯಾಗಿದೆಯ ?
೪೫. ಕೃಷಿ ಜೊತೆಗೆ ಇತರೆ ಕೆಲಸಗಳನ್ನು ಮಾಡುತ್ತೀರಾ ?
೪೬. ಕಲ್ಲು ಸೀಳುವಲ್ಲಿ ಆಧುನಿಕ ಯಂತ್ರಗಳ ಬಳಕೆ ಮಾಡುತ್ತೀರ ?
೪೭. ಯಾವ ವಿಧದಲ್ಲಿ ಕಲ್ಲು ಸೀಳುತ್ತೀರಿ ?
೪೮. ಒಂದು ಸೈಜುಕಲ್ಲನ್ನು ಎಷ್ಟು ರೂ ಗೆ ಮಾರಾಟ ಮಾಡುತ್ತೀರಿ ?
೪೯. ಅರಣ್ಯ ಇಲಾಖೆಯಿಂದ ಅನುಮತಿ ಪಡೆದಿರ ?
೫೦. ಬೃಹತ್ತಾದ ಕಲ್ಲಿನ ಕಂಬಗಳನ್ನು ಹೇಗೆ ಎತ್ತಿ ಸಾಗಿಸುತ್ತಿರಿ ?
೫೧. ಅಪಾಯಕಾರಿ ಸಂದರ್ಭಗಳಲ್ಲಿ ನಿಮ್ಮನ್ನು ಹೇಗೆ ರಕ್ಷಿಸಿಕೊಳ್ಳುತ್ತಿರಿ ?
೫೨. ಬಿಂಚೆ/ಜಲ್ಲಿಗಳನ್ನು ಹೊಡೆಯುತ್ತೀರ ?
೫೩. ಬಿಂಚೆ/ಜಲ್ಲಿಗಳನ್ನು ಯಾವ ರೀತಿ ಮಾರಾಟ ಮಾಡುತ್ತೀರಿ ?
೫೪. ಬಿಂಚೆ/ಜಲ್ಲಿ ಹೊಡೆಯುವುದರಿಂದ ವಾರದ ಆದಾಯ ಎಷ್ಟು ?
೫೫. ವಾರದ ಖರ್ಚು ಎಷ್ಟು ?
೫೬. ಪಾಲಿಸಿಗಳನ್ನು ಮಾಡಿಸಿದ್ದೀರ ?
೫೭. ವಾರಕ್ಕೆ ಎಷ್ಟು ಹಣ ಕಟ್ಟುತ್ತೀರ ?
೫೮. ನಿಮ್ಮ ಮನೆಯಲ್ಲಿ ಎಷ್ಟುಜನ ಶಿಕ್ಷಣವನ್ನು ಪಡೆದಿದ್ದಾರೆ ?
೫೯. ನೌಕರಿಯಲ್ಲಿ ಇದ್ದಾರ ?
೬೦. ಸರ್ಕಾರಿ ನೌಕರಿ ಅಥವಾ ಖಾಸಗಿ ನೌಕರಿ ?
೬೧. ತಿಂಗಳಿಗೆ ಸಂಬಳ ಎಷ್ಟು ?
೬೨. ತಿಂಗಳಿಗೆ ಮನೆಗೆ ಎಷ್ಟು ರೂಪಾಯಿ ಕೊಡುತ್ತಾರೆ ?
೬೩. ವ್ಯಾಪಾರ ಅಥವಾ ಕುರಿ ಸಾಕಾಣಿಕೆ ಮಾಡುತ್ತೀರ ?
೬೪. ಎಷ್ಟು ವರ್ಷಗಳಿಂದ ಈ ವೃತ್ತಿಯಲ್ಲಿ ತೊಡಗಿದ್ದಿರಿ ?
೬೫. ದೊಡ್ಡ ವ್ಯಾಪಾರಿಗಳ ಅಥವಾ ಸಣ್ಣ ವ್ಯಾಪಾರಿ ?
೬೬. ದಿನಕ್ಕೆ ಎಷ್ಟು ವ್ಯಾಪಾರ ಆಗುತ್ತೆ ?
೬೭. ಎಷ್ಟು ರೂ.ಉಳಿತಾಯವಾಗುತ್ತದೆ ?
೬೮. ವ್ಯಾಪಾರ ಮಾಡಲು ಬ್ಯಾಂಕ್‌ಗಳಿಂದ ಎಷ್ಟು ಸಾವಿರ ಸಾಲ ಪಡೆದಿದ್ದೀರಿ ?
೬೯. ಸಾಲದ ಹಣಕ್ಕೆ ತಿಂಗಳಿಗೆ ಬಡ್ಡಿ ಎಷ್ಟು ?
೭೦. ಬ್ಯಾಂಕ್‌ನಿಂದ ರಿಯಾಯಿತಿ ಸಿಕ್ಕಿದೆಯಾ ?
೭೧. ವ್ಯಾಪಾರದಿಂದ ಉಳಿತಾಯವಾಗುತ್ತ ?

೭೨. ಪಶು ಸಂಪತ್ತು ಇದೆಯಾ ?
೭೩. ಯಾವ ಪಶು ಸಂಪತ್ತು ಇದೆ ?
೭೪. ಎಷ್ಟು ಇದ್ದಾವೆ ?
೭೫. ಎಷ್ಟು ವರ್ಷಗಳಿಂದ ಪಶುಪಾಲನೆ ಮಾಡುತ್ತೀರಿ ?
೭೬. ಪಶುಪಾಲನೆ ಮಾಡಲು ಸರ್ಕಾರದಿಂದ ಸೌಲಭ್ಯ ದೊರೆತಿದೆಯ ?
೭೭. ಎಷ್ಟು ಮರಿಗಳನ್ನು ಮಾರಾಟ ಮಾಡುತ್ತೀರ ?
೭೮. ಒಂದು ವರ್ಷಕ್ಕೆ ಖರ್ಚು ಎಷ್ಟು ?
೭೯. ಒಂದು ವರ್ಷಕ್ಕೆ ಎಷ್ಟು ಆದಾಯ ?
೮೦. ದಿನಗೂಲಿ ಮಾಡುತ್ತೀರ ?
೮೧. ಯಾವ ಕೆಲಸಕ್ಕೆ ಹೋಗುತ್ತೀರಿ ?
೮೨. ಎಷ್ಟು ಗಂಟೆ ಕೆಲಸ ಮಾಡುತ್ತೀರಿ ?
೮೩. ಒಂದು ದಿನಕ್ಕೆ ಎಷ್ಟು ರೂ. ಕೂಲಿ ಕೊಡುತ್ತಾರೆ ?
೮೪. ಎಷ್ಟು ದಿನಗಳಿಗೊಮ್ಮೆ ಕೂಲಿ ಕೊಡುತ್ತಾರೆ ?
೮೫. ದಿನದ ಆಹಾರ ಪದ್ಧತಿ ಯಾವುದು ?
೮೬. ಆಹಾರಕ್ಕಾಗಿ ಎಷ್ಟು ರೂ. ವೆಚ್ಚವಾಗುತ್ತೆ ?
೮೭. ಉತ್ತಮ ಜೀವನ ನಡೆಸಲು ಸಾಧ್ಯಾನ ?
೮೮. ಎಂ.ಜಿ.ಎನ್.ಆರ್.ಇ.ಜಿ.ಎ ಬಗ್ಗೆ ಮಾಹಿತಿ ಇದೆಯಾ ?
೮೯. ಜಾಬ್ ಕಾರ್ಡ್ ಮಾಡಿಸಿದ್ದೀರಾ ?
೯೦. ಎಂ.ಜಿ.ಎನ್.ಆರ್.ಇ.ಜಿ.ಎ ಕೆಲಸಕ್ಕೆ ಹೋಗುತ್ತಿರಾ ?
೯೧. ಎಷ್ಟು ಗಂಟೆ ಕೆಲಸ ಮಾಡುತ್ತೀರಿ ?
೯೨. ದಿನಕ್ಕೆ ಎಷ್ಟು ರೂ. ಕೂಲಿ ಕೊಡುತ್ತಾರೆ ?
೯೩. ಎಷ್ಟು ವಾರಗಳಿಗೊಮ್ಮೆ ಕೂಲಿ ಕೊಡುತ್ತಾರೆ ?
೯೪. ಈ ಯೋಜನೆ ಅಡಿಯಲ್ಲಿ ಎಷ್ಟು ದಿನ ಕೆಲಸ ಕೊಟ್ಟಿದ್ದಾರೆ ?
೯೫. ವೃತ್ತಿ ಬಯಸಿ ವಲಸೆ ಹೋಗುತ್ತೀರಾ ?
೯೬. ಎಷ್ಟು ದಿನಗಳವರೆಗೆ ವಲಸೆ ಹೋಗುತ್ತೀರಾ ?
೯೭. ನಿಮಗೆ ಪಡಿತರ ಚೀಟಿ ಇದೆಯಾ ?
೯೮. ಕಟ್ಟಡ ಕಾರ್ಮಿಕ ಪರವಾನಿಗೆ ಪಡೆದಿದ್ದೀರಾ ?
೯೯. ಈ ಇಲಾಖೆಯಿಂದ ಸೌಲಭ್ಯ ದೊರೆತಿದೆಯಾ ?
೧೦೦. ಗೃಹೋಪಯೊಗಿ ಸಲಕರಣೆಗಳನ್ನು ಮಾಡುತ್ತಿರಾ ?

ಸಿರುಗುಪ್ಪ ತಾಲೂಕು ನಕ್ಷೆ



ಕೆ.ಸೂಗೂರು ನಕ್ಷೆ



Imagery ©2016 CNES / Astrium, Cnes/Spot Image, DigitalGlobe, Landsat, Map data ©2016 Google 1 km

ಛಾಯಾಚಿತ್ರಗಳು



ಬಿಂತೆ ಶಾಸ್ತ್ರೀಯ ಮಾಹಿತಿದಾರರು



ಮಾಹಿತಿದಾರರಿಗೆ ಸಂದರ್ಶನ



ಜೋಗಿ ಸಮುದಾಯದ ಮಹಿತಿ ಕ್ಷೇತ್ರ ಬಗ್ಗೆ ಸಂದರ್ಶನ



ಕೃಷಿಯಲ್ಲಿ ಕೆಲಸ ಮಾಡುವ ಮಾಹಿತಿದಾರರು.



ಕುರಿಕಾಯುವ ಭೋವಿ ಸಮುದಾಯದ ಜನರು



ಕಟ್ಟಡ ಕಾರ್ಮಿಕರಾಗಿ ಬೋವಿ ಸಮುದಾಯ



ಕಿರಾಣಿ ವ್ಯಾಪಾರದಲ್ಲಿ ನಿರತರಾಗಿರುವ ವಡ್ಡ



ದ್ವಾರಬಾಗಿಲು ಮಾಡುವ ಬೋವಿ ಸಮುದಾಯದ ಜನರು




ಮನೆ ಕಟ್ಟುವ ಕೂಲಿ ಸಮುದಾಯದ ಜನರು



ಕಟ್ಟಡ ಮಾಲೀಕನೊಂದಿಗೆ ಸಂದರ್ಶನೆ



ವ್ಯಾಪಾರ ಮಾಡುವ ಕೂಲಿ ಸಮುದಾಯದ
ಮಹಿಳೆ.



ಮಾಹಿತಿದಾರರೊಡನೆ ಸಂದರ್ಶನೆ

ooo

ಬುಡಕಟ್ಟು ಅಧ್ಯಯನ ವಿಭಾಗ